Registered with the Registrar of Newspapers in India Under No. 50622/86
'Prasada' Bi-Monthly, Vol. 34 Issue No. 2, March-April 2019



ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ದಿವ್ಯ ರಥೋತ್ಸವ (3.2.2019)

ಬಿಡಿ ಪ್ರತಿ: ರೂ. 10

e-mail: jsspublications@gmail.com * www.jssonline.org

# ಪ್ರಸಾದ

ದ್ವೈಮಾಸಿಕ

ಸಂಪುಟ 34 ಸಂಚಿಕೆ 2 ಮಾರ್ಚ್–ಏಪ್ರಿಲ್ 2019



ಜೆಎಸ್‌ಎಸ್ ಮಹಾವಿದ್ಯಾಪೀಠ
ಮೈಸೂರು

# ಪ್ರಸಾದ

**ಸಂಪುಟ 34 : ಸಂಚಿಕೆ 2** **ಮಾರ್ಚ್-ಏಪ್ರಿಲ್ 2019**

ಸಂಪಾದಕ

**ಪ್ರೊ. ಮಲೆಯೂರು ಗುರುಸ್ವಾಮಿ**

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004



**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ ಪರಮಪೂಜ್ಯ ಲಿಂಗೈಕ್ಯ

**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು

ಡಾ. ಸಿ.ಜಿ. ಬೆಟಸೂರಮಠ

ಶ್ರೀ ಎಸ್.ಪಿ. ಮಂಜುನಾಥ್

ಡಾ. ಎನ್.ಎಸ್. ತಾರಾನಾಥ

ಡಾ. ಓ.ಎಲ್. ನಾಗಭೂಷಣಸ್ವಾಮಿ

ಡಾ. ಎನ್.ಎಂ. ತಳವಾರ್

ಡಾ. ಪ್ರೀತಿ ಶುಭಚಂದ್ರ

ಪ್ರೊ. ಮಲೆಯೂರು ಗುರುಸ್ವಾಮಿ (ಸಂಪಾದಕ)

---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

**ಮುಖಪುಟ ಚಿತ್ರ**

ಶಿವಮೊಗ್ಗದಲ್ಲಿ ನಡೆದ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1059ನೆಯ ಜಯಂತಿ ಮಹೋತ್ಸವದ ಉದ್ಘಾಟನೆ: ಚಿತ್ರದಲ್ಲಿ ಶ್ರೀ ಬಿ.ಎಸ್. ಯಡಿಯೂರಪ್ಪ, ಡಾ. ಶ್ರೀ ವೀರೇಂದ್ರ ಹೆಗ್ಗಡೆ, ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳು, ಜಗದ್ಗುರುಗಳು, ತರಳಬಾಳು ಜಗದ್ಗುರುಗಳು, ಆನಂದಪುರಂ ಶ್ರೀ ಮುರುಘಾ ಮಠದ ಜಗದ್ಗುರುಗಳವರು (4.1.2019)

# ಪರಿವಿಡಿ

ಸಂಪಾದಕೀಯ 5

ಗುರುವಾಣಿ 7

ನಡೆಯೊಳಗೆ ನುಡಿಯ ಪೂರೈಸುವುದೇ ಸುಭಾಷೆ 9
**ಸ.ರಾ. ಸುಳಕೂಡೆ**

'ಸಿದ್ಧಾಂತ ಶಿಖಾಮಣಿ' ಮತ್ತು 'ಏಕೋತ್ತರ ಶತಸ್ಥಲ' : ಸಾಹಿತ್ಯ ಸಮೀಕ್ಷೆ 21
**ಡಾ. ಎಸ್.ಆರ್. ಗುಂಜಾಳ**

ಹಿಂದಿಯಲ್ಲಿ ಸಂತ ಸಾಹಿತ್ಯ 33
**ಡಾ. ತಿಪ್ಪೇಸ್ವಾಮಿ**

ಬಾಹ್ಯಾಕಾಶ ತಂತ್ರಜ್ಞಾನ ಮತ್ತು ಸಾಮಾಜಿಕ ಅನ್ವಯ 46
**ಆರ್.ಎಸ್. ಪೂರ್ಣಾನಂದ**

ವಾರ್ತಾವಿಹಾರ 49

ಭಕ್ತಿ-ಜ್ಞಾನ-ವೈರಾಗ್ಯ ತಪ್ಪದೆ
ಷಟ್‌ಸ್ಥಲಮಾರ್ಗದ ಇರವು ತಪ್ಪದೆ
ಜ್ಞಾನ ಕ್ರಿಗಳಲ್ಲಿ ಪ್ರೇಮ ತಪ್ಪದೆ
ಶರಣಸತಿ-ಲಿಂಗಪತಿಯಾದ ಭಾವ ತಪ್ಪದೆ
ಇಷ್ಟ-ಪ್ರಾಣ-ಭಾವಲಿಂಗದ ಪೂಜೆ ತಪ್ಪದೆ
ಷಡ್‌ವಿಧ ಲಿಂಗಂಗಳಲ್ಲಿ ಅರ್ಪಿತಾವಧಾನ ತಪ್ಪದೆ
ತೀರ್ಥಪ್ರಸಾದದಲ್ಲಿ ಒಯ್ಯಾರ ತಪ್ಪದೆ
ಮಂತ್ರಂಗಳಂ ಒಡವೆರೆದು ಲಿಂಗಸಂಧಾನ ತಪ್ಪದೆ,
ಹಿಡಿದ ವ್ರತಂಗಳಲ್ಲಿ ನಿಷ್ಠೆ ತಪ್ಪದೆ–
ನಡೆದಂತೆ ನುಡಿದು–ನುಡಿದಂತೆ ನಡೆವ ಭಾವ ತಪ್ಪದೆ,
ದ್ವೈತಾದ್ವೈತವ ನೂಂಕಿ (=ತಿರಸ್ಕರಿಸಿ)–
ಬರಿಯ ವೈರಾಗ್ಯವನೊಪ್ಪುಗೊಳ್ಳದೆ,
ನಿಜವಿರಕ್ತಿಯ ಹೊಲಬುದಪ್ಪದೆ
ಪಂಚೈವರೊಂದಾಗಿ ಸದ್ಯೋನ್ಮುಕ್ತಿಗೆ ಮನವನಿಟ್ಟು–
ಅರ್ತಿಯಿಂದಾಚರಿಸುವರಯ್ಯ ನಿಮ್ಮ ಶರಣರು
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ.

- ಘನಲಿಂಗದೇವರು

**'ಪ್ರಸಾದ' ಚಂದಾ ವಿವರ**

ವಾರ್ಷಿಕ ರೂ. 100 * ದಶವಾರ್ಷಿಕ ರೂ. 500

# ಸಂಪಾದಕೀಯ

'ಪ್ರಸಾದ' ಪತ್ರಿಕೆ ಸುಮಾರು ಐದು ದಶಕಗಳಿಂದ ನಿರಂತರವಾಗಿ ಪ್ರಕಟವಾಗುತ್ತ ಬರುತ್ತಿರುವುದು ಸರ್ವವಿದಿತ. ಸಂಚಿಕೆಗಳು ತುಂಬ ಚೆನ್ನಾಗಿ ಮೂಡಿಬರುತ್ತಿವೆ ಎನ್ನುವ ಮಾತುಗಳು ಓದುಗ ವಲಯದಿಂದ ಕೇಳಿ ಬರುತ್ತಿದ್ದರೂ, ಸಂಪಾದಕನಾಗಿ ನಾನು ಈ ಮಾತುಗಳನ್ನು ಪ್ರೋತ್ಸಾಹದಾಯಕ ನೆಲೆಯಲ್ಲಿ ಸ್ವೀಕರಿಸುತ್ತಾ, ಇದು ಮತ್ತಷ್ಟು ಮೈದುಂಬಿಕೊಂಡು ಪ್ರಕಟವಾಗುವ ಸಾಧ್ಯತೆಗಳತ್ತ ಚಿಂತಿಸುತ್ತಲೇ ಇರುತ್ತೇನೆ.

ಧರ್ಮಪೀಠಗಳ ಮೂಲಕ ಪ್ರಕಟವಾಗುವ ಇಂತಹ ಪತ್ರಿಕೆಗಳಿಗೆ ಒಂದು ಧಾರ್ಮಿಕ ಮತ್ತು ಸಾಂಸ್ಕೃತಿಕ ಚೌಕಟ್ಟು ಇದ್ದೇ ಇರುತ್ತದೆ. ಈ ಚೌಕಟ್ಟಿನಾಚೆಗೂ ವಿಹರಿಸುವ ಚಿಂತನೆಗಳು ಎಷ್ಟೇ ವಿಯತ್‌ಗಾಮಿಯಾದರೂ ಸುತ್ತಿ ಬಳಸಿ ಮತ್ತೆ ಈ ಚೌಕಟ್ಟಿನ ಕಕ್ಷೆಯೊಳಗೇ ವಿಶ್ರಮಿಸಬೇಕಾಗುತ್ತದೆ. ಈ ಇತಿ-ಮಿತಿಗಳ ಸ್ಪಷ್ಟ ಅರಿವು ಇರುವವರು ಮಾತ್ರ ಇಂತಹ ಪತ್ರಿಕೆಗಳ ಲೇಖಕರಾಗಿರುತ್ತಾರೆ. ಬಳಸುವ ಭಾಷೆಯ ನುಡಿಕಟ್ಟುಗಳು, ಪರಿಭಾಷೆ, ಉಪಮಾನ ಉಪಮೇಯಗಳು, ಪೌರಾಣಿಕ ಅಂಶಗಳನ್ನು ಚಾರಿತ್ರಿಕ ಘಟನೆಗಳ ಜೊತೆ ಸಂಲಗ್ನ ಮಾಡಿಸುವ ವಿಶೇಷ ತಂತ್ರಗಾರಿಕೆ – ಇವೆಲ್ಲ ಧಾರ್ಮಿಕ ಸಾಹಿತ್ಯದ ಅನಿವಾರ್ಯ ಅಂಶಗಳು. ಈ ಸಂಗತಿಗಳನ್ನು ವಿವರಿಸಿ, ವಿಶ್ಲೇಷಿಸುವವರು ಹೆಚ್ಚಿನ ಸಂದರ್ಭಗಳಲ್ಲಿ ಆಯಾ ಧರ್ಮಕ್ಕೆ ಸೇರಿದವರೇ ಆಗಿರುವುದರಿಂದ ಅಲ್ಲಿ ಸಹಜವಾಗಿಯೇ ಒಂದು ಹಂತದ 'ಭಾವುಕತೆ'ಯೂ ಅಂತರ್ನಿಹಿತವಾಗಿರುವುದು ವಾಸ್ತವ ಸಂಗತಿ. ಕೆಲವರಿಗೆ ಈ ವಿಷಯದಲ್ಲಿ ಅನ್ಯಧರ್ಮೀಯರಿಗೆ ಇಲ್ಲದೆ ಇರುವ ಅರ್ಹತೆ ತಮಗೆ 'ಮಾತ್ರ' ಇದೆ ಎನ್ನುವ ಹುಸಿ ಅಹಮಿಕೆಯೂ ಇರುತ್ತದೆ. ಇಂತಹ ನಂಬಿಕೆಗಳನ್ನು ತಮಗರಿವಿಲ್ಲದೆ ತಮ್ಮೊಳಗೆ ತುಂಬಿಕೊಂಡಿರುವವರ ಬಹುಪಾಲು ಬರಹಗಳು ಚರ್ವಿತಚರ್ವಣವಾಗಿದ್ದು, ಒಳನೋಟಗಳ ಕೊರತೆಯಿಂದ ಬಳಲುತ್ತವೆ; ಆಯಾ ವಿಷಯದ ಪ್ರಾಥಮಿಕ ಮಾಹಿತಿಗಳನ್ನಷ್ಟೇ ಒದಗಿಸುವ ಶಿಥಿಲ ಬರಹಗಳಾಗುತ್ತವೆ.

ಬಹುಪಾಲು ಬರಹಗಾರರು ತಾವು ಹೇಳಬೇಕಾದ ನಿರ್ದಿಷ್ಟ ಅಂಶಗಳ ಹತ್ತಿರಕ್ಕೆ ಬರುವವರೆಗೆ ಮೂರನೇ ಒಂದು ಭಾಗದ ಲೇಖನ ಈ ತೆರನ ವಿವರಗಳಿಗೆ ಮೀಸಲಾಗಿ ಬಿಡುತ್ತದೆ. ಇಂತಹ ವಿವರಗಳು ಬಸವಾದಿ ಶರಣರ ಬಗ್ಗೆ ಏನೇನೂ ತಿಳಿಯದ ಸಮುದಾಯದ ಮುಂದೆ ನಿಂತು ಮಾತನಾಡುವಾಗ, ಅಥವಾ ಅಂತಹವರಿಗಾಗಿ

ಬರೆಯುವಾಗ ಅನಿವಾರ್ಯವಾಗುತ್ತವೆಯೇ ಹೊರತು, 'ಪ್ರಸಾದ'ದಂತಹ ಪತ್ರಿಕೆಗಳ ಓದುಗ ವರ್ಗಕ್ಕಂತೂ ಅಲ್ಲ.

ಇಂದಿನ ಓದುಗರು ಹಿಂದಿನ ಓದುಗರಂತಲ್ಲ ಎನ್ನುವುದನ್ನು ನಾವು ಬಹಳ ಗಂಭೀರವಾಗಿ ಪರಿಗಣಿಸಬೇಕಾಗಿದೆ. ಆಧುನಿಕ ವಿದ್ಯಾಭ್ಯಾಸ, ಬಹುಸಂಸ್ಕೃತಿಗಳ ಪರಿಚಯ, ಜಾಗತೀಕರಣದ ವೈವಿಧ್ಯಕ್ಕೆ ತೆರೆದುಕೊಂಡಿರುವ ಯುವ ಪೀಳಿಗೆಯ ಬೌದ್ಧಿಕ ಪ್ರಖರತೆ, ನಿಶಿತಮತಿ ನಿಜಕ್ಕೂ ಒಂದು ಅದ್ಭುತ. ಧರ್ಮಸಂಬಂಧಿ ವಿಷಯಗಳನ್ನು ಅವರು ಯಾವ ಪೂರ್ವಗ್ರಹವೂ ಇಲ್ಲದ ಪ್ರಾಂಜಲ ಮನಸ್ಸಿನಿಂದ ಪರಿಭಾವಿಸುತ್ತಾರೆ. ಅವರು ಕೆಲವೊಮ್ಮೆ ಕೇಳುವ ಸಣ್ಣಸಣ್ಣ(?) ಪ್ರಶ್ನೆಗಳಿಗೂ ನಾವು ಉತ್ತರಿಸಲಾಗದ ಇಕ್ಕಟ್ಟಿನ ಸ್ಥಿತಿ ಖಂಡಿತ ಇದೆ. ಹಿರಿಯ ನಾಗರಿಕರೆನಿಸಿಕೊಂಡವರಿಗೆ ಧಾರ್ಮಿಕ ವಿಷಯಗಳು ಭಾವನಾತ್ಮಕ ವಿಷಯವಾಗಿದ್ದರೆ, ಯುವಜನರಿಗೆ ಅದು ತಾರ್ಕಿಕ ಆಯಾಮದಲ್ಲಿ ಶೋಧಿಸಲೇಬೇಕಾದ ಅಂಶವಾಗಿರುತ್ತದೆ. ಬುದ್ಧಿಭಾವಗಳ ಬೆಸುಗೆಯ 'ಹದ' ಯಾವುದು ಎನ್ನುವುದು ಅವರ ನಿಜದ ನೆಲೆಯಾಗಿರುತ್ತದೆ. ಉಘೇ... ಉಘೇ ಎನ್ನುವ ಭಕ್ತಸ್ಥಿತಿಯ ಅತ್ಯುತ್ಸಾಹದ ಉದ್ಗಾರವನ್ನು ಅವರು ಮೌನದಲ್ಲಿ ಕೇಳಿಸಿಕೊಂಡು ಅನುಸಂಧಾನಿಸಲು ಬಯಸುತ್ತಾರೆ. ಅಂತಹವರಿಗೆ ನಮ್ಮ ಮೇಲುಮೇಲಿನ ತೆಳು ನಿರ್ವಚನಗಳು ಸಪ್ಪೆಯಾಗಿ ಕಾಣುತ್ತವೆ. ಬಸವಣ್ಣನವರಿಗಿಂತ ಅಲ್ಲಮಪ್ರಭುಗಳು ಚಿಂತಕರನ್ನು ಹೆಚ್ಚುಹೆಚ್ಚು ಕಾಡುತ್ತಿರುವುದು ಈ ಕಾರಣಕ್ಕಾಗಿಯೇ. ಏಕೆಂದರೆ ಅಲ್ಲಮ, ಯುಗದ ವೈಚಾರಿಕತೆಯ ತುರೀಯ ಸ್ಥಿತಿಯ ಸಂಕೇತವಾಗಿದ್ದ. 12ನೆಯ ಶತಮಾನವು ಯುಗದ ಉತ್ಸಾಹವಾಗಿದ್ದ ಬಸವಣ್ಣನ ಅಂತಃಕರಣ, ಪ್ರಖರ ದಾರ್ಶನಿಕಪ್ರಜ್ಞೆಯಾಗಿದ್ದ ಅಲ್ಲಮನ 'ಬಯಲ ಅರಿವು' ಹಾಗೂ 'ಕಾಯಕಸಮುದಾಯದ ಸಮಷ್ಟಿಪ್ರಜ್ಞೆ'ಗಳ ಕೂಡಲಸಂಗಮವಾಗಿತ್ತು.

ನಮ್ಮ ಪತ್ರಿಕೆಗಳು ಇಂಥ ವೈಚಾರಿಕ 'ಸಂಗಮ'ಕ್ಕೆ ಸಾಕ್ಷೀಪ್ರಜ್ಞೆಯಾಗಬೇಕು. ಇದುವರೆಗೆ ಪತ್ರಿಕೆಯನ್ನು ಪೋಷಿಸಿಕೊಂಡು ಬಂದಿರುವ ಗೌರವಾನ್ವಿತ ಲೇಖಕರು ಈ ನಿಟ್ಟಿನಲ್ಲಿ ಚಿಂತಿಸಿ ತಮ್ಮ ವಿಚಾರಗಳಿಗೆ ವಿನೂತನ ಅಕ್ಷರರೂಪ ಕೊಡಬೇಕೆನ್ನುವುದು ನನ್ನ ಬಯಕೆ. ಕೆಲವೊಮ್ಮೆ ಮೌಲಿಕ ಲೇಖನಗಳ ಕೊರತೆಯಿಂದ ಪತ್ರಿಕೆಯ ಪ್ರಕಟಣೆ ವಿಳಂಬವಾಗುತ್ತಿದೆ. ಅಂತೆಯೇ ಈ ಸಂಚಿಕೆಯೂ ಒಂದು ತಿಂಗಳು ತಡವಾಗಿ ತಮ್ಮ ಕೈಸೇರುತ್ತಿದೆ. ಓದುಗರು ಅದಕ್ಕಾಗಿ ಕ್ಷಮಿಸಬೇಕು. ಹಾಗೆಯೇ ನಮ್ಮ 'ಬರಹಗಾರರ ಬಳಗ' ನಮ್ಮೊಡನೆ ಸ್ಪಂದಿಸಬೇಕಾಗಿ ವಿನಂತಿ.

**ಮಲೆಯೂರು ಗುರುಸ್ವಾಮಿ**
ಸಂಪಾದಕ

# ಗುರುವಾಣಿ

ಶ್ರೀ ಹೇವಿಳಂಬಿ ಸಂವತ್ಸರ ಮುಗಿದು ಶ್ರೀ ವಿಕಾರಿ ಸಂವತ್ಸರ ಪ್ರಾರಂಭವಾಗಿದೆ. ಸಂವತ್ಸರದ ಪ್ರಾರಂಭದ ದಿನವನ್ನು ಭಾರತೀಯರು ಪರಂಪರಾಗತವಾಗಿ ಯುಗಾದಿ ಎಂದು ಕರೆದು ಸಂಭ್ರಮದಿಂದ ಆಚರಿಸುತ್ತ ಬಂದಿದ್ದಾರೆ. ಇದು ಕೇವಲ ಒಂದು ವ್ಯಾವಹಾರಿಕ ಕಾರಣದ ವರ್ಷಾರಂಭವಲ್ಲ. ಅಥವಾ ಶಾಲಿವಾಹನ, ವಿಕ್ರಮ, ಕ್ರಿಸ್ತ ಮುಂತಾದ ಚಾರಿತ್ರಿಕ ವ್ಯಕ್ತಿಗಳ ಪ್ರಭಾವಳಿಯ ಹಿನ್ನೆಲೆಯಲ್ಲಿ ಪ್ರಚಲಿತವಾದ ವರ್ಷಾರಂಭವೂ ಅಲ್ಲ. ಭಾರತೀಯರು ಆಚರಿಸುವ ಯುಗಾದಿಯಲ್ಲಿ ಇಡೀ ಸೃಷ್ಟಿಗೆ ಸಂಬಂಧಿಸಿದ ಅನೇಕ ಅಂಶಗಳು ಸಮ್ಮಿಲನಗೊಂಡಿವೆ.

ಖಭೌತವಿಜ್ಞಾನ (Astro Physics) ಎನ್ನುವುದು ಇನ್ನೂ ಶೈಶವಾವಸ್ಥೆಯಲ್ಲಿ ಇದ್ದ ಕಾಲದಲ್ಲಿಯೇ ನಮ್ಮ ಆರ್ಷೇಯರು ಗ್ರಹತಾರೆನೀಹಾರಿಕೆಗಳ ಬಗ್ಗೆ ಚಿಂತಿಸಿದ್ದು; ನಕ್ಷತ್ರ, ರಾಶಿ, ಸೂರ್ಯೋದಯ - ಸೂರ್ಯಾಸ್ತ, ಅಮಾವಾಸ್ಯೆ - ಹುಣ್ಣಿಮೆ, ಗ್ರಹಣ ಗಳು; ಕೋಟಿ ಕೋಟಿ ಜ್ಯೋತಿರ್ವರ್ಷಗಳಾಚೆ ಇರುವ ಆಕಾಶಕಾಯಗಳನ್ನು ಕುರಿತ ವಿಶ್ಲೇಷಣೆ; ಬದಲಾದ ಪ್ರತಿ ಸಂವತ್ಸರದ ಕಾಲಮಾನದಲ್ಲಿ ಘಟಿಸುವ ಸೃಷ್ಟಿಯ ಚಲನವಲನಗಳು, ಒಂದು ಆಕಾಶಕಾಯದ ಮೇಲೆ ಮತ್ತೊಂದರ ಆಕರ್ಷಣೆ, ವಿಕರ್ಷಣೆ, ಈ ಸಂಕೀರ್ಣ ಪ್ರಕ್ರಿಯೆಗಳಾದ ಜೀವಜಾಲದ ಮೇಲೆ ಉಂಟಾಗುವ ಪ್ರಭಾವ ಇಂತಹ ಹಲವಾರು ವಿಷಯಗಳ ಬಗ್ಗೆ ನಿಖರವಾದ ಮಾಹಿತಿಯನ್ನು ಕೊಡುತ್ತಿರುವುದು ನಿಜಕ್ಕೂ ಅಚ್ಚರಿ ಮೂಡಿಸುತ್ತದೆ. ಇವೆಲ್ಲವೂ ಸಾವಿರಾರು ವರ್ಷಗಳ ಕಾಲ ಇಡೀ ಸೃಷ್ಟಿಯನ್ನೇ ಒಂದು ಪ್ರಯೋಗಾಲಯವನ್ನಾಗಿ ಪರಿಭಾವಿಸಿ ಒಂದು ರೀತಿಯ 'ಬೌದ್ಧಿಕ ಕುತೂಹಲದ ಹುಚ್ಚು' ಹಿಡಿಸಿಕೊಂಡು ಹೊರಟವರು ಕಂಡುಕೊಂಡ ಸತ್ಯಗಳಾಗಿವೆ.

ಈ ಕಾರಣಕ್ಕಾಗಿಯೇ ವೇದ ಸಾಹಿತ್ಯದ ಷಡಂಗಗಳಲ್ಲಿ ಈ ಜ್ಯೋತಿರ್ವಿಜ್ಞಾನಕ್ಕೆ ಒಂದು ವಿಶೇಷ ಸ್ಥಾನವಿದೆ. ಸ್ಥೂಲವಾಗಿ ಜಡ ಮತ್ತು ಚೇತನ ಎಂದು ವರ್ಗೀಕರಿಸಲ್ಪಡುವ ವಸ್ತುಗಳು ಅತ್ಯಂತ ಎತ್ತರದ ಸ್ತರದಲ್ಲಿ ಒಂದೇ ಆಗಿರುತ್ತವೆ (ತೆಗೆ ಜಡವೆಂಬುದದು ಬರಿ ಸುಳ್ಳು! - ಕುವೆಂಪು) ಹುಣ್ಣಿಮೆಯ ದಿನ ಸಮುದ್ರ ಉಕ್ಕುತ್ತದೆ, ಅಮಾವಾಸ್ಯೆಯ ದಿನ ಕೆಲವರು ವಿಚಿತ್ರವಾಗಿ ವರ್ತಿಸುತ್ತಾರೆ ಎನ್ನುವುದು ಜನಮಾನಸದಲ್ಲಿ ಕೇಳಿಬರುವ ಕೌತುಕದ, ವಿಜ್ಞಾನವು ನಿರಾಕರಿಸಲಾಗದ ಸಂಗತಿ.

ಧ್ರುವಪ್ರದೇಶಗಳಲ್ಲಿ ವಸ್ತುಗಳ ತೂಕ ಕಡಿಮೆ ಇರುತ್ತದೆ ಎನ್ನುತ್ತಾರೆ. ಚಂದ್ರನ ಮೈಮೇಲೆ ನಡೆದಾಡಿದವರ ಅನುಭವಗಳೂ ಇದೇ ಆಗಿದೆ. ಇವೆಲ್ಲ ಮೇಲುನೋಟಕ್ಕೆ ವಿಚಿತ್ರವೆನಿಸಿದರೂ ಸತ್ಯ ಸಂಗತಿಗಳೇ ಆಗಿವೆ.

ಈ ಆಕಾಶಕಾಯಗಳ ಕ್ರಿಯೆ-ಪ್ರಕ್ರಿಯೆಗಳ ನಡುವೆ ನಡೆಯುವ ಕಾರ್ಯಕಾರಣ ಗಳನ್ನು ಭಾರತೀಯ ಜ್ಯೋತಿರ್ವಿಜ್ಞಾನ ನಿಖರವಾಗಿ ತಿಳಿಸುತ್ತದೆ. ಇಂತಹ ಸಂಶೋಧನೆಗಳು ಗ್ರೀಸ್, ಈಜಿಪ್ಟ್, ಜಪಾನ್ ಮುಂತಾದ ದೇಶಗಳಲ್ಲಿಯೂ ಹಿಂದೆ ನಡೆದಿರುವುದನ್ನು ನೋಡಬಹುದು. ಅವರುಗಳೂ ಸಹ ಅವರದೇ ಆದ ತಾರ್ಕಿಕ ಹಿನ್ನೆಲೆಯಲ್ಲಿ ಸಂವತ್ಸರಗಳನ್ನು ವಿಭಜಿಸುತ್ತಾರೆ. ಅಂತೂ ಈ ವಿಶ್ವ ಅನೇಕ ನಿಗೂಢಗಳ ಮೊತ್ತವಾಗಿದ್ದು, ಮನುಷ್ಯನ ಬುದ್ಧಿಗೆ ನಿರಂತರ ಸವಾಲನ್ನು ಒಡ್ಡುತ್ತ ಬಂದಿದೆ. ಹೀಗಿದ್ದೂ ಮನುಷ್ಯ ತಾನು ವಾಸಿಸುವ ಭೂಭಾಗದ ವೈಶಿಷ್ಟ್ಯಕ್ಕೆ ತಕ್ಕಂತೆ ತನ್ನ ಸುತ್ತಲಿನ ಎಲ್ಲ ವಿಶ್ವವ್ಯಾಪಾರವನ್ನು ಸಮೀಕರಿಸಿಕೊಂಡು ಒಂದು ಭಾವನಾತ್ಮಕ ಆವರಣವನ್ನು ಸೃಷ್ಟಿಸಿಕೊಂಡು ನೆಮ್ಮದಿಯನ್ನು ಕಂಡುಕೊಳ್ಳುತ್ತ ಬಂದಿದ್ದಾನೆ.

ಬಹುತೇಕ ಯಾವುದೇ ಸಂಘರ್ಷಕ್ಕೆಡೆ ಇಲ್ಲದಂತೆ ಶತಶತಮಾನಗಳಿಂದಲೂ ತನ್ನ ಬದುಕನ್ನು ರೂಪಿಸಿಕೊಂಡಿದ್ದಾನೆ. ಕೆಲವೊಮ್ಮೆ ಅವು ಸಾಮಾನ್ಯರ ಸ್ತರದಲ್ಲಿ ಸೀಮಿತ ಅರ್ಥ, ವ್ಯಾಖ್ಯಾನಗಳಿಗೆ ಒಳಪಟ್ಟು ಕೆಲವು ಸಮಸ್ಯೆಗಳನ್ನು ಸೃಷ್ಟಿಮಾಡಿರು ವುದೂ ನಿಜ. ಬ್ರಹ್ಮಾಂಡಸಂಬಂಧವಾದ ಭೌತ ಸತ್ಯಗಳನ್ನು ವೈಯಕ್ತಿಕ ಸ್ತರದ ಹಗುರ ಭಾವಕೋಶಕ್ಕೆ ಆಹ್ವಾನಿಸಿಕೊಳ್ಳುವಾಗ ಸಹಜವಾಗಿಯೇ ಕೆಲವು ಮೌಢ್ಯಗಳು ತಲೆದೋರುತ್ತವೆ. ಅವುಗಳನ್ನು ಪರಿಹರಿಸಿಕೊಳ್ಳಬೇಕಾದದ್ದು ಪ್ರಜ್ಞಾವಂತರ ಕರ್ತವ್ಯವಾಗಿದೆ. ಹೊಟ್ಟೆಗೆ ಹೆದರಿ ಕಾಳನ್ನೇ ಎಸೆದುಬಿಡುವುದು ವಿವೇಕಿಗಳ ಲಕ್ಷಣವಲ್ಲ.

ಹೊಸ ಸಂವತ್ಸರದಲ್ಲಿ ಎಲ್ಲರ ಬದುಕಿನಲ್ಲಿ ಹೊಸತನ ಉನ್ಮೀಲನಗೊಳ್ಳಬೇಕು. ನಿಸರ್ಗ ಎಲ್ಲ ಕಡೆ ಸಮೃದ್ಧವಾಗಿ ಪಲ್ಲವಿಸಿದೆ, ಅದರ ವೈವಿಧ್ಯವನ್ನು ಸವಿಯುತ್ತ, ಸಂಭ್ರಮಿಸುತ್ತ, ಪ್ರಕೃತಿಯನ್ನು ಗುರುವಾಗಿ ಸ್ವೀಕರಿಸುವುದರ ಮೂಲಕ ಬದುಕನ್ನು ಚೈತನ್ಯದಾಯಕವಾಗಿ ಮಾಡಿಕೊಳ್ಳಬೇಕು, ಇಡೀ ಸಂವತ್ಸರವನ್ನು ಉನ್ನತ ಚಿಂತನೆ ಗಳಿಗಾಗಿ ಮುಡಿಪಾಗಿಸಿಕೊಳ್ಳಲು ಹಾರೈಸುತ್ತೇವೆ.

**ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ನಡೆಯೊಳಗೆ ನುಡಿಯ ಪೂರೈಸುವುದೇ ಸುಭಾಷೆ

**ಸ.ರಾ. ಸುಳಕೂಡೆ**

**ಪೀಠಿಕೆ :** ಭಾಷೆ, ಮಾತು, ಸಂಪರ್ಕ ಮನುಷ್ಯನನ್ನು ಅತ್ಯಂತ ಉನ್ನತ ಸ್ಥಾನಕ್ಕೇರಿಸಿದ ವರದಾನಗಳಾಗಿವೆ. ವಿವೇಚನೆಯಿಂದ ವರ್ತಿಸುವ, ವಿವೇಚಿಸುವ, ತರ-ತಮಗಳನ್ನು ಅರ್ಥೈಸುವ, ವಿವೇಕದಿಂದ ನಡೆಯುವ ಅವಕಾಶವನ್ನು ಮನುಷ್ಯನು ಪಡೆದುಕೊಂಡಿದ್ದಾನೆ. ಮಾತು, ಅಭಿವ್ಯಕ್ತಿ, ಮಾತುಗಾರಿಕೆ, ಮಾತಿನಿಂದ ಮನವರಿಕೆ, ಮನವೊಲಿಕೆಯ ಸುಳಿಯೊಳಗೆ ಸಿಲುಕಿಕೊಂಡಿರುವ ಮನುಷ್ಯನು ತನ್ನ ನಾಲಿಗೆಯನ್ನು ಬೇಕಾಬಿಟ್ಟಿ ಬಳಸಿಕೊಂಡು ಅನೇಕ ತೊಡಕು-ತೊಂದರೆಗಳಿಗೂ ಸಿಲುಕಿಕೊಂಡಿದ್ದಾನೆ.

ಮನುಷ್ಯ ತನ್ನ ಇರುವಿಕೆಗೆ 'ಮಾತು' ಒಂದು ಪ್ರಮುಖ ಲಕ್ಷಣವಾಗಿದೆ. ಮಾತು ಉಳಿಸಿಕೊಳ್ಳುವುದೆಂದರೆ ಬಹಳಷ್ಟು ಎಚ್ಚರಿಕೆಯಿಂದ ಬದುಕುವುದೇ ಆಗಿದೆ. ಮಾತು, ಮಾತಿನಲ್ಲಿ ಹಿಡಿತ ಸಾಧಿಸುವುದು, ಮಾತಿನಂತೆ ವರ್ತಿಸುವುದೆಲ್ಲವೂ ಗುಣಾತ್ಮಕ ಬದುಕಿನ ಭಾಗವೇ ಆಗಿದೆ. ಮನುಷ್ಯನ ಭಾವ-ಭಾವನೆಗಳನ್ನು ವ್ಯಕ್ತಗೊಳಿಸುವ ಮಾಧ್ಯಮವಾಗಿರುವ 'ಮಾತು' ಲೋಕದಿಂದ, ವಿಶ್ವಾಸದಿಂದ ಕೂಡಿಕೊಂಡಷ್ಟು ಮನುಷ್ಯ ಬದುಕು ದಿವ್ಯತೆ ಹೊಂದುತ್ತದೆ, ಉನ್ನತ ವ್ಯಕ್ತಿತ್ವ ವಿಕಸನಕ್ಕೂ ದಾರಿ ಮಾಡಿಕೊಡುತ್ತದೆ. ಆದ್ದರಿಂದ ಮಾತಿಗೆ ಬಹುಶಿಸ್ತಿನ ಮಹತ್ವವಿದೆ.

'ಮಾತು ಕೊಟ್ಟರೆ ಹೋಯಿತು, ಮುತ್ತು ಒಡೆದರೆ ಹೋಯ್ತು' ಮಾತು ಮಾಣಿಕ್ಯ, ಮಾತಿಗೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು, ಮಾತು ಸಂಸ್ಕೃತಿಯನ್ನು ಎತ್ತಿ ತೋರಿಸುತ್ತದೆ. ಕೊಟ್ಟ ಮಾತನ್ನು ತಪ್ಪಬಾರದು, ಮಾತಿನಲ್ಲಿ ಖಚಿತತೆಯು ಇರಬೇಕು, ಸತ್ಯವೇ ಮಾತಾಗಬೇಕು, ಅನ್ಯರನ್ನು ಮಾತಿನಿಂದ ನೋಯಿಸಬಾರದು, ಮಾತಿನಿಂದ ಅಸಹ್ಯಗೊಳಿಸಬಾರದು, ಮಾತಿನ ತಿವಿತದಿಂದ ಘಾಸಿಗೊಳಿಸಬಾರದು ಎಂಬೆಲ್ಲ ಹಲವು -ಹತ್ತು ಮಾತಿನ ವಿಚಾರಗಳು ಪ್ರಚಲಿತದಲ್ಲಿವೆ. ಮಾತಿಗೆ ಬದುಕಿನೊಳಗೆ ಬಹು ದೊಡ್ಡ ಪಾತ್ರವಿದೆ. ಮಾತಿನಿಂದ ಈ ಜಗತ್ತು ರಮ್ಯ-ಭವ್ಯಗೊಂಡಂತೆ ಗಲಿಬಿಲಿ, ಗದ್ದಲ, ಇಕ್ಕಟ್ಟು-ಬಿಕ್ಕಟ್ಟಿಗೆ ಸುಲಿಕಿಸಿಳಿಸಿದ್ದನ್ನು ನಾವೆಂದೂ ಅಲ್ಲಗಳೆಯಲಾಗದು.

---

**ಸ.ರಾ. ಸುಳಕೊಡೆ,** ನಂ. 1319, ಶ್ರೀ ಶಿವಪ್ರಸಾದ, ರಾಮತೀರ್ಥನಗರ, ಬೆಳಗಾವಿ

ಆಧುನಿಕ ಯುಗದೊಳಗೆ ಮಾತು, ಮಾತು, ಮಾತಿನ ಮಂಟಪಗಳೇ ಭರಾಟೆಯೊಳಗಿವೆ. ದೂರದರ್ಶನ, ಮೊಬೈಲುಗಳು ಮಾತನ್ನು ವಿಸ್ತರಿಸುತ್ತಲಿವೆ. ಮಾತಿಲ್ಲದೇ ಮನುಷ್ಯನಿಲ್ಲ, ಮನುಷ್ಯನ ಬದುಕಿಲ್ಲೆಂಬ ಹಂತಕ್ಕಿಂದು ಈ ಜಗತ್ತು ತಲುಪಿದೆ. ನಮ್ಮ ವ್ಯವಹಾರಗಳು, ಒಪ್ಪಂದಗಳು, ನಿತ್ಯಸವಂಹನ, ಆಸೆ-ಆಕಾಂಕ್ಷೆಗಳನ್ನು ವ್ಯಕ್ತಗೊಳಿಸುವಿಕೆ ಎಲ್ಲವೂ ಮಾತೇ ಆಗಿದೆ. ಇಷ್ಟಾಗಿಯೂ ಇಂದಿನ ಮಾತುಗಳಲ್ಲಿ ಗಟ್ಟಿತನವಿಲ್ಲೆಂಬುದನ್ನು ನಾವೆಲ್ಲ ಗಮನಿಸಿದ್ದೇವೆ. ಮಾತಿಗಿರುವ ವ್ಯಾಪ್ತಿ, ಪರಿಣಾಮ ಎಲ್ಲವನ್ನು ಸರ್ವಜ್ಞ ಕವಿ ಗಮನಿಸಿದ್ದು ಹೀಗಿದೆ :

ಮಾತಿನಿಂ ನಗೆ-ನುಡಿಯು| ಮಾತಿನಿಂ ಹಗೆ ಕೊಲೆಯು|
ಮಾತಿನಿಂ ಸರ್ವ ಸಂಪದವು ಲೋಕಕ್ಕೆ |
ಮಾತೆ ಮಾಣಿಕ್ಯವು ಸರ್ವಜ್ಞ ||

ವಂಚನೆ-ಸಂಚು, ಮೋಸ, ಸುಳ್ಳಾಟಗಳಾಚೆ ಮಾತನ್ನು ಬಳಸುವ ಶಕ್ತಿಯೇ ಮಾನವೀಯ ಮೌಲ್ಯಗಳನ್ನು ಉಳಿಸುವ ಸುಸೂತ್ರವಾಗಿದೆ. ಪೊಳ್ಳು, ಸುಳ್ಳು ಮಾತುಗಳನ್ನಾಡಿ ತನ್ನನ್ನು ತಾನು ಮೋಸ ಮಾಡಿಕೊಳ್ಳುವುದೆಲ್ಲವೂ ಆತ್ಮವಂಚನೆ ಮತ್ತು ಮನಸಾಕ್ಷಿಯನ್ನು ಮೀರುವುದೇ ಆಗುತ್ತದೆ. ಸದಾ ಒಂದಿಲ್ಲೊಂದು ಗೊಂದಲ ಸೃಷ್ಟಿಸುವ ಮಾತು, ಮಾನವ ಬದುಕಿಗೆ ಮಾರಿಯೇ ಆಗಿದೆ.

ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ |
ರಸಿಕನಲ್ಲದನ ಬರಿ ಮಾತು ಕಿವಿಯೊಳ್ಕೂರ್ದಸಿಯು
ಬಡಿದಂತೆ ಸರ್ವಜ್ಞ ||

ಮಾತು ಘನವಾಗಬೇಕು, ಸ್ಪಷ್ಟತೆ ಹೊಂದಿರಬೇಕು. ಅದಕ್ಕೆಂದೇ ಶರಣರು ನಡೆ-ನುಡಿ ಒಂದಾದರೆ ಈ ಜನ್ಮವೇ ಕಡೆ ಎಂದಿದ್ದಾರೆ. ನಮ್ಮ ಮಾತುಗಳು ಅರ್ಥಗೊಳ್ಳಬೇಕೆಂಬುದು ಮನುಷ್ಯ ಧರ್ಮವನ್ನು ಪರಿಪಾಲಿಸುವ ಮಹತ್ತಮ ಹೆಜ್ಜೆಯೇ ಆಗಿದೆ. ಕೆಟ್ಟ ನಡೆ-ನುಡಿ ಬದುಕು ದುಃಖಕ್ಕೆ ಗುರಿ: ಮನುಷ್ಯನು ಅನೇಕ ಗುಣವಿಶೇಷತೆಗಳನ್ನು ಹೊಂದಿದ್ದಾನೆ. ಆ ಗುಣವಿಶೇಷತೆಗಳು ಸಕಾರಾತ್ಮಕ ನಡೆ-ನುಡಿಗಳಲ್ಲಿ ಪ್ರಖರವಾದಷ್ಟು ಸಮಂಜಸ ಕೆಲಸಕಾರ್ಯಗಳು ನಿರ್ವಹಿಸಲ್ಪಡುತ್ತವೆ. ಸಕಾರಾತ್ಮಕ ಗುಣವಿಶೇಷಗಳನ್ನು ಬಳಸಿಕೊಂಡು ಬದುಕುವುದೆಂದರೆ ಕೆಟ್ಟ ನಡೆ-ನುಡಿಗಳಿಂದ ದೂರವಿರುವುದೇ ಆಗಿದೆ. ಮಿಥ್ಯಗಳು, ಭ್ರಮೆಗಳು, ಅಸಡ್ಡೆ-ಅನಾದಾರ ನಡೆ-ನುಡಿಗಳಿಂದ ಬದುಕು ಯಾತನೆ ಒಳಗೊಳ್ಳುತ್ತದಲ್ಲದೆ ಇನ್ನೊಬ್ಬರ ಬದುಕನ್ನೂ ಸಹ ಹಳವಂಡಕ್ಕೆ ನೂಕುತ್ತದೆ. ನಮ್ಮ ನಡೆ-ನುಡಿಗಳು ಒಬ್ಬರನ್ನೊಬ್ಬರು ಅರ್ಥೈಸಿಕೊಂಡು ಗತಿಶೀಲಗೊಂಡಷ್ಟು ಬದುಕು ಪ್ರಫುಲ್ಲ ಮಧುರಗೊಳ್ಳುತ್ತದೆ. ಎಲ್ಲರಿಗೂ ಮಧುರ ಬದುಕೇ ಇಷ್ಟವಾಗಬೇಕಿದೆ.

ನುಡಿಯಲುಬಾರದು ಕೆಟ್ಟ ನುಡಿಗಳ
ನಡೆಯಲುಬಾರದು ಕೆಟ್ಟ ನಡೆಗಳ
ನುಡಿದರೇನು, ನುಡಿಯದಿರ್ದಡೇನು?
ಹಿಡಿದ ವ್ರತ ಬಿಡದಿರಲು, ಅದೆ ಮಹಾಜ್ಞಾನದಾಚರಣೆ
ಎಂಬೆನು ಅಜಗಣ್ಣತಂದೆ.

ಕಲ್ಯಾಣದ ಶರಣ-ಶರಣೆಯರು ಬದುಕಿನ ಮಹಾಜ್ಞಾನದಾಚರಣೆಗೆ ಬಹು ದೊಡ್ಡ ಹೆಜ್ಜೆಯನ್ನಿಟ್ಟುಕೊಂಡದ್ದು ಜಾಗತಿಕ ನೆಲೆಯಲ್ಲೂ ಗಮನಾರ್ಹವಾಗಿದೆ. ಯಾವುದೇ ಭ್ರಮೆಗಳಿಗೆ ಒಳಗಾಗದೇ ಪರಪೀಡನೆಗೆ ತಿಲಾಂಜಲಿಯನಿಟ್ಟ ಶರಣ ಸಂಸ್ಕೃತಿಯು ಬದುಕಿನ ಸಕಾರಾತ್ಮಕ ಧೋರಣೆಗೆ ಸ್ಪಂದಿಸಿದ್ದಕ್ಕಾಗಿ ಜಗತ್ತಿನ ಮೂಲೆ-ಮೂಲೆಯ ವಿವಿಧ ಸ್ತರದ ಜನರು ಕಲ್ಯಾಣಕ್ಕೆ ಧಾವಿಸಿ ಬಂದು ಸತ್ಯಶುದ್ಧ ಕಾಯಕ, ದಾಸೋಹ, ಸತ್ಸಂಗದೊಳಗೆ ಪಾಲುಗೊಂಡರು. ಅವರ ಬದುಕಿನಲ್ಲಿ ಸೋಗುಗಾರಿಕೆ, ಸುಳ್ಳುಗಾರಿಕೆಗೆ ಅವಕಾಶವೇ ಇರಲಿಲ್ಲ. ಇದಕ್ಕೆ ಮುಕ್ತಾಯಕ್ಕ ಹಿಡಿದ ವ್ರತ ಬಿಡದಂತೆ ಅವರ ಬದುಕಾಗಿತ್ತೆಂದು ಹೃದಯತುಂಬಿ ಹೇಳಿ ಇದೇ ಮಹಾಜ್ಞಾನದಾಚರಣೆ ಎಂದಿದ್ದಾರೆ. ಬದುಕಿನೊಳಗೆ ಸಂಕುಚಿತ ಆಚಾರ-ವಿಚಾರಗಳು ತುಂಬಿಕೊಂಡಷ್ಟು ಕೆಟ್ಟ ನಡೆ-ನುಡಿಗಳು ಹೆಚ್ಚಾಗುತ್ತವೆ. ಆದ್ದರಿಂದ ಎಚ್ಚರಿಕೆ ಅಗತ್ಯ.

ಶರಣರು ಬದುಕನ್ನು ಶೀಲ-ಆಚಾರಗಳನ್ನು ಚಾಚು ತಪ್ಪದೇ ಪಾಲಿಸಿಕೊಂಡು ಬಂದಿದ್ದರಲ್ಲದೆ ಸತ್ಯಶುದ್ಧ ಕಾಯಕದಿಂದ ಮಾತನ್ನು ಜ್ಯೋತಿರ್ಲಿಂಗವೆಂಬುದಕ್ಕೆ ಎತ್ತರಿಸಿಕೊಂಡಿದ್ದರು. ಅಂತರಂಗ ಬಹಿರಂಗ ಶುದ್ಧಿಯನ್ನು ಗಳಿಸಿಕೊಂಡಿದ್ದ ಶರಣರು ಮಾತಿಗೆ ತಪ್ಪದ ಸನ್ನಡತೆಯನ್ನು ಹೊಂದಿದ್ದರು. ಅವರ ನಡೆ-ನುಡಿಗಳು ಎತ್ತರದಲ್ಲಿದ್ದವು, ಪಾವಿತ್ರ್ಯವನ್ನು ಪಾಲಿಸಿಕೊಂಡವುಗಳಾಗಿದ್ದವೆಂಬುದನ್ನು ಅಲ್ಲಮಪ್ರಭುದೇವರು ತಮ್ಮ ವಚನದೊಳಗೆ ವಸ್ತುನಿಷ್ಠವಾಗಿ ಪ್ರತಿಪಾದಿಸಿದ್ದು ಮನನ ಯೋಗ್ಯವಾಗಿದೆ. ಮಾತೆಂಬುದು ಜ್ಯೋತಿರ್ಲಿಂಗ, ಸ್ವರವೆಂಬುದು ಪರತತ್ತ್ವ, ತಾಳೋಷ್ಠ ಸಂಪುಟವೆಂಬುದು ನಾದಬಿಂದುಕಳಾತೀತ.

ಗುಹೇಶ್ವರನ ಶರಣರು
ನುಡಿದು ಸೂತಕಿಗಳಲ್ಲ ಕೇಳಾ ಮರುಳೆ

ಬರೀ ಮಾತು, ದಾರ್ಶನಿಕತೆ, ತತ್ತ್ವಾಧಾರಿತ ಆಚರಣೆಯ ಸೂತ್ರವಾಗದೆಂಬ ಮುಕ್ತಾಯಕ್ಕನ ಮನೋಧಾರಣೆಗೆ ಅಲ್ಲಮಪ್ರಭುದೇವರು ಶರಣರು ನುಡಿದು ಸೂತಕಿಗಳಲ್ಲೆಂದು ಸ್ಪಷ್ಟತೆ ನೀಡಿದ್ದು, ಸರ್ವಕಾಲಕ್ಕೂ ಮಾರ್ಮಿಕವಾಗಿದೆ.

ಅಲ್ಲಮಪ್ರಭುದೇವರು ಬದುಕಿನ ವಿಸಂಗತಿಗಳನ್ನು ಬಯಲು ಮಾಡಿದ ಪರಿಯು ವಿಶ್ವದ ದಾರ್ಶನಿಕ ಕ್ಷೇತ್ರದಲ್ಲಿ ಅನುಪಮವಾಗಿದೆ. ಅವರು ಜೀವನದ ತಾತ್ಪರ್ಯವನ್ನು ಮನಮುಟ್ಟಿ ಚಿತ್ರಿಸಿ ಅಂತರಂಗ-ಬಹಿರಂಗದೊಳಗೆ ಕತ್ತಲೆ ಕಳೆದುಕೊಳ್ಳುವ ಸನ್ಮಾರ್ಗವೇ ಮಾತೆಂಬುದು ಜ್ಯೋತಿರ್ಲಿಂಗವಾಗಬೇಕೆಂದಿದ್ದಾರೆ. ಮಾತು, ಮಾತಿನೊಳಗೆ ಸಮ ಸಂಸ್ಕೃತಿಯು ಹದುಳಗೊಂಡರೆ ಬದುಕಿನ ಹುದುಳು ಮೆತ್ತಿಕೊಳ್ಳಲಾರದು. ನಮ್ಮ ಭಾವ-ಭಾವನೆಗಳು ಬದುಕಿನ ಮರ್ಮಕ್ಕೆ ಪೂರಕಗೊಳ್ಳುವುದೇ ಮಹತ್ ಸಾಧನೆಯಾಗಿದೆ. ಮತ್ತು ಮಾತಿನ ಸೂತಕವನ್ನು ದಾಟುವುದಾಗಿದೆ. ಮಾತು ಮಾತಾಗಿ, ಮಹತ್ ಸಾಧನೆಯಾದಲ್ಲಿ ಬದುಕು ಪರಿಪೂರ್ಣ ಎಂಬುದೇ ಸುಭಾಷೆ, ಸವಿಯ ಸತ್ವವೂ ಆಗಿದೆ.

ಅಲ್ಲಮಪ್ರಭುವಿನ ಆಚಾರ-ವಿಚಾರಗಳನ್ನು ಮೈಗೂಡಿಸಿಕೊಳ್ಳುವುದೆಂದರೆ ಸತ್ಯವನ್ನೇ ಬದುಕಿನ ಆದರ್ಶವನ್ನಾಗಿ ಸ್ವೀಕರಿಸಿ ಸಂತೋಷದಿಂದ ಬದುಕಿನ ಆಸೆ-ಆಮಿಷ, ಕುಹಕ, ಕಲಹಗಳಿಂದ ಬಯಲು ಬಯಲಾಗಿ ಬಯಲಾಗಿ, ಭವ್ಯ-ದಿವ್ಯತೆಗೆ ಪ್ರತಿಪಾದಿಸಿಕೊಳ್ಳುವುದಾಗಿದೆ. ಜಗದ ಬದುಕಿನ ಸಹ್ಯತೆಯನ್ನು ನಡೆ-ನುಡಿಗಳಲ್ಲಿ ತಂದುಕೊಂಡು ದೇವಲೋಕ-ಮರ್ತ್ಯಲೋಕದ ವ್ಯಾಮೋಹವನ್ನು ಬಿಡಿಸಿಕೊಂಡು ಹಸನ್ನುಳ್ಳ ದಾರಿಯಲ್ಲಿ ಸಾಗುವುದಾಗಿದೆ. ಶರಣರ ಬದುಕಿನೊಳಗೆ ದ್ವಂದ್ವಗಳು, ದುಃಖಗಳು ಸುಳಿದಾಡದಂತೆ ಸಶಕ್ತ ನಡೆ-ನುಡಿಗಳಿಂದ, ಸುಭಾಷೆಯೊಳಗೆ ಮಾರ್ಗದರ್ಶನ ಮಾಡಿದ ಅಲ್ಲಮಪ್ರಭುದೇವರು ಬದುಕಿನ ಸೂತಕ, ನುಡಿಯ ಸೂತಕವನ್ನು ಬಿಡಿಸಿದರು. ಅದರಂತೆ ಬಸವಣ್ಣನವರು ತಮ್ಮ ನಡೆ-ನುಡಿಗಳಿಂದ ಭೂಮಿಯನ್ನೇ ಸ್ವರ್ಗವನ್ನಾಗಿರಿಸಿದರು.

> ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರೊ!
> ಸತ್ಯವ ನುಡಿವುದೆ ದೇವಲೋಕ ; ಮಿಥ್ಯವ ನುಡಿವುದೆ ಮರ್ತ್ಯಲೋಕ.
> ಆಚಾರವೆ ಸ್ವರ್ಗ ; ಅನಾಚಾರವೆ ನರಕ :
> ಕೂಡಲಸಂಗಮದೇವಾ, ನೀವೇ ಪ್ರಮಾಣು.

ಮಾನವನ ಬದುಕು ಪರಾಮರ್ಶೆ ಮತ್ತು ಸಂಪಾದದ ಸಾರವೇ ಆಗಿದೆ. ಬದುಕಿನೊಳಗೆ ಅನೇಕ ಆಲೋಚನೆಗಳು, ವಾಗ್ವಾದಗಳು, ವಿವಾದಗಳು, ನಂಬಿಕೆ, ಅಪನಂಬಿಕೆಗಳು ತುಂಬಿಕೊಂಡಿವೆ. ಬದುಕಿನೊಳಗೆ ಒಳ್ಳೆಯ ನಡೆ-ನುಡಿಗಳು, ಆಚಾರ-ವಿಚಾರಗಳು, ಪ್ರಗತಿಪರ ದೋರಣೆಗಳು, ವೈಚಾರಿಕತೆ, ವೈಜ್ಞಾನಿಕತೆ, ವಿವೇಕಯುತ, ಪರಿಭಾಷೆಗಳು ಹೊರಹೊಮ್ಮುವುದು ಎಲ್ಲ ಕಾಲದ ಆದ್ಯತೆಯೇ ಆಗಿದೆ. ಆದರೆ ಕೆಲವು ಪಟ್ಟಭದ್ರರು ಇಲ್ಲಿ ಎಲ್ಲವೂ ಯಾತನೆ, ದುಃಖ ತುಂಬಿದೆಯೆಂದು ಪರಲೋಕದೊಳಗೆ ಸುಖ-ಶಾಂತಿ ಸಿಗುವುದೆಂದು ಗುಲ್ಲು ಹಬ್ಬಿಸಿ, ಜನತೆಯನ್ನು ತಪ್ಪು

ದಾರಿಗೆ ಎಳೆಯುತ್ತಿದ್ದಾರೆ. ಇದನ್ನು ಪಲ್ಲಟಗೊಳಿಸಿ ಶರಣರು ಕೆಟ್ಟ ನಡೆನುಡಿಗಳೇ ನರಕ ದುಃಖ ದುಗುಡಕ್ಕೆ ಮೂಲವೆಂದು ದಿಟಗೊಳಿಸಿದ್ದಾರೆ.

**ಸತ್ಯವೇ ಸುಭಾಷೆ :** ಮಾನವನ ಬದುಕಿನ ಸೌಂದರ್ಯ, ಶಕ್ತಿ, ಸುಮಧುರತೆಗಳೆಲ್ಲವೂ ಸತ್ಯದೊಳಗೆ ಅಡಕಗೊಂಡಿರುವುದನ್ನು ಶರಣರು ಅರ್ಥ ಮಾಡಿಕೊಂಡಿದ್ದರು. ಅವರು ಪ್ರತಿ ಹಂತದ ಬದುಕಿನಲ್ಲಿ ಸತ್ಯವನ್ನೇ ಅನುಸರಿಸಿಕೊಂಡು ಹೋಗುವ ಛಲವನ್ನು ಬೆಳಸಿಕೊಂಡಿದ್ದರು. ಅವರು ಮಾತಿನೊಳಗೆ ಮಹಾದೇವನನ್ನು ಕಂಡುಕೊಂಡಿದ್ದರಿಂದಲೇ ಸತ್ಯವು ಮಾತಿನ ಮಾನದಂಡವನ್ನಾಗಿರಿಸಿಕೊಂಡಿದ್ದು ಗಮನಿಸುವ ಅಂಶವಾಗಿದೆ. ಸಕಲೇಶ್ವರ ಮಾದರಸ ಶರಣರು ಸತ್ಯ ಸುಭಾಷೆಯನ್ನು ಮನಗಂಡು ನುಡಿದ ಅನುಭಾವದ ವಚನವನ್ನು ಅವಗಾಣಿಸುವುವೆಂದರೆ ಸತ್ಯದ ಪಥವನ್ನು ಅನುಸರಿಸುವುದಾಗಿದೆ. ಜೀವನವೆಂಬುದು ಆಚಾರ-ವಿಚಾರಗಳ ಮಿಶ್ರಣವಾಗಿದ್ದರೂ ಕಟ್ಟಕಡೆಗೆ ಕರ್ತನ ಸ್ಪಷ್ಟತೆಯು ದರ್ಶನಗೊಳ್ಳದಿರಲಾರದು. ಕರ್ತನೊಬ್ಬನೆ ದೇವ ಎಂಬುದು ಅಂತಿಮ ಸತ್ಯವಾಗಿದೆ, ಸತ್ಯದ ಮಾತೂ ಆಗಿದೆ.

ಕರ್ತನೊಬ್ಬನೆ ದೇವ, ಸತ್ಯವೆ ಸುಭಾಷೆ
ಭೃತ್ಯಾಚಾರವೇ ಆಚಾರವಯ್ಯಾ
ಮತ್ತೆ ದೇವರಿಲ್ಲ, ಮತ್ತೆ ಆಚಾರವಿಲ್ಲ,
ಮತ್ತೆ ಸುಭಾಷೆಯೆಂಬುದಿಲ್ಲ
ಮಹಂತ ಸಕಳೇಶ್ವರದೇವರನೊಲಿಸಿದ ಪುರಾತರ ಪಥವಿದು
ಅವಿತಥಲ್ಲದೆ ನಂಬುವದು

ಸಕಲೇಶ ಮಾದರಸರ ಅನುಭಾವವು ಅತ್ಯಂತ ವಸ್ತುನಿಷ್ಠವಾಗಿ ಸುಭಾಷೆಯ ಮಹತ್ವವನ್ನು ಎತ್ತಿ ಹಿಡಿದಿದೆ. ಸತ್ಯವೇ ದೇವರು, ಸತ್ಯವೇ ಸ್ವರ್ಗ, ಸತ್ಯವೇ ಅಂತಿಮ ದರ್ಶನವೆಂಬುದು ಪುರಾತರ ಪಥವೇ ಆಗಿದೆ.

ಭಾರತೀಯರು ಪಾಪ-ಪುಣ್ಯಗಳನ್ನು ತೂಗುತ್ತ, ತೂಗುತ್ತ ಪುಣ್ಯವನ್ನೇ ಮೆಚ್ಚಿಕೊಂಡು ಬದುಕಿದವರಾಗಿದ್ದಾರೆ. ಪುಣ್ಯವನ್ನು ಸರಳ ಬದುಕಿನಲ್ಲಿ, ಸತ್ಯದ ಸೂತ್ರದೊಳಗೆ ಕಂಡುಕೊಂಡಿರುವ ಭಾರತೀಯರು ಸದುವಿನಯ, ಸತ್ಯ, ಶಾಂತಿಯ ಪ್ರತಿಪಾದಕರಾಗಿ ಮಾನವ ಬದುಕಿಗೆ ಉತ್ಕೃಷ್ಟವಾಗಿರುವ ಬದುಕಿನ ಮಾರ್ಗವನ್ನು ನಿರ್ಮಿಸಿದ್ದಾರೆ. ಮಾನವೀಯ ಅನುಕಂಪ, ಬದುಕಿನ ಶ್ರದ್ಧೆಯನ್ನು ಬಹುಶಿಸ್ತಿಗೆ ಒಳಪಡಿಸಿರುವ ಭಾರತೀಯರಲ್ಲಿ ಶರಣ ಸಂಸ್ಕೃತಿಯು ಸತ್ಯಶುದ್ಧ ಕಾಯಕ, ಸುಭಾಷೆಯ ಸತ್ಯದ ಮೂಲಕ ಮಾನವ ಘನತೆ ಗೌರವಗಳನ್ನು ಎತ್ತಿ ಹಿಡಿದಿರುವುದು ಹೆಮ್ಮೆಯ ಸಂಗತಿಯಾಗಿದೆ. ಬದುಕಿಗೆ ಬೇಕಾಗಿರುವ ಮಾತುಗಳನ್ನು ಶರಣ ಸಂಸ್ಕೃತಿಯು ಸಮಾಗಮಗೊಳಿಸಿದ್ದು ಜಗತ್ತಿಗೆ ಮಾದರಿಯಾಗಿದೆ.

ಕುಭಾಷೆ ಸುಭಾಷೆಯ ಕೇಳದಂತಿರಬೇಕು
ಮೃದುಕಠಿಣಂಗಳನಾರಯ್ಯದಂತಿರಬೇಕು.
ರಸಗಂಧಂಗಳ ಅರಿಯದಂತಿರಬೇಕು.
ಲಿಂಗವಲ್ಲದೆ ಮತ್ತೊಂದ ಕಾಣದಂತಿರಬೇಕು.
ಇಂದ್ರಿಯಂಗಳ ಬಳಿಸಂದಲ್ಲದೆ
ದೇವ ಸಕಳೇಶ್ವರದೇವನನೊಲಿಸಬಾರದು.

ಜೀವದೊಲಿಮೆಯು ಕುಭಾಷೆಯೊಳಗಿಲ್ಲ, ಸುಭಾಷೆಯೊಳಗಿದೆ ಎಂದು ಮನತಟ್ಟುವಂತೆ ಹೇಳಿರುವ ಸಕಲೇಶ ಮಾದರಸ ಶರಣರು ಇಂದ್ರಿಯ ಸುಖ-ಭೋಗಗಳಲ್ಲಿ ಪರಶಿವ ತತ್ತ್ವಗಳನ್ನು ಪ್ರತಿಷ್ಠಾಪಿಸುವುದಕ್ಕೆ ಮಾರ್ಗಸೂತ್ರದ ಅನುಭಾವವನ್ನು ಹಂಚಿಕೊಂಡಿದ್ದಾರೆ. 'ಲಿಂಗವಲ್ಲದೆ ಮತ್ತೊಂದು ಕಾಣದಂತಿರಬೇಕು, ಎಂಬ ಸುಭಾಷೆಯೊಳಗೆ ನೆಚ್ಚಿಕೊಂಡು ಬದುಕುವುದೆಂದರೆ ಸತ್ಯವನ್ನೇ ಅನುಸರಿಸಿಕೊಂಡು ಭೋಗಕ್ಕೆ ಕಡಿವಾಣ ಹಾಕುವುದಾಗಿದೆ.

ಮನುಷ್ಯನು ನಿಸರ್ಗದತ್ತವಾಗಿ ಪಡೆದಿರುವ ಇಂದ್ರಿಯಗಳನ್ನು ತಾಮಸ ತೃಷೆಗಳಿಗಾಗಿ, ಪರರ ಬದುಕಿನೊಂದಿಗೆ ತನ್ನ ಬದುಕು ಹೀನಾಯ ವಿಷಯಗಳಲ್ಲಿ ತನ್ಮಯಗೊಳಿಸಲು ಉಪಯೋಗಿಸುವುದೇ ಬದುಕಿನ ಕುಭಾಷೆಯಾಗಿದೆ. ನಾಲಿಗೆ ತನ್ನ ಚಪಲ ಚಾಪಲ್ಯಕ್ಕಾಗಿ ಮಾಡಬಾರದಕ್ಕೆ ನೂಕುವಲ್ಲಿ ಪ್ರೋತ್ಸಾಹಿಸಿದಲ್ಲಿ ವಿವೇಚನೆಯಿಲ್ಲದೆ ಆಡಬಾರದ್ದನ್ನಾಡುವುದು ಕುಭಾಷೆಯೇ ಆಗುತ್ತದೆ. ನಾಲಿಗೆಯೊಳಗೆ ಸವಿಸವಿಯಾದ ಮಾತುಗಳನ್ನಾಡಿ, ದೋಚುವ ಗತ್ತುಗಾರಿಕೆಗಳೂ ಸಹ ಕುಭಾಷೆಯೇ ಆಗುತ್ತದೆ. ನಂಬಿಸಿ ದ್ರೋಹ ಬಗೆಯುವ ಕುಭಾಷೆ-ಸುಭಾಷೆಗಳೆಲ್ಲವೂ ಬದುಕಿಗೆ ಘಾತಕಗಳೇ ಆಗಿವೆ. ಸತ್ಯವನ್ನು ಪ್ರತಿಪಾದಿಸುವ, ನಿಷ್ಠುರತೆಯಲಿ ದುಡಿಯುವ ಭಾವ-ಭಾವನೆಗಳನ್ನು ಬೆಳೆಸಿಕೊಳ್ಳುವುದೇ ಸುಭಾಷೆಯಾಗಿದೆ, ಪರಿಣಾಮಕಾರಿ ಬದುಕುವ ಪರಿಯೂ ಆಗಿದೆ. ಇಂಥ ನಡೆನುಡಿಗಳನ್ನು ಬಳಸಿಕೊಂಡಲ್ಲಿ ವಾಸನಾಪ್ರಪಂಚವು ಲುಪ್ತಗೊಳ್ಳುತ್ತದೆ, ಲಿಂಗತತ್ತ್ವವು ಸಾಕಾರಗೊಳ್ಳುತ್ತದೆ.

ಅಯ್ಯಾ, ಸತ್ಯವ ನುಡಿಯದ, ಸದಾಚಾರದಲ್ಲಿ ನಡೆಯದ,
ಸದ್ಭಕ್ತಿಯ ಹಿಡಿಯದ, ನಿಜಮುಕ್ತಿಯ ಪಡೆಯದ,
ಸತ್ಕ್ರಿಯವ ಸಾರದ, ಸಮ್ಯಜ್ಞಾನವ ಮುಟ್ಟದ,
ಸುಡು ಸುಡು - ಈ ವೇಷದ ಭಾಷೆಯ ನೋಡಿ
ಗುಹೇಶ್ವರಲಿಂಗವು ನಗುತ್ತೈದಾನೆ ಕಾಣಾ ಚೆನ್ನಬಸವಣ್ಣಾ

ಮನುಷ್ಯನು ಬದುಕಬೇಕು, ಬದುಕಬೇಕು ಸುಖ-ಭೋಗ ಪಡೆಯಬೇಕೆಂದು ಅಲ್ಲಸಲ್ಲದ ವೇಷ-ಭಾಷೆಗಳನ್ನು ಬಳಸಿಕೊಳ್ಳುವುದು ಅಸಹನೀಯ, ಅಸಹ್ಯ ಬದುಕಿನ

ಸೂತ್ರವೇ ಆಗಿದೆ. ಸ್ವಾರ್ಥಪರತೆಯ ಮಡಿಲಿನೊಳಗೆ ಮಗ್ನಗೊಂಡಿರುವ ಜೀವಿಗಳು ತಮ್ಮ ಕಾರ್ಯಸಾಧನೆಯನ್ನು ವಾಮಮಾರ್ಗದಲ್ಲಿ ಪಳಗಿಸಿಕೊಳ್ಳುವುದೆಲ್ಲವೂ ಜೀವವಿರೋಧಿ ನಡೆ-ನುಡಿಯಾಗುತ್ತದೆಂದಿರುವ ಅಲ್ಲಮಪ್ರಭುದೇವರು ಈ ವೇಷದ ಭಾಷೆಯ ನೋಡಿ ಗುಹೇಶ್ವರಲಿಂಗವು ನಗುತ್ತೈದಾನೆ' ಎಂದು ಪರಿಭಾಷಿಸಿದ್ದು ಇಂದಿನ ಜನಾಂಗಕ್ಕೂ ಅನ್ವಯಿಸುವ ಅನುಭಾವವೇ ಆಗಿದೆ. ಮಾನವ ಬದುಕಿನ ಮುಖ್ಯಾಂಶಗಳಲ್ಲಿ ಸತ್ಯ, ಸದಾಚಾರ, ಸತ್ಕ್ರಿಯೆ, ಸಮ್ಯಕ್‌ಜ್ಞಾನಗಳು ಪ್ರಮುಖವಾಗಿವೆ. ಮಾನವಜನ್ಮದ ಸಾರ್ಥಕತೆಯು ಸರಳತೆ, ಸದಾಚಾರದಲ್ಲಿ ಅಡಕಗೊಂಡಿರುವುದನ್ನು ಮನಗಂಡು ಬದುಕಬೇಕು. ಇದಲ್ಲದೆ ಅನುಕೂಲ, ಲಾಭಕ್ಕಾಗಿ, ಫಲಕ್ಕಾಗಿ ಅಲ್ಲಸಲ್ಲದ ವೇಷ ಧರಿಸಿಕೊಂಡು ತನಗೂ ಅನ್ಯರಿಗೂ ತಪ್ಪಿಯೂ ಮೋ ಮಾಡಲು ಮುಂದಾಗಬಾರದು.

**ನಡೆ-ನುಡಿಯೊಳಗೆ ಏಕತೆಯೇ ಸದಾಚಾರ :** ಮೂರು ಹೊತ್ತು ಆ ಪೂಜೆ, ಈ ಪೂಜೆ, ಜಪ-ತಪವೆಂದು, ಮಡಿ-ಹೂಡಿಯಲಿ ನಿಂದು ಕೋಪಾಗ್ನಿಯನ್ನು ನಡೆ-ನುಡಿಯೊಳಗೆ ಕೇಂದ್ರೀಕರಿಸಿಕೊಂಡಲ್ಲಿ ದುರಾಚಾರವೆಂದೂ ಬೆನ್ನು ಬಿಡದು. ನಾವು ಜಗಕ್ಕೆ ತೋರಿಸುವ ಮುಖ ಒಂದು, ಒಳ ಒಳಗೆ ಕದ್ದುಕೊಳ್ಳುವ ಮುಖ ಮಾಡಿಕೊಂಡರೆ ಬದುಕು ಸ್ವಾರ್ಥಕವಾಗದು, ಸಹ್ಯತೆ ಬಲಗೊಳ್ಳದು.

> ಹಗಲ ಇರುಳ ಮಾಡಿ, ಇರುಳ ಹಗಲ ಮಾಡಿ,
> ಆಚಾರವ ಅನಾಚಾರವ ಮಾಡಿ, ಅನಾಚಾರವ ಆಚಾರವ ಮಾಡಿ,
> ಭಕ್ತನ ಭವಿಯ ಮಾಡಿ, ಭವಿಯ ಭಕ್ತನ ಮಾಡಿ
> ನುಡಿವವರ ಮಾತ ಕೇಳಲಾಗದು, ಗುಹೇಶ್ವರಾ

ಈ ಜಗವು ಅನೇಕ ಮುಖವಾಡಗಳನ್ನು ಎದುರಿಸಿಕೊಂಡು ಸುಸೂತ್ರವನ್ನು ಎತ್ತಿ ಹಿಡಿಯುತ್ತಲೇ ಸಾಗಿದೆ. ಧಾರ್ಮಿಕ, ರಾಜಕೀಯ, ಸಾಮಾಜಿಕ ವಲಯದೊಳಗೆ ಕುಟುಂಬದ ಆಲಯದೊಳಗೆ, ವ್ಯಕ್ತಿಯ ನಡೆ-ನುಡಿಯೊಳಗೆ ಅನನ್ಯತೆ ಅನಾಥವಾಗುತ್ತಲಿದೆ. ಯಾವುದಕ್ಕೂ ನಿಷ್ಠೆವಿಟ್ಟುಕೊಳ್ಳುವ ಜೀವನ ವಿಧಾನವು ಪ್ರಚಲಿತಗೊಳ್ಳುತ್ತಲಿದೆ. ಅಗತ್ಯತೆಗಳಿಗಿಂತ ಅನಗತ್ಯ ವ್ಯವಹಾರಗಳು ಮನ್ನಣೆಗೆ ಹುರಿಗೊಳ್ಳುತ್ತಲಿವೆ. ಡೊಂಬರಾಟ, ಜೂಜಾಟ, ಜಾದುತನ, ಮಂಗನಾಟ, ಮರುಳಾಟಗಳೆಲ್ಲವೂ ಮುಂಚೂಣಿಯಲ್ಲಿ ರಾರಾಜಿಸುತ್ತಿರುವುದರಿಂದಲೇ ಬದುಕು ಬದುಕಾಗುತ್ತಿಲ್ಲ, ಸುಖ, ಶಾಂತಿ, ನೆಮ್ಮದಿಗಳು ಸಿಗುತ್ತಿಲ್ಲ. ಇಲ್ಲಿ ವಾಸ್ತವತೆಯ ಕೊರತೆಯು ಮಾನವ ಬದುಕನ್ನು ಹಳವಂಡಕ್ಕೆ ನೂಕುತ್ತಲಿದೆ. ವೇಷಧಾರಿಗಳು ಹೆಚ್ಚಾದ ಕಡೆಯಲ್ಲಿ ಯಾವುದೂ ಸರಳ-ಸಹಜವಿರಲು ಅವಕಾಶವೇ ಸಿಗಲಾರದು. ಮಾನವರು ತಮ್ಮ ಬದುಕನ್ನು

ಅನುಕೂಲಗಳನ್ನೇ ಪರಮೋಚ್ಛವನ್ನಾಗಿರಿಸಿಕೊಂಡು, ಮನೋಗತಗಳಿಗೆ ಯಾವುದೇ ಕಡಿವಾಣ ಹಾಕಿಕೊಳ್ಳದೇ ವರ್ತಿಸುವಲ್ಲಿ ಮಗ್ನಗೊಂಡಲ್ಲಿ ಸಮತೆ, ಸೈರಣೆಗಳಾಗಲಿ, ಕೊಟ್ಟ ಮಾತಿನಂತೆ ನಡೆದುಕೊಳ್ಳುವುದಾಗಲಿ ಸಾಧ್ಯವಾಗದು. ಇಂಥ ಪರಿಸರದಲ್ಲಿ ಬದುಕುವುದೆಂದರೆ ಸುಳ್ಳಿನ ಸಂತೆಗೆ ಸತತ ಸಿದ್ಧರಾಗಿರುವುದಾಗಿದೆ. ಇರುವಿಕೆ, ತೋರಿಕೆಗೆ ಬದ್ಧತೆ ಇಲ್ಲದಿದ್ದಲ್ಲಿ ಬದುಕಿಗೆ ಸದಾಚಾರವು ಬರಲಾರದು, ಗೊಂದಲ ಸೃಷ್ಟಿಸುವ ಈ ಸ್ಥಿತಿಯು ನಡೆನುಡಿಯೊಳಗೆ ಏಕತೆಯನ್ನೂ ತರಲಾರದು.

ಜ್ಞಾನದಲರಿದಡೇನಯ್ಯ, ಕ್ರೀಯನಾಚರಿಸದನ್ನಕ್ಕ?
ನೆನೆದ ಮಾತ್ರದಲ್ಲಿ ಅಹುದೆ, ಕಾರ್ಯದಲಲ್ಲದೆ?
ಕುರುಡ ಕಾಣ ಪಥವ, ಹೆಳವ ನಡೆಯಲರಿಯ
ಒಂದಿಲ್ಲದಿರ್ದಡೊಂದಾಗದು.
ಜ್ಞಾನವಿಲ್ಲದಿರ್ದ ಕ್ರೀ ಜಡನು, ಕ್ರೀಯಿಲ್ಲದ ಜ್ಞಾನ ವಾಗ್ಜಲ ಭ್ರಾಂತಿ
ಇದು ಕಾರಣ

ಸಿದ್ಧಸೋಮನಾಥಲಿಂಗವ ಕೂಡುವ ಶರಣಂಗೆ ಎರಡೂ ಬೇಕು. ಅಮುಗಿ ದೇವಯ್ಯರು ಹೇಳಿದಂತೆ ನಡೆಯುವುದೇ ಮನುಷ್ಯ ಧರ್ಮವೆಂದು ಹೇಳಿರುವುದು ವೇಷಧಾರಿತನ ಕಳಚಿಕೊಂಡು ಬದುಕುವುದೇ ಶ್ರೇಯಸ್ಕರವೆಂಬುದನ್ನು ಸೂಚಿಸುತ್ತದೆ. ಹೇಳಿಕೊಳ್ಳುವುದು, ಮಹೋನ್ನತಿಯನ್ನು ವಿವರಿಸುವುದು ಸುಲಭತಿಸುಲಭವೆಂಬುದು ಒಂದೆಡೆಯಾದರೆ ನುಡಿದುದ್ದನ್ನು ಕ್ರೀಯೊಳಗೆ ತೋರ್ಪಡಿಸುವುದು ನೆನಪಿಗೂ ಬಾರದಂತಿರುವುದು ಇನ್ನೊಂದು ವಿಸಂಗತಿಯಾಗಿದೆ. ಮಾತಿನೊಳಗೆ ಸಕಲವೂ ಸಾಧ್ಯವಾಗದೆಂಬ ಅರಿವು ಹೆಚ್ಚಿದಂತೆ ಆಂತರಿಕತೆಯೊಳಗೆ ಕಾರ್ಯಸಾಧನೆಯ ಕಸುವು ನಿರ್ದೇಶನ ನೀಡುವ ಲವಲವಿಕೆಯನ್ನು ಪಡೆದುಕೊಳ್ಳುತ್ತದೆ. ಇದು ನುಡಿ-ನಡೆಯೊಳಗೆ ಏಕತೆಯನ್ನು ಸಾಧಿಸುವ ಬಲವಾಗಿಯೂ ನಿಲ್ಲುತ್ತದೆ.

ಇಂದಿನ ಜಗತ್ತಿನ ಬದುಕು ಸಂತೆಯೊಳಗಿನ ಮಾತಿನಂತಾಗಿದೆ. ಧಾರಣೆ ಕೇಳುವುದರಲ್ಲಿಯೇ ಹೆಚ್ಚಿನ ಗಸ್ತುಗಾರಿಕೆಯು ಹೆಚ್ಚಾಗಿಹೋಗಿದೆ. ನಮಗೆ ಏನು ಬೇಕಾಗಿದೆ ಎಂಬುದಕ್ಕಿಂತ ವಿಚಾರಿಸುವುದರಲ್ಲಿಯೇ ತೃಪ್ತಿಗೊಳ್ಳುವ ಹವ್ಯಾಸವು ಸರಾಗಗೊಳ್ಳುತ್ತಲಿದೆ. ನಮ್ಮೊಳಗೆ ಖಚಿತತೆಯು ಜಾಗೃತವಾಗದ ಸ್ಥಿತಿಯು ಮುಂದುವರಿದಷ್ಟು ನಡೆ-ನುಡಿಯೊಳಗೆ ಕಂದಕಗಳು ಸೃಷ್ಟಿಯಾಗುತ್ತಲೇ ಇರುತ್ತವೆ. ನಡೆ-ನುಡಿಯೊಳಗಿನ ಕಂದಕಗಳೇ ಬದುಕುವ-ಬದುಕಿಸುವ ರೀತಿನೀತಿಗಳ ಮೇಲೆ ಅಡ್ಡಪರಿಣಾಮವನ್ನು ಬೀರುತ್ತವೆ. ಮನುಷ್ಯ ಒಮ್ಮೆ ಸುಳ್ಳು ಹೇಳಿ ಪಾರಾದರೆ ಮತ್ತೆ ಮತ್ತೆ ಸುಳ್ಳು ಹೇಳುತ್ತ ಹತ್ತಕ್ಕೆ ಹನ್ನೊಂದು ಸೇರಿಸುತ್ತ ಹೋಗಿ ಪೊಳ್ಳಾಗಿ ಹೋಗುತ್ತಾನೆ. ಪೊಳ್ಳುತನವು ವಿಗತಿಗೂ, ಚಂಚಲತೆಗೂ ಕಾರಣವಾಗುತ್ತದೆ. ಆದ್ದರಿಂದ ನಡೆ-ನುಡಿಯೊಳಗೆ ಕಂದಕವಿರದಂತೆ ಜಾಗೃತಿ ವಹಿಸುವುದು ಅಗತ್ಯ.

ಭಕ್ತಿ ಸುಭಾಷೆಯ ನುಡಿಯ ನುಡಿವೆ, ನುಡಿದಂತೆ ನಡೆವೆ,
ನಡೆಯೊಳಗೆ ನುಡಿಯ ಪೂರೈಸುವೆ
ಮೇಲೆ ತೂಗುವ ತ್ರಾಸು ಕಟ್ಟಳೆ ನಿಮ್ಮ ಕೈಯಲ್ಲಿ
ಒಂದು ಜವೆ ಕೊರತೆಯಾದಡೆ
ಎನ್ನನದ್ದಿ ನೀನೆದ್ದು ಹೋಗು, ಕೂಡಲಸಂಗಮದೇವಾ.

ಬಸವಣ್ಣನವರು ಬದುಕಿನ ತಾಪ-ತಾಪತ್ರಯಗಳನ್ನು ನಿರೀಕ್ಷಿಸಿ, ಪರೀಕ್ಷಿಸಿ ಕೊಂಡಷ್ಟು ಜಗತ್ತಿನ ಮತ್ತಾವ ದಾರ್ಶನಿಕನೂ ತನಗೆ ಅನ್ವಯಿಸಿಕೊಂಡಿಲ್ಲ. ಎನ್ನ ತಪ್ಪು ಅನಂತಕೋಟಿ ನಿಮ್ಮ ಸೈರಣೆಗೆ ಸಾಟಿಯಲ್ಲೆಂದು ಪರಿಭಾಷಿಸಿಕೊಂಡು ನಡೆ-ನುಡಿಯೊಳಗೆ ಪಾವಿತ್ರ್ಯ, ಪರಮ ಪುರುಷಾರ್ಥವನ್ನು ತುಂಬಿಕೊಂಡು ಜಗದಣ್ಣನಾಗಿ ಕಂಗೊಳಿಸಿದ್ದು ಸಕಲರೂ ಮೆಚ್ಚುವ ಸಿರಿಯೇ ಆಗಿದೆ. ಬಸವಣ್ಣನವರನ್ನು ನೆನೆಯುವುದೆಂದರೆ ಜಾಗೃತಿಯ ಬದುಕಿಗೆ ಅಣಿಗೊಳ್ಳುವ ಉತ್ಸಾಹವೇ ಆಗಿದೆ. ಅವರು ಇಹದ ಬದುಕಿಗೆ ನಡೆ-ನುಡಿ ಒಂದಾಗಲೇಬೇಕೆಂದು ಸಂಕಲ್ಪವನ್ನು ಸಾಧಿಸಿ ತೋರಿಸಿದ ಸ್ವತಂತ್ರ ಧೀರರಾಗಿದ್ದಾರೆ. ನಡೆ-ನುಡಿಯೊಳಗೆ ಏಕತೆಗೆ ಪರಮಸ್ಥಾನ ನೀಡಿದ ಬಸವಣ್ಣನವರು ಜಗತ್ತಿನ ಸಕಲ ಜೀವರಾಶಿಗಳಿಗೆ ಲೇಸ ತರುವ ದಾರಿಯನ್ನು ನಮಗೆಲ್ಲ ತೋರಿಸಿದ್ದಾರೆ. ಅದಕ್ಕಾಗಿ ನಡೆ-ನುಡಿ ಲೇಸದ ವಾಹಕಗಳೆಂಬುದನ್ನು ನಾವೆಂದೂ ಮರೆಯಬಾರದು.

ಶರಣರ ಸೂಳ್ನುಡಿ ಪೂರೈಸುವುದೇ ಪರಿಶುದ್ಧತೆ: ನಮ್ಮ ಬದುಕಿನೊಳಗೆ ಯಾವುದೇ ತೆರನಾದ ದುಗುಡು-ದುಃಖ, ನಿರಾಶೆ, ವೈರಭಾವ, ವೈಮನಸ್ಸು, ಲಾಲಸೆ, ತಾಮಸ-ತಕರಾರು ಸಂದರ್ಭಗಳು ಎದುರುಗೊಂಡಾಗ ವಚನಸಾಹಿತ್ಯವನ್ನು ಅನುಸರಿಸುವಷ್ಟು ವ್ಯವದಾನ ಹೊಂದಿದ್ದಾರೆ, ಅವುಗಳೆಲ್ಲವೂ ಕರಕರಗಿ ಹೋಗುತ್ತವೆ. ವಚನಗಳಲ್ಲಿ ಬದುಕಿನ ಬೋಧವಿದೆ, ಮಿತೃತ್ವದ ಅಭಿಮತೆ ಇದೆ, ಲೇಸ ತಂದುಕೊಳ್ಳುವ ಶಕ್ತಿಯ ಸಾರವೂ ತುಂಬಿದೆ.

ಕಡೆಗೀಲಿಲ್ಲದ ಬಂಡಿ ಹೊಡೆಗೆಡೆಯದೆ ಮಾಣ್ಬುದೆ?
ಕಡಗೀಲು ಬಂಡಿಗಾಧಾರ
ಈ ಕಡುದರ್ಪವೇರಿದ ಒಡಲೆಂಬ ಬಂಡಿಗೆ
ಮೃಢಭಕ್ತರ ನುಡಿಗಡಣವೆ ಕಡಗೀಲು ಕಾಣಾ! ರಾಮನಾಥ

ಮಾತಿಗಿರುವ ಮಹಾಶಕ್ತಿಯನ್ನು ಮೃಢಭಕ್ತರ ನುಡಿಗಡಣನೆಯಲ್ಲಿ ಕಾಣುವಂತೆ ತಿಳಿ ಹೇಳಿರುವ ದೇವರ ದಾಸಿಮಯ್ಯನವರು ಸುಸೂತ್ರವಾಗಿ ಬದುಕುವ ರೀತಿಯನ್ನು ಜಮಾಯಿಸಿದ್ದಾರೆ. ಮಾನವನು ಪಶುತ್ವ-ರಾಕ್ಷಸತ್ವದ ಗುಣಗಳನ್ನು ಹೊಂದಿದ್ದಾನಲ್ಲದೆ ಮದಮತ್ಸರಗಳಿಂದಲೂ ಮೆರೆಯುವಲ್ಲೂ ಪ್ರಸಿದ್ಧನಾಗಿದ್ದಾನೆ. ಇಂಥ ಮದ

ಮತ್ಸರಾದಿಗಳು ಬದುಕನ್ನು ಪ್ರಪಾತಕ್ಕೆ ನೂಕುತ್ತವೆಂಬ ಅರಿವಿಗೆ ಶರಣರ ನುಡಿಗಡಣನೆ ಕಡೆಗೀಲಾಗಿರುತ್ತದೆ. ಮಾನವನು ಅನೇಕ ಜೀವವಿರೋಧಿ ತತ್ತ್ವಗಳತ್ತ ಒಲಿದುಕೊಂಡು ಹೋಗುವುದು ಒಂದು ಸಹಜ ಪ್ರವೃತ್ತಿಯೇ ಆಗಿದೆ. ಈ ಪ್ರವೃತ್ತಿಗೆ ಪರಿಹಾರವು ಶರಣರ ಸೂಳ್ನುಡಿಗಳಲ್ಲಿದೆ. ನಾವು ಶರಣರ ಜೀವನದ ಒಂದೊಂದು ನೋಟವನ್ನು ಅರಿಯುತ್ತ ಹೋದಂತೆ ನಮ್ಮೊಳಗಿನ ಎಲ್ಲ ವಿಷಯಗಳು ನಿರ್ಲಿಪ್ತ ಗೊಳ್ಳುತ್ತವೆ, ನಿಜದ ನೆಲೆಗೆ ಒಲಿದುಕೊಳ್ಳುತ್ತವೆ. ನಮ್ಮೊಳಗೆ ಬೆಳೆದುಕೊಂಡು ಗಲಿಬಿಲಿ ಗದ್ದಲಕ್ಕೆ ಕಾರಣವಾದ ಬದುಕಿನ ವಿಷಮತೆಗಳಲ್ಲಿ ಸಮತೆ ತರುವ ಧೀಶಕ್ತಿ ಶರಣರ ಸೂಳ್ನುಡಿಯೊಳಗಿದೆ.

ಮಾನವನ ಬದುಕಿನ ಸೊಬಗು-ಸಂತೋಷ, ಸೌಖ್ಯ, ಚಿಂತನ, ಚತುರತೆ, ಸಂವಾದ, ಅರಿವು, ವಿಚಾರಗಳೆಲ್ಲವೂ ಮಾತಿನ ಮೂಲಗಳೇ ಆಗಿವೆ. ಒಂದು ಮಾತು ಕಟುಕನನ್ನು ಸಂತನನ್ನಾಗಿ ಮಾಡುವ ಶಕ್ತಿ ಹೊಂದಿದೆ. ಮನ ಪರಿವರ್ತನೆಗೆ ಮಾತು ಸಶಕ್ತ ಮಾಧ್ಯಮವಾಗಿದೆ. ಮನುಷ್ಯ ಬದುಕಿಗೆ, ಅಥವಾ ಇನ್ನಾವುದೇ ಇಕ್ಕಟ್ಟು-ಬಿಕ್ಕಟ್ಟು-ತಂಟೆ-ತಕರಾರು ಏನೇ ಇದ್ದರೂ ಅದು ಮಾತುಕತೆಯ ಮೂಲಕವೇ ಇತ್ಯರ್ಥಕ್ಕೆ ಬರುತ್ತದೆ. ಮಾತು ಒಂದು ಅರ್ಥದಲ್ಲಿ ಜೀವ ಜಗತ್ತಿನ ತಾರಕಶಕ್ತಿಯೇ ಆಗಿದೆ. ಆದರೆ ಮಾತು ಸಮಯ ಸಂದರ್ಭಕ್ಕೆ ತಕ್ಕುದಾಗಿರಬೇಕಾಗುತ್ತದೆ.

> ಕರಿಯನಿತ್ತಡೆ ಒಲ್ಲೆ, ಸಿರಿಯನಿತ್ತಡೆ ಒಲ್ಲೆ
> ಹಿರಿದಪ್ಪ ರಾಜಶ್ವನಿತ್ತಡೆ ಒಲ್ಲೆ.
> ನಿಮ್ಮ ಶರಣರ ಸೂಳ್ನುಡಿಯ ಒಂದರೆಘುಳಿಗೆಯಿತ್ತಡೆ
> ನಿನ್ನನಿತ್ತೆ ಕಾಣಾ! ರಾಮನಾಥ

ಶರಣರು ತಮ್ಮ ಅನುಭಾವದ ನುಡಿಗಳಿಗೆ ಕೊಟ್ಟ ಪ್ರಾಶಸ್ತ್ಯವು ಮನನ ಯೋಗ್ಯವಾಗಿದೆ. ಶರಣರ ನುಡಿಗಳಲ್ಲಿ ಪರಮಾಪ್ತತೆ ಮತ್ತು ಮಾನವೀಯ ಅನುಕಂಪವು ಸುವಿಸ್ತಾರವೂ, ರಸವತ್ತಾಗಿ ತುಂಬಿಕೊಂಡಿದೆ. ಮನದ ಮೈಲಿಗೆಯನ್ನು ಕಳೆಯುವ ಸೂಳ್ನುಡಿಗಳು ಮಹದಾನಂದವನ್ನು ಪೂರೈಸುವ ವಾಹಕಗಳಾಗಿ ಜನಪರ ಕಾಳಜಿಯನ್ನು ಹೊಂದಿವೆ. ಜನಜೀವನದೊಳಗೆ ಸಾಮರಸ್ಯ, ಸಮಭಾವ, ಸಮಾನತೆ, ಸದಭಿರುಚಿ, ಸದಾಚಾರ, ಸದ್ಗುಣಗಳೆಲ್ಲವನ್ನು ಪೂರೈಸುವ ಮಾರ್ಗಸೂಚಿಗಳಾಗಿರುವ ಶರಣರ ವಚನಗಳು ಸತ್ಯಸಂಗತಿಗಳಿಂದ ಕೂಡಿಕೊಂಡಿದೆ. ಒಬ್ಬರಿಗೊಬ್ಬರು ಕೂಡಿ ಬಾಳುವ, ಕೂಡಿ ನಲಿಯುವ, ಸುಖದುಃಖಗಳನ್ನು ಹಂಚಿಕೊಳ್ಳುವ, ತಪ್ಪು-ಒಪ್ಪುಗಳನ್ನು ಪರಾಮರ್ಶಿಸುವ ವಚನಗಳಲ್ಲಿ ಜೀವನಾನುಭವ ತುಂಬಿದೆ. ಈ ಜೀವನಾನುಭವವನ್ನು ಆಹ್ವಾದಿಸುತ್ತ ಹೋದಂತೆ ಬದುಕು ಅರಿವಿನ ಗುರುವಾಗಿ ದಿವ್ಯ ಬೆಳಕನ್ನು ತಂದುಕೊಡುತ್ತದೆ. ಈ ದಿವ್ಯ ಬೆಳಕನ್ನು ಹೊಂದಿದ್ದಲ್ಲಿ ಅರಮನೆ, ಸಿರಿ, ಸಂಪತ್ತು ಹೃದಯಸಂಪತ್ತುಗಳಾಗುತ್ತವೆ.

ಸತ್ಸಂಗವು ಸದ್ಗತಿಯ ತವರಾಗಿದೆ, ತಾಣವೂ ಆಗಿದೆ. ಸತ್ಸಂಗ ಶರಣರ ನಡೆ-ನುಡಿಗಳನ್ನು ಪರಿಚಯಿಸುವುದಲ್ಲದೆ ದುರ್ಗುಣಗಳಿಂದ ದೂರ ನಿಲ್ಲುವಂತೆಯೂ ಸತತ ನೋಡಿಕೊಳ್ಳುತ್ತದೆ. ನಿಜಪಥನರಿವುವ ಪರಿಯೇ ಸತ್ಸಂಗದ ವರವಾಗಿದೆ. ಇಂದಿಗೂ ಸಕಲರೂ ಒಳ್ಳೆಯವರ ಸಂಗಡ ಇರಲು ಮತ್ತು ಗೆಳೆತನ ಹೊಂದಲು ಸಲಹೆ ನೀಡುತ್ತಾರೆ. ಏಕೆಂದರೆ ಸಂಗತಿಯ ಫಲಗಳೇ ನಮ್ಮ ನಡೆ-ನುಡಿಗಳಾಗಿ ನಿಲ್ಲುತ್ತವೆ. ಕಡಿ, ಬಡಿ, ಒದಿ ಎನ್ನುವವರೊಂದಿಗಿದ್ದರೆ ನಮ್ಮ ನಡೆ-ನುಡಿ, ಕಡಿ, ಬಡಿ, ಒದಿ ಎನ್ನುವುದೇ ಆಗುತ್ತದೆ.

ಸಂಸಾರದಲ್ಲಿ ಹುಟ್ಟಿ ಮತ್ತೊಂದು ಬಯಸಲೇಕಯ್ಯಾ?
ನಗುವುದು ನುಡಿವುದು ಶಿವಭಕ್ತರೊಡನೆ
ಸುಮ್ಮಾನ ಹಮ್ಮು ಬಿಮ್ಮಾಗಿರಲೇಕಯ್ಯಾ?
ಅಭ್ಯಾಸೇನ ವಿಹೀನಸ್ಯ ತಸ್ಯ ಜನ್ಮ ನಿರರ್ಥಕಮ್ |
ಗುರಾಣಾಪಿ ಸಮಂ ಹಾಸ್ಯಂ ಕರ್ತವ್ಯಂ ಕುಟಿಲಂ ವಿನಾ ||
ನಮ್ಮ ಕೂಡಲಸಂಗನ ಶರಣರೊಡನೆ
ಮನದೆರೆದು ಮಾತನಾಡುವುದಯ್ಯಾ.

ಇಂದು ಮನುಷ್ಯ ಸಕಲ ಸ್ವಾತಂತ್ರ್ಯ, ಹಕ್ಕು, ಅವಕಾಶ, ಸೌಕರ್ಯ್ಯ ಅನುಕೂಲತೆ ಹೊಂದಿದ್ದರೂ ಮನದೆರೆದು ಮಾತನಾಡಲಾರದ ಸ್ಥಿತಿಯೊಳಗಿದ್ದಾನೆ. ಎಷ್ಟೇ ಗುಟ್ಟಾಗಿ ಹೇಳಿದರೂ ರಟ್ಟಾಗುವ ಕಾಲ ಇದಾಗಿದೆ. ಎಲ್ಲೆಡೆ ಒಡಕು-ಕೆಡಗಿನ ಮಾತುಗಳೇ ಕೇಳಿ ಬರುತ್ತಲಿವೆ. ದಾಂಪತ್ಯ ಬದುಕು ವಿವಾದಗಳ ಸುಳಿಯೊಳಗೆ ಸಿಲುಕಿಕೊಂಡಿದೆ. ತಂದೆ-ಮಕ್ಕಳು ಒಬ್ಬರಿಗೊಬ್ಬರು ಮುಖ ನೋಡಲಾರದಷ್ಟು ದ್ವೇಷಕ್ಕೆ ಗುರಿಯಾಗಿದ್ದಾರೆ ಮತ್ತು ಸಮಾಜದ ವ್ಯಕ್ತಿಗಳು ಪರಸ್ಪರರನ್ನು ಸಂಶಯದಿಂದ ಕಾಣುತ್ತಿದ್ದಾರೆ. ಇದಕ್ಕೆಲ್ಲ ಮನದೆರೆದು ಮಾತನಾಡದ ಪರಿಸರವೇ ಕಾರಣವಾಗಿದೆ. ನಾವು ಮುಚ್ಚಿಟ್ಟುಕೊಳ್ಳುವುದು ಏನೂ ಇಲ್ಲದಿದ್ದಲ್ಲಿ ಬೆಚ್ಚಿಬೀಳುವ ಗೊಂದಲ ಹಾಕುವ ಪ್ರಸಂಗವೇ ಇರಲಾರದು. ಶರಣರಂತೆ ಬದುಕಿನಲ್ಲಿ ವಿಷಯಕ್ಕೆ, ವಿಷಯಾಂತರಕ್ಕೆ ಅವಕಾಶವೇ ಸಿಗದು.

**ಉಪಸಂಹಾರ :** ಮಾನವನ ಬದುಕಿನ ಏರುಪೇರಿನೊಳಗೆ ವರ್ತನೆ, ಪರಿವರ್ತನೆ, ಪ್ರಗತಿ-ವಿಗತಿ, ಕಷ್ಟನಷ್ಟ, ದಾರಿದ್ರ್ಯ, ಸಿರಿತನ, ವಿವೇಕ, ಅವಿವೇಕ, ವಿಚಾರ, ವಿವಾದ, ವೈರುಧ್ಯದೊಳಗೆ ಯಾವುದು ಕೇಡು, ಯಾವುದು ಪಾಡು ಎಂದು ವಿವೇಚಿಸಿಕೊಂಡು ದೃಢಪಡಿಸಿಕೊಂಡಿದ್ದೇವೆ. ಯಾವ ಮಾತು ಮನುಷ್ಯನನ್ನು ಮಹೋನ್ನತಿಗೇರಿಸುತ್ತದೆ. ಯಾವ ಮಾತು ಅಧಃಪತನಕ್ಕೆ ಗುರಿಯಾಗುತ್ತದೆಂಬುದು ನಿಶ್ಚಿತಗೊಳಿಸಲಾಗಿದ್ದರೂ ನಮ್ಮೊಳಗಿನ ಮಾತು ಸುಭಾಷಿತವಾಗಿಲ್ಲ, ಪಾರದರ್ಶಕವೂ ಆಗಿಲ್ಲ. ವ್ಯಂಗ್ಯ,

ವಿರೋಧಾಭಾಸ, ವೈರುದ್ಧ, ವಿನಾಕಾರಣ ಗೊಂದಲ, ಗದ್ದಲ, ಗಲೀಜು, ಅಪನಂಬಿಕೆ, ಅಗೌರವ, ಅಸಂಯಮಗಳನ್ನು ಹೆಚ್ಚಿಸುವ ಎಲ್ಲ ಮಾತುಗಳನ್ನು ಅಳಿಸಿಕೊಂಡಷ್ಟು ಮಾನವ ಬದುಕು ಮಾನವೀಯಗೊಳ್ಳುತ್ತವೆ, ಮಾನವೀಯ ಸಂಬಂಧಗಳು ಮಧುರಗೊಳ್ಳುತ್ತವೆ. ನಾವು ಬದುಕುವುದೆಂದರೆ ಸವಿ ಮಾತುಗಳನ್ನು ರೂಢಿಸಿಕೊಂಡು, ಸತ್ಯವಾದ ಮಾತುಗಳಂತೆ ನಡೆದು, ಶರಣರು ಹೇಳಿದಂತೆ ಸದ್ಗುಣಶೀಲರಾಗುವುದಾಗಿದೆ. ಬದುಕು ಸಂತೋಷಮಯವಾಗಿದೆ. ಆದರೆ ಅಸಂತುಷ್ಟ ನಡೆ-ನುಡಿಗಳು ಗಾಬರಿಗೊಳಿಸುವಷ್ಟು ಸಮಸ್ಯೆಗಳನ್ನು, ಬಿಕ್ಕಟ್ಟುಗಳನ್ನು ಸೃಷ್ಟಿಸಿವೆ. ಸತ್ಯಭಾಷೆಯನ್ನು ನಂಬಬೇಕೆಂಬುದು ಒತ್ತಾಸೆಯಾದರೂ ಕುಭಾಷೆಯನ್ನೇ ಬಳಸುವ ಪ್ರಸಂಗಗಳು ಹೆಚ್ಚುತ್ತಲಿವೆ. ದಪ್ಪತೊಗಲಿನ ಮನುಷ್ಯರಿಗೆ ಸವಿನುಡಿಗಳು ಸೂಳ್ನುಡಿಗಳಿಂದ ಎಚ್ಚರಿಸಲಾಗದೆಂಬ ಮಾತು ಮಾರ್ಮಿಕವೂ, ಪ್ರಯೋಗಶೀಲವೂ ಆಗಿದೆ. ಮನುಷ್ಯ ಹೆಚ್ಚೆಚ್ಚು ಸಂವೇದನಶೀಲಗೊಳ್ಳುವುದೆಲ್ಲವೂ ಸುಭಾಷೆಯನ್ನೇ ನಂಬಿ ಬದುಕುವುದಾಗಿದೆ.

ಆಧುನಿಕ ರಂಗುರಂಗೀನ ಆಕರ್ಷಣೆ, ಮನರಂಜನೆ, ಮೋಜು-ಮಸ್ತಿಗಳಿಗೆ ಒಳಗಾಗಿರುವ ಮನುಷ್ಯ ಬದುಕಿನೊಳಗೆ ಸೊಗಸನ್ನೇ ಕಳೆದುಕೊಂಡು ಮಾತುಮಾತಿಗೆ ತಪ್ಪುತ್ತಿದ್ದಾನಲ್ಲದೆ ಕುಭಾಷೆಗೂ ಒಳಗಾಗಿದ್ದಾನೆ. ಮಾನವೀಯ ಭಾಷೆಯನ್ನು ಕೆಡಿಸಿಕೊಂಡು ಬದುಕುವುದೆಂದರೆ ವಿಗತಿಗೆ, ವಿಘಟನೆಗೂ ಗುರಿಯಾಗುವುದಾಗಿದೆ.

□

# 'ಸಿದ್ಧಾಂತ ಶಿಖಾಮಣಿ' ಮತ್ತು 'ಏಕೋತ್ತರ ಶತಸ್ಥಲ' : ಸಾಹಿತ್ಯ ಸಮೀಕ್ಷೆ

**ಡಾ. ಎಸ್.ಆರ್. ಗುಂಜಾಳ**

**1. ಹಿನ್ನೆಲೆ**

ಮಾನವನು ಜನ್ಮತಃ ಉಪಾಸನಾ ಪ್ರಾಣಿ. ತನ್ನಿಂದ ಭಿನ್ನವಾದ ಸೃಷ್ಟಿಯ ವಸ್ತುಗಳನ್ನು ದೈವೀಕರಿಸಿ ಪೂಜಿಸುತ್ತಾ ಬಂದಿದ್ದಾನೆ. ಪುರಾಣದಲ್ಲಿ ಉಲ್ಲೇಖಿಸಿರುವಂತೆ ಭಾರತದಲ್ಲಿ 33 ಕೋಟಿ ದೇವತೆಗಳು ಇರುವರೆಂದು ತಿಳಿದುಬರುತ್ತದೆ. ಹೀಗೆ ಬಹುದೇವತಾ ಉಪಾಸನೆಯಿಂದ ಮಾನವನ ಮನಸ್ಸಿಗೆ ಶಾಂತಿ ಸಮಾಧಾನಗಳಾಗಲಿಲ್ಲ. ಅವನ ಬುದ್ಧಿಯು ಕಾಲಕ್ರಮದಲ್ಲಿ ಅರಳಿದಂತೆ ಈ ವಿಷಯ ಕುರಿತು ಅವರಿಂದ ಅನೇಕ ತಾತ್ವಿಕ ಗ್ರಂಥಗಳು ರಚಿಸಲ್ಪಟ್ಟವು. ಭಾರತೀಯರಿಂದ ರಚಿಸಲ್ಪಟ್ಟ ಭಗವದ್ಗೀತೆ, ಬ್ರಹ್ಮಸೂತ್ರ, ದಶೋಪನಿಷತ್ತುಗಳು - ಈ 12 ಗ್ರಂಥಗಳಿಗೆ (ಇವುಗಳಿಗೆ ಪ್ರಸ್ಥಾನತ್ರಯಗಳೆಂದು ಹೆಸರು) ಯಾರು ವಿಸ್ತೃತವಾದ ಸೈದ್ಧಾಂತಿಕ ಭಾಷ್ಯ-ವ್ಯಾಖ್ಯಾನವನ್ನು ಮಾಡುವರೋ ಅವರಿಗೆ 'ಆಚಾರ್ಯ' ಪುರುಷರೆಂದು ಕರೆಯುತ್ತಾರೆ. ಇವುಗಳಿಗೆ ಮೊಟ್ಟಮೊದಲು ಸೈದ್ಧಾಂತಿಕ ತಳಹದಿ ಮೇಲೆ ಭಾಷ್ಯ ಬರೆದವರು ಶಂಕರಾಚಾರ್ಯರು. ಈ ಗ್ರಂಥಗಳಲ್ಲಿ ಅವರು 'ದೇವರು ಒಬ್ಬನೇ' ಎಂದು ಪ್ರತಿಪಾದಿಸಿದ್ದಾರೆ. ದೇವರ ಒಂದು ಅಂಶವೇ ಜೀವವೆಂದು 'ಅದ್ವೈತತತ್ತ್ವ'ದಲ್ಲಿ ಹೇಳಿದ್ದಾರೆ. ಅಂತೆಯೇ ಅವರ ಭಾಷ್ಯದಲ್ಲಿ 'ಅಹಂ ಬ್ರಹ್ಮಾಸ್ಮಿ', 'ತತ್ತ್ವಮಸಿ' ಎಂಬ ಉಕ್ತಿಗಳು ಸಿಕ್ಕುತ್ತವೆ. ಇವು ಪ್ರಸಿದ್ಧವಾದ ಉಲ್ಲೇಖಗಳಾಗಿವೆ. ಈ 12 ಗ್ರಂಥಗಳಿಗೆ ಬರೆದ ಶಂಕರಾಚಾರ್ಯರ ಭಾಷ್ಯವನ್ನು ಓದಿದ ಮಧ್ವಾಚಾರ್ಯರಿಗೆ ಹಿಡಿಸಲಿಲ್ಲ. ಅವರು ಜೀವವೇ ಬೇರೆ, ದೇವನೇ ಬೇರೆ ಎಂಬ ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ಪ್ರಸ್ಥಾನತ್ರಯಗಳಿಗೆ ಭಾಷ್ಯವನ್ನು ಬರೆದರು. ಹೀಗಾಗಿ ಅದು ದ್ವೈತ ಸಿದ್ಧಾಂತವೆಂದೂ, ಮಧ್ವಮತ ಎಂದೂ ಪ್ರಸಿದ್ಧಿ ಪಡೆಯಿತು.

ಶಂಕರ ಮತ್ತು ಮಾಧ್ವರ ಪ್ರಸ್ಥಾನತ್ರಯಗಳ ವ್ಯಾಖ್ಯಾನವನ್ನು ಓದಿದ ರಾಮಾನುಜರು ಅದ್ವೈತ ದ್ವೈತಗಳಿಗಿಂತ ಭಿನ್ನವಾದಂಥ ಅರ್ಥವನ್ನು ಅವುಗಳಲ್ಲಿ

---

**ಡಾ. ಎಸ್.ಆರ್. ಗುಂಜಾಳ**, ಸಂತೂಬಾಯಿ ಅಪಾರ್ಟ್‌ಮೆಂಟ್, ಕೋರ್ಟ್ ರಸ್ತೆ, ಧಾರವಾಡ

ಕಂಡುಕೊಂಡರು. ಅದಕ್ಕೆ ವಿಶಿಷ್ಟಾದ್ವೈತ ಸಿದ್ಧಾಂತವೆಂದು ಕರೆಯಲಾಯಿತು. ಇದೇ ರೀತಿ ಪ್ರಸ್ಥಾನತ್ರಯಗಳಲ್ಲಿ ನಿಂಬಕಾಚಾರ್ಯರು ದ್ವೈತಾದ್ವೈತ ಸಿದ್ಧಾಂತವನ್ನು, ವಲ್ಲಭಾಚಾರ್ಯರು ಶುದ್ಧಾದ್ವೈತ ಸಿದ್ಧಾಂತವನ್ನೂ ಕಂಡುಕೊಂಡಿದ್ದಾರೆ.

ಭಾರತದಲ್ಲಿ ವೈದಿಕ ಧರ್ಮವನ್ನು ಒಪ್ಪಿಕೊಂಡ ಎಲ್ಲ ಪಂಡಿತರೂ ಪ್ರಸ್ಥಾನತ್ರಯ ಗಳಿಗೆ ತಮ್ಮದೇ ಆದ ಸೈದ್ಧಾಂತಿಕ ಭಾಷ್ಯವನ್ನು ಬರೆದು ಆಚಾರ್ಯ ಪದವಿಯನ್ನು ಪಡೆದಿದ್ದಾರೆ.

ಮೇಲೆ ಹೇಳಲ್ಪಟ್ಟ ಅದ್ವೈತ, ದ್ವೈತ, ವಿಶಿಷ್ಟಾದ್ವೈತ, ಶುದ್ಧಾದ್ವೈತ, ದ್ವೈತಾದ್ವೈತ ಸಿದ್ಧಾಂತಗಳನ್ನು ಪ್ರಸ್ಥಾನತ್ರಯಗಳಿಗೆ ಆರೋಪಿಸಿ ಅರ್ಥ ಮಾಡಿರುವುದು ಕಂಡು ಬರುತ್ತದೆಯಷ್ಟೇ. ಈ ಆಚಾರ್ಯರ ಪ್ರಭಾವಕ್ಕೆ ಒಳಗಾಗಿ ವೀರಶೈವರು ಸಹ ಈ ಗ್ರಂಥಗಳಿಗೆ ಭಾಷ್ಯವನ್ನು ಬರೆಯಲು ಯತ್ನಿಸಿರುವುದು ಕಂಡುಬರುತ್ತದೆ.

ಇಲ್ಲಿ ಟಿ.ಜಿ. ಸಿದ್ಧಪ್ಪಾರಾಧ್ಯರ 'ಭಗವದ್ಗೀತಾ ವೀರಶೈವ ಭಾಷ್ಯಂ' ಗ್ರಂಥವನ್ನು ಉದಾಹರಿಸಬಹುದು.

ಹೀಗೆ ಪ್ರಸ್ಥಾನತ್ರಯಗಳು ವಿವಿಧ ಅರ್ಥವನ್ನು ವ್ಯಕ್ತಪಡಿಸಿರುವುದರಿಂದ ಓದುಗರಲ್ಲಿ ಸಂಶಯವನ್ನುಂಟುಮಾಡುತ್ತವೆ. ಸಿದ್ಧಾಂತಗಳು ಒಂದು ರೀತಿಯಲ್ಲಿ ಗಣಿತಶಾಸ್ತ್ರವನ್ನು ನೆನಪಿಗೆ ತರುತ್ತವೆ.

| | |
|---|---|
| 1. ಅದ್ವೈತ | 1. (ಜೀವದೇವ ಒಬ್ಬನೇ) |
| 2. ದ್ವೈತ | 2. (ಜೀವ-ದೇವ ಬೇರೆ ಬೇರೆ) |
| 3. ವಿಶಿಷ್ಟಾದ್ವೈತ | 3. (ವಿಶಿಷ್ಟವಾದ ಜೀವ + ದೇವ) |
| 4. ಶಕ್ತಿವಿಶಿಷ್ಟಾದ್ವೈತ | 4. (ಶಕ್ತಿ-ವಿಶಿಷ್ಟವಾದ ಜೀವ+ದೇವ) |

ಗಣಿತಶಾಸ್ತ್ರವನ್ನು ಅವಲಂಬಿಸಿ ಬುದ್ಧಿಯು ದೇವರ ಅಸ್ತಿತ್ವವನ್ನು ಎಣಿಸಲು ಪ್ರಯತ್ನಿಸುತ್ತದೆ. ಈ ವಿಷಯವಾಗಿ ಅನುಭಾವಿಗಳಾದ ರೆ. ಉತ್ತಂಗಿ ಚೆನ್ನಪ್ಪನವರು ಹೇಳುವ ಮಾತುಗಳು ಇಲ್ಲಿ ಅತ್ಯಂತ ಗಮನಾರ್ಹವಾಗಿವೆ.

"ನನ್ನ ಪ್ರೇಮದ ವಿಷಯವೆಂದರೆ ತತ್ವಶಾಸ್ತ್ರ. ನಾನು ಇಪ್ಪತ್ತೈದು ವರ್ಷ ಪ್ರಾಚ್ಯ ಹಾಗೂ ಪಾಶ್ಚಾತ್ಯ ತತ್ವದರ್ಶನಗಳ ವ್ಯಾಸಂಗ ಮಾಡಿರುವೆ. ತತ್ತ್ವಶಾಸ್ತ್ರವು ಕೊನೆಗೆ ಗಣಿತಶಾಸ್ತ್ರದಲ್ಲಿ ಪರ್ಯವಸಾನ ಹೊಂದುವುದೆಂದು ನನ್ನ ಮತ. ಹೀಗಾಗಿ ಒಂದು ವೇಳೆ ಬರೆದಿದ್ದರೆ 'Mathematics of Philosophy' ಎಂಬ ಗ್ರಂಥವೊಂದನ್ನು ಬರೆಯಬಹುದಿತ್ತು. ಆದರೆ, ದರ್ಶನಗಳೆಲ್ಲ ಏಕದೇಶೀಯವಾಗಿದ್ದು, ಪ್ರತಿಯೊಂದು ತತ್ತ್ವವು ಕೊನೆಗೆ ನಿಲುಗಡೆಯಿಲ್ಲದೆ ಹೋಗುವುದೆಂದು ತಿಳಿದುಬಂದುದರಿಂದ ಆ ವಿಷಯವಾಗಿ ನನ್ನಲ್ಲಿ ಅತ್ಯಂತ ಜಿಗುಪ್ಸೆಯುಂಟಾಯಿತು....ನಾನು ವೀರಶೈವ ಧರ್ಮವನ್ನರಿತುಕೊಳ್ಳಲು ಯತ್ನಿಸಿದ್ದು ಸರ್ವಜ್ಞನಿಗಾಗಿಯೇ. ಇದೇ ಸಮಯಕ್ಕೆ

ಜ್ಞಾನವೆಂದರೆ ಕ್ರಿಯೆ, ಕ್ರಿಯೆ ಎಂದರೆ ಜ್ಞಾನ ಎಂದು ನನಗೆ ಮನವರಿಕೆಯಾದುದರಿಂದ ಕ್ರಿಯಾರಹಿತವಾದ ತತ್ತ್ವವಿಚಾರಕ್ಕೆ ವಿಮುಖನಾಗಿ ಕ್ರಿಯಾಸಹಿತವಾದ ಅನುಭಾವಕ್ಕೆ ಅಭಿಮುಖನಾದೆ. ಮುತ್ತು ಕಳೆದುಕೊಂಡವನಿಗೆ ಮಾಣಿಕ್ಯವು ದೊರೆತಂತಾಯಿತು. ನನ್ನಿಂದ ಶೋಧಿಸಲ್ಪಟ್ಟ 'ಅನುಭವ ಮಂಟಪವು' ನನಗೆ ನೆರೆಮನೆಯಾಯಿತು".

ಹೀಗೆ ದೇವರ ರೂಪವನ್ನು ಬುದ್ಧಿಯ ಪ್ರಮಾಣದಿಂದ ಎಣಿಸಿ ಹೇಳುವುದನ್ನು ಶರಣರು ತಿರಸ್ಕರಿಸಿದ್ದಾರೆ. ಬಸವಣ್ಣನವರು :

ದ್ವೈತಾದ್ವೈತವನೋದಿ ಏನ ಮಾಡುವಿರಯ್ಯಾ?
ನಮ್ಮ ಶರಣರಿಗೆ ಉರಿಗೆ ಅರಗಾಗಿ ಕರಗದನ್ನಕ್ಕ,
ಸ್ಥಾವರಜಂಗಮವೊಂದೆ ಎಂದು ನಂಬದನ್ನಕ್ಕ?
ಕೂಡಲಸಂಗಮದೇವಾ,
ಬರಿಯ ಮಾತಿನ ಮಾಲೆಯಲೇನಹುದು? (ಬ.ವ. 191)

ಎಂದು ಹೇಳಿದ್ದು ನೋಡಿದರೆ ದೇವರ ನಿಲುವನ್ನು ಪ್ರಸ್ಥಾನತ್ರಯಗಳನ್ನು ಆಧರಿಸಿ ಹೇಳಿದ 6 ಜನ ಆಚಾರ್ಯಪುರುಷರ ಅನುಭವವಿಲ್ಲದ ವ್ಯಾಖ್ಯಾನಗಳು 'ಬರಿಯ ಮಾತಿನ ಸರಮಾಲೆ' ಎಂಬುದು ಸ್ಪಷ್ಟವಾಗುತ್ತದೆ. ಆದುದರಿಂದ ಜ್ಞಾನವೇ ಕ್ರಿಯೆ, ಕ್ರಿಯೆ ಜ್ಞಾನ ಎಂಬ ಸುವರ್ಣ ಸೂತ್ರವನ್ನು ಹಿಡಿದು ಶಿವಜ್ಞಾನವನ್ನು ಶರಣರು ಪ್ರತ್ಯಕ್ಷ ಮಾಡಿಕೊಂಡು ನುಡಿದ ನುಡಿಗಳೇ ವಚನಗಳಾದವು. ಹೀಗಾಗಿ 'ಶರಣರ ಅನುಭಾವವು ಗಜವೈದ್ಯವಾಯಿತು.' ಬಸವಣ್ಣನವರ ಕಟ್ಟಾನುಯಾಯಿಯಾದ ಸರ್ವಜ್ಞನು ನುಡಿದ ವಚನವು ಸಹ ಇಲ್ಲಿ ಹೆಚ್ಚು ಪ್ರಸ್ತುತವಾಗಿದೆ.

ವೇದವೆ ಹಿರಿದೆಂದು ವಾದವನು ಮಾಡುವಿರಿ |
ವೇದದಲಿ ಏನು ಹಿರಿದುಂಟು? ಅನುಭವಿಯ |
ವೇದವೇ ವೇದ || ಸರ್ವಜ್ಞ ||

12ನೇ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ನಡೆದ ಶರಣರ ಕ್ರಾಂತಿಯು ಭಾರತೀಯ ಧಾರ್ಮಿಕ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆಯಲು ಅರ್ಹವಾಗಿದೆ. ಆ ಕಾಲದಲ್ಲಿ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಕ್ರಿಯಾಶೀಲ ಸಮಾಜ ಸೇವಕರಿದ್ದರೆಂದು ಸಾಹಿತ್ಯದಲ್ಲಿ ಉಲ್ಲೇಖಿಗೊಂಡಿದೆ. ಇವರಲ್ಲಿ ಸಾವಿರಾರು ಶರಣರು ವೈದಿಕ ಧರ್ಮದ ವೇದ, ಆಗಮ, ಪುರಾಣ, ಉಪನಿಷತ್ತು, ಬ್ರಹ್ಮಸೂತ್ರ, ಭಗವದ್ಗೀತೆ ಮುಂತಾದ ಸಂಸ್ಕೃತ ವೈದಿಕ ಗ್ರಂಥಗಳನ್ನೆಲ್ಲಾ ಸಂಪೂರ್ಣ ಅರಿತವರಾಗಿದ್ದ ರೆಂಬುದರಲ್ಲಿ ಸಂದೇಹವಿಲ್ಲ. ಅವುಗಳಲ್ಲಿ ಪ್ರಾವೀಣ್ಯತೆಯನ್ನು ಕೂಡ ಪಡೆದವ ರಾಗಿದ್ದರು. ಆದರೆ ಅನುಭಾವಿಗಳಾದ ಅವರು ಈ ಬುದ್ಧಿಯ ಚಾಣಾಕ್ಷತೆಯನ್ನು ಉಪಯೋಗಿಸಿ ಪ್ರಸ್ಥಾನತ್ರಯಗಳಿಗೆ ಭಾಷ್ಯವನ್ನು ಬರೆಯಬಹುದಾಗಿತ್ತು. ಆದರೆ

ಕ್ರಿಯಾಹೀನವಾದಂಥ, ಇಂಥ ತರ್ಕ-ವಿತರ್ಕಗಳಿಂದ ಕೂಡಿದ ಅನುಭವಶೂನ್ಯ ಭಾಷ್ಯವನ್ನು ಬರೆಯಹೋಗಲಿಲ್ಲ. ಹೀಗಾಗಿ ಅವರದು ಪ್ರತ್ಯಕ್ಷಪ್ರಮಾಣವಾದ ಅನುಭಾವ ಸಿದ್ಧಾಂತವಾಯಿತು. ಆಚಾರಶೀಲವಾದ ಅನುಭಾವ ಸಿದ್ಧಾಂತವು ಅನುಭವ ಮಂಟಪದಲ್ಲಿ ಹುಟ್ಟಿ ಬಂದಿತು. ಈ ಅನುಭಾವ ಸಿದ್ಧಾಂತವೇ ವಚನ-ಸ್ವರವಚನ ವಾಙ್ಮಯವಾಗಿದೆ.

The Universal gospel of Upanishads praised by Romain Rolland, preached by Vivekananda, practised by Rama-Krishna Parama-Hamsa, supported by Prof. Duessen, philosophised by Aurobindo, and propounded and propagated by Radhakrishna, the modern stalwart of Hinduism, is ever preached and never practiced on a wide scale in India. The Vachanakaras always have criticised Upanishadic thought as "Vagadvaita". Knowledge in theory not in practice. Thus I have appreciated Anubhavamantapa Mysticism in paralytic India, not for equation but for its action. Therefore, "Sunya Sampadane" is fundamentally not against personality or self consciousness, but against consciousness of pride in the spiritual growth which is foreign to, and therefore an impediment on the way to the pilgrim's progress of the soul".

ಇಂದಿನ ಲಿಂಗವಂತರಾದ ಸಂಸ್ಕೃತ ಕಲಿತ ವಿದ್ವಾಂಸರು ಇನ್ನಿತರ ಆಚಾರ್ಯರಂತೆ ಪ್ರಸ್ಥಾನತ್ರಯಗಳಿಗೆ ಭಾಷ್ಯ ಬರೆಯುವುದರೊಂದಿಗೆ ಕನ್ನಡವನ್ನು ತಿರಸ್ಕರಿಸಿ ಸಂಸ್ಕೃತ ವೈದಿಕ ಗ್ರಂಥಗಳಿಗೆ ದಾಸರಾಗುತ್ತಿರುವುದು ಕಂಡುಬರುತ್ತಿದೆ. ಈ ಗ್ರಂಥಗಳ ದಾಸ್ಯತ್ವ ವನ್ನು ಸಂಪೂರ್ಣ ತಿರಸ್ಕರಿಸಿದ ಬಸವಣ್ಣನವರು ಭಾರತದ ಮೊಟ್ಟ ಮೊದಲನೆಯ ವಿಚಾರವಾದಿ (First Free thinker of India) ಎಂಬ ಅಭಿಧಾನಕ್ಕೆ ಅರ್ಹರಾಗಿರುವ ರೆಂದು ಅರ್ಥರ್ ಮೈಲ್ಸ್ (Arthur Miles) ಎಂಬ ಪಾಶ್ಚಾತ್ಯ ಪಂಡಿತನು ಹೇಳಿದ್ದಾನೆ. ಜೇಮ್ಸ್ ಕ್ಯಾಂಬೆಲ್ ಎಂಬ ಮತ್ತೊಬ್ಬ ಸಮಾಜಶಾಸ್ತ್ರಜ್ಞನು ಇಂದಿನ ಭಾರತೀಯ ಸಮಾಜಸುಧಾರಕರು, ಬಸವಣ್ಣನವರು ಆಚರಿಸಿ ತೋರಿದ ಅನೇಕ ಸುಧಾರಣೆಗಳಲ್ಲಿ ಯಾವುದಾದರೂ ಒಂದು ಸುಧಾರಣೆಯನ್ನು ಮಾಡಲು ಪ್ರಯತ್ನಿಸಿ ಗೊತ್ತಿಗೆ ಮುಟ್ಟದೆ ಹೋಗುತ್ತಿದ್ದಾರೆ ಎಂದು ಅಭಿಪ್ರಾಯಪಟ್ಟಿದ್ದಾನೆ. ಆದುದರಿಂದ ನಾವು ಶರಣರು ಅನುಭವದಿಂದ ತ್ಯಾಜ್ಯವೆಂದು ಬಿಟ್ಟಂಥ ಸಂಪ್ರದಾಯವನ್ನು ಪುನಃ ಹಠಮಾರಿತನದಿಂದ ಸಮಾಜದಲ್ಲಿ ಎಳೆದು ತರುವುದು ಅಪ್ರಸ್ತುತವೆನಿಸುತ್ತದೆ. ಅದೇನೇ ಇರಲಿ,

ಈ ಹಿನ್ನೆಲೆಯಲ್ಲಿ ಸಿದ್ಧಾಂತ ಶಿಖಾಮಣಿ ಮತ್ತು ಏಕೋತ್ತರ ಶತಸ್ಥಲ ಈ ಎರಡು ಮೂಲ ಗ್ರಂಥಗಳನ್ನು ಕುರಿತು ಸಂಸ್ಕೃತ, ಮರಾಠಿ, ಕನ್ನಡದಲ್ಲಿ ಮೂಡಿ ಬಂದ ಗ್ರಂಥ ಹಾಗೂ ಲೇಖನಗಳ ಒಂದು ಸಂಕ್ಷೇಪವಾದ ಸಮೀಕ್ಷೆಯನ್ನಿಲ್ಲಿ ಮಾಡುತ್ತೇನೆ.

**2. ಸಿದ್ಧಾಂತ ಶಿಖಾಮಣಿ**

ಸಿದ್ಧಾಂತ ಶಿಖಾಮಣಿಯು ಸಂಸ್ಕೃತದಲ್ಲಿ ಶಿವಯೋಗಿ ಶಿವಾಚಾರ್ಯರಿಂದ ಬರೆಯಲ್ಪಟ್ಟಿದುದು. ಅದು ಲಿಂಗವಂತ ಧರ್ಮದ ಷಟ್ಸ್ಥಲ ಸಿದ್ಧಾಂತವನ್ನು ಪ್ರತಿಪಾದಿಸುತ್ತದೆಂದು ಹೇಳಲಾಗಿದೆ. ಇದರಲ್ಲಿ ಷಟ್ಸ್ಥಲ ಸಿದ್ಧಾಂತವು ಏಕೋತ್ತರ ಶತಸ್ಥಲಗಳಲ್ಲಿ, ನೂರೊಂದು ವಿಭಾಗಗಳಲ್ಲಿ ವಿವೇಚಿಸಲಾಗಿದೆ ಎಂದು ಕೆಲವು ವಿದ್ವಾಂಸರ ಅಭಿಪ್ರಾಯವಾಗಿದೆ.

ಸಿದ್ಧಾಂತ ಶಿಖಾಮಣಿಯ ಕಾಲವನ್ನು ಕುರಿತು ಪಂಡಿತ ಕಾಶಿನಾಥಶಾಸ್ತ್ರಿಗಳು 2000 ವರ್ಷಗಳ ಹಿಂದೆ ರಚಿತವಾಯಿತೆಂದು ಹೇಳಿದ್ದಾರೆ.

"ನಮ್ಮ ಭರತಖಂಡದಲ್ಲಿ ಬೌದ್ಧ ಸಿದ್ಧಾಂತವು ಈಗ್ಗೆ 2 ಸಾವಿರ ವರ್ಷಗಳ ಪೂರ್ವದಲ್ಲಿ ವಿಶೇಷ ಪ್ರಚಾರದಲ್ಲಿದ್ದಿತೆಂಬ ವಿಷಯವು ಎಲ್ಲರಿಗೂ ತಿಳಿದುದಾಗಿದೆ. ಬೌದ್ಧರ ಪ್ರಾಬಲ್ಯ ಸಮಯದಲ್ಲಿಯೇ ಈ ಮಹನೀಯರು (ಶಿವಯೋಗಿ ಶಿವಾಚಾರ್ಯ) ಜನ್ಮವೆತ್ತಿದರೆಂಬ ವಿಷಯವು ಇವರ ಬರವಣಿಗೆಯಿಂದಲೇ ತೋರಿಬರುವುದರಿಂದ ಇವರು ಈಗ್ಗೆ 2 ಸಾವಿರ ವರ್ಷಗಳ ಪೂರ್ವದಲ್ಲಿ ಇದ್ದರೆಂಬುದು ನಿರ್ವಿವಾದವು. ಇದೇ ರೀತಿಯಲ್ಲಿ ಅನೇಕ ಜನ ವಿದ್ವಾಂಸರು ಇವರು 2 ಸಾವಿರ ವರ್ಷಗಳ ಪೂರ್ವದಲ್ಲಿದ್ದರೆಂದು ಅಭಿಪ್ರಾಯ ಪಡುತ್ತಾರೆ. "ಆ ಅನೇಕ ಜನ ವಿದ್ವಾಂಸರ ಹೆಸರುಗಳನ್ನು ಹೇಳಿಲ್ಲ.

ಶಾಸ್ತ್ರಿಗಳ ನಂತರದ ಕಾಲದಲ್ಲಿ ಸಿದ್ಧಾಂತ ಶಿಖಾಮಣಿಯ ರಚನೆಯ ಕಾಲವನ್ನು ಕುರಿತು ಅನೇಕ ವಿದ್ವಾಂಸರಲ್ಲಿ ವಾದ ವಿವಾದಗಳು ಚರ್ಚೆಗಳು ನಡೆದವು. ಅವರಲ್ಲಿ ಡಾ. ಎಂ. ಶಿವಕುಮಾರ ಸ್ವಾಮಿಗಳು ವಿವಿಧ ಪಂಡಿತರ ವಿಚಾರಗಳನ್ನು ವಿಮರ್ಶೆಗೆ ಒಳಪಡಿಸಿ ಹೀಗೆ ಹೇಳಿರುವರು:

"ಮೇಲಿನ ಆಧಾರಗಳಿಂದ ಸಿದ್ಧವಾಗುವಂತೆ ಕ್ರಿ.ಶ. 1ನೇ ಶತಮಾನಕ್ಕೆ ಸೇರಿದ ಶ್ರೀಕರ ಭಾಷ್ಯವು ಸಿದ್ಧಾಂತ ಶಿಖಾಮಣಿಯನ್ನು ಹೆಸರಿಸಿ ಉಲ್ಲೇಖಿಸುತ್ತದೆ. ಆದ್ದರಿಂದ ಸಿದ್ಧಾಂತ ಶಿಖಾಮಣಿಯ ಕಾಲವು 10ನೇ ಶತಮಾನಕ್ಕಿಂತ ಅನಂತರದ್ದಿರಲಾರದು. ಅದು ಎಷ್ಟು ಪ್ರಾಚೀನವಿರಬಹುದು ಎಂಬುದನ್ನು ನಿರ್ಣಯಿಸುವುದು ಕಷ್ಟ. ಆದರೆ ಮುಂದೆ ಚರ್ಚಿಸಲಾಗುವ ವಿಷಯದಿಂದ ಸ್ಪಷ್ಟವಾಗುವಂತೆ ಸಿದ್ಧಾಂತ ಶಿಖಾಮಣಿಯ ಮೇಲೆ ಶಂಕರಾದ್ವೈತದ ಪ್ರಭಾವವು ಕಂಡುಬರುವುದರಿಂದ ಅದು ಕ್ರಿ.ಶ. 8ನೇ

ಶತಮಾನಕ್ಕಿಂತ ಹಿಂದಿನದಿರಲಾರದು." (ಶ್ರೀಖರಭಾಷ್ಯವು ಖೊಟ್ಟಿ ಗ್ರಂಥವೆಂದು ಈಗ ವಿದ್ವಾಂಸರು ನಿರ್ಣಯಿಸಿದ್ದಾರೆ)

ಒಟ್ಟಿನಲ್ಲಿ ಸಿದ್ಧಾಂತ ಶಿಖಾಮಣಿಯು 8ನೇ ಶತಮಾನದಿಂದ 11ನೇ ಶತಮಾನದ ಕಾಲಾವಧಿಯಲ್ಲಿ ಸಿದ್ಧವಾಗಿದೆಯೆಂದು ಸ್ಪಷ್ಟಪಡಿಸಿದ್ದಾರೆ. ಆದರೆ ಉಜ್ಜನೀಶ ವಿರಚಿತ ಸಿದ್ಧಾಂತ ಶಿಖಾಮಣಿಯ ವ್ಯಾಖ್ಯಾನವನ್ನು ಪರಿಷ್ಕರಿಸಿದ ಡಾ. ಜಿ. ಮಂಜುನಾಥನ್ ಎಂಬುವವರು ಸಿದ್ಧಾಂತ ಶಿಖಾಮಣಿಯು ರಚಿತವಾದ ಕಾಲ 10-11ನೇ ಶತಮಾನಗಳ ನಡುವಿನ ಅವಧಿಯೆಂದು ಭಾವಿಸಿದ್ದಾರೆ.

ಆದರೆ ಡಾ. ಆರ್.ಸಿ. ಹಿರೇಮಠರು ಕೆಲವು ವರುಷಗಳ ಹಿಂದೆ ಬರೆದಿರುವ ಮಹಾಯಾತ್ರೆ ಗ್ರಂಥದಲ್ಲಿ ಸಿದ್ಧಾಂತ ಶಿಖಾಮಣಿಯು ಕ್ರಿ.ಶ. 1125ಕ್ಕಿಂತ ಮುಂಚೆ ಬರೆಯಲ್ಪಟ್ಟಿದೆ ಎಂದು ಹೇಳಿರುವರು. ಇದು ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟವಾಗಿದೆ.

ಸಿ.ಪಿ. ಬ್ರೌನ್, ಜಾನ್ ಪೀಟರ್ಸ್ ಶೌಟನ್, ಎಚ್.ವಿ. ನಂಜುಂಡಯ್ಯ, ಚನ್ನಮಲ್ಲಿಕಾರ್ಜುನ ಮುಂತಾದ ವಿದ್ವಾಂಸರು ಸಿದ್ಧಾಂತ ಶಿಖಾಮಣಿಯ ರಚನಾ ಕಾಲವನ್ನು 13ನೇ ಶತಮಾನದಿಂದ 15ನೇ ಶತಮಾನದವರೆಗೆ ಒಯ್ಯುತ್ತಾರೆ.

ಆಧುನಿಕ ವಿದ್ವಾಂಸರಲ್ಲಿ ಪ್ರಖ್ಯಾತ ಸಂಶೋಧಕರಾದ ಡಾ. ಎಂ. ಚಿದಾನಂದ ಮೂರ್ತಿಗಳು ಹೇಳುವ ಮಾತು ಅತ್ಯಂತ ಗಮನಾರ್ಹವಾಗಿದೆ.

"ಸಿದ್ಧಾಂತ ಶಿಖಾಮಣಿಯ ಕಾಲ ಕ್ರಿ.ಶ. 1160 ಕ್ಕಿಂತ ನಿಶ್ಚಿತವಾಗಿಯೂ ಹಿಂದೆ ಅಲ್ಲ, ಬಹುಶಃ ಹದಿಮೂರು ಹದಿನಾಲ್ಕನೇ ಶತಮಾನದ ಕೃತಿ." ಸಿದ್ಧಾಂತ ಶಿಖಾಮಣಿಯಲ್ಲಿ ಪ್ರತಿಯೊಂದು ಶ್ಲೋಕವನ್ನು ಶಿವಯೋಗಿ ಶಿವಾಚಾರ್ಯರು ಪ್ರಾಚೀನ ಸಂಸ್ಕೃತದ ಯಾವ ಯಾವ ಪುರಾಣ ಕಾವ್ಯ ಮುಂತಾದವುಗಳಿಂದ ಆಯ್ದು ನೂರೊಂದು ಸ್ಥಲಗಳಲ್ಲಿ ಹೆಣೆದಿರುವರೆಂಬ ವಿಷಯವನ್ನು ಮೈಸೂರಿನ ಕುಂದೂರು ಮಠದ ಶ್ರೀ ಶಿವಬಸವ ಸ್ವಾಮಿಗಳು 'ಸಿದ್ಧಾಂತ ಶಿಖಾಮಣಿ ಮತ್ತು ಶ್ರೀಕರ ಭಾಷ್ಯಗಳ ನಿಜದ ನಿಲುವು' ಎಂಬ ಸಂಶೋಧನಾತ್ಮಕ ಗ್ರಂಥವನ್ನು ಪ್ರಕಟಿಸಿದ್ದಾರೆ. ಅದರ ಎರಡನೆಯ ಆವೃತ್ತಿಯು 2004ರಲ್ಲಿ ಬೆಳಕು ಕಂಡಿದೆ. ವಿದ್ವಾಂಸರು ಅವಲೋಕಿಸಬೇಕಾದ ಗ್ರಂಥ. ಇದರಲ್ಲಿ ಲೇಖಕರು ಸಿದ್ಧಾಂತ ಶಿಖಾಮಣಿಯ ಎಷ್ಟೋ ಶ್ಲೋಕಗಳನ್ನು ಪ್ರಾಚೀನ ಪುರಾಣಧರ್ಮಗ್ರಂಥಗಳಿಂದ ಎತ್ತಿ ತಂದು ನೂರೊಂದು ಸ್ಥಲಗಳಲ್ಲಿ ಜೋಡಿಸಲಾಗಿದೆ ಎಂದು ಸಾಧಾರವಾಗಿ ತೋರಿಸಿದ್ದಾರೆ.

**3. ಸಿದ್ಧಾಂತ ಶಿಖಾಮಣಿ ಸಾಹಿತ್ಯ**

ಸಿದ್ಧಾಂತ ಶಿಖಾಮಣಿಯನ್ನು ಕುರಿತು ಕನ್ನಡದಲ್ಲಿ ಸುಮಾರು 50 ಗ್ರಂಥಗಳು ಪ್ರಕಟಗೊಂಡಿವೆ. ಅವುಗಳಲ್ಲಿ ಜಚನಿಯವರು 25 ಕ್ಕಿಂತ ಹೆಚ್ಚು ಕೃತಿಗಳನ್ನು

ಪ್ರತ್ಯೇಕವಾಗಿ ಪ್ರಕಟಿಸಿದ್ದಾರೆ. 2 ಕೃತಿಗಳು ತೆಲುಗು ಲಿಪಿಯಲ್ಲಿ ಪ್ರಕಟವಾಗಿವೆ. ಮರಾಠಿಯಲ್ಲಿ ಇಬ್ಬರು ಅನುವಾದಿಸಿದ್ದಾರೆ. ಪುಟ್ಟರಾಜ ಗವಾಯಿಗಳು ಹಿಂದಿಯಲ್ಲಿ ಅನುವಾದಿಸಿದ್ದಾರೆ. ಸಂಸ್ಕೃತದಲ್ಲಿ ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯರು ಸಿದ್ಧಾಂತ ಶಿಖಾಮಣಿ ಸಮೀಕ್ಷೆ ಪಿಎಚ್.ಡಿ. ಪ್ರಬಂಧವನ್ನು ಸಂಸ್ಕೃತದಲ್ಲಿಯೇ ಸಿದ್ಧಪಡಿಸಿದ್ದಾರೆ.

**4. ಏಕೋತ್ತರ ಶತಸ್ಥಲ (ನೂರೊಂದು ಸ್ಥಲ) ಸಾಹಿತ್ಯ**

ಕನ್ನಡದಲ್ಲಿ ಶಿವಶರಣರು ಅನುಭಾವದಿಂದ ಉಸುರಿದ ವಚನಗಳು ಅಗಣಿತ. 12ನೇ ಶತಮಾನದಲ್ಲಿ ಬಸವಾದಿ ಶರಣರ ವಚನ-ಸ್ವರವಚನ ಸಾಹಿತ್ಯವನ್ನು ಸುಸಂಬದ್ಧವಾಗಿ ವಚನಭಂಡಾರದಲ್ಲಿ ಸಂಗ್ರಹಿಸಿ ಇಡಲಾಗುತ್ತಿತ್ತು. ಈ ಗ್ರಂಥಾಲಯದ ವ್ಯವಸ್ಥಾಪಕರನ್ನಾಗಿ ಶಾಂತರಸನೆಂಬ ಶರಣ ವಿದ್ವಾಂಸನನ್ನು ನೇಮಿಸಲಾಗಿತ್ತು. ಇವರು ಸ್ವತಃ 64 ವಚನಗಳನ್ನು ರಚಿಸಿದ್ದಾರೆ. ವಚನಭಂಡಾರದ ಮುಖ್ಯಸ್ಥರಾಗಿದ್ದುದರಿಂದ ಇವರಿಗೆ ವಚನಭಂಡಾರಿ ಶಾಂತರಸನೆಂದು ಹೆಸರಿಸಲಾಗಿದೆ. ವಚನಭಂಡಾರವು ಕೇವಲ ಶರಣರ ವಚನಗಳನ್ನು ಸಂಗ್ರಹಿಸಿಡುವ ಸ್ಥಳವಾಗಿರಲಿಲ್ಲ. ಇಲ್ಲಿ ಸಕಲರಿಗೂ ಪ್ರವೇಶವಿದ್ದು ವಚನಾವಲೋಕನಕ್ಕೆ ಅನುಕೂಲ ಮಾಡಿಕೊಡಲಾಗಿತ್ತು. ಮುದ್ರಣ ಯಂತ್ರಗಳಿಲ್ಲದ ಅಂದಿನ ಕಾಲದಲ್ಲಿ ಶರಣರ ವಚನಗಳನ್ನು ಪ್ರತಿ ಮಾಡಿಸಿ ನಾಡಿನ ವಿವಿಧ ಹಳ್ಳಿ ಪಟ್ಟಣಗಳಿಗೆ ಪ್ರಚಾರಕ್ಕಾಗಿ ಕಳುಹಿಸಿಕೊಡುವ ವ್ಯವಸ್ಥೆಯೂ ಇತ್ತು. ಅಲ್ಲಿ ವಚನಗಳನ್ನು ಪ್ರತಿಮಾಡುವ ಲಿಪಿಕಾರರು ಅನೇಕರಿದ್ದರು.

ವಿಲೋಮ ಪದ್ಧತಿಯಂತೆ ಪೂರ್ವಾಶ್ರಮದಲ್ಲಿ ಅಸ್ಪೃಶ್ಯನಾಗಿದ್ದ ಹರಳಯ್ಯನ ಮಗನಿಗೆ ಪೂರ್ವಾಶ್ರಮದಲ್ಲಿ ಬ್ರಾಹ್ಮಣನಾಗಿದ್ದ ಮಾದಸರನ ಮಗಳನ್ನು ಕೊಟ್ಟು ಮದುವೆ ಮಾಡಿದ ಕಾರಣದಿಂದಾಗಿ ಒಂದು ದೊಡ್ಡ ಕ್ರಾಂತಿ ಕಲ್ಯಾಣದಲ್ಲಿ ಜರುಗಿತು.

ವೈದಿಕ ಧರ್ಮದ ವಿರೋಧವಾಗಿ ನಡೆದ ಈ ಕ್ರಾಂತಿಯಲ್ಲಿ ವಚನ ಭಂಡಾರದಲ್ಲಿ ಸಂಗ್ರಹಿಸಿದ ವಚನಗಳನ್ನು ಧ್ವಂಸಪಡಿಸುವ ಪ್ರಯತ್ನಗಳು ನಡೆದವು. ಆಗ ಅವುಗಳ ಸಂರಕ್ಷಣೆಗಾಗಿ ಶರಣರು ಅವುಗಳನ್ನು ಗಂಟುಮೂಟೆ ಕಟ್ಟಿಕೊಂಡು ಹಳ್ಳಿಗಾಡುಗಳಲ್ಲಿ ಚದುರಿಹೋದರೆಂಬುದು ಇಂದು ಇತಿಹಾಸವಾಗಿದೆ. ಕೆಲವು ವಚನಗಳನ್ನು ಉಳಿವಿಗೆ ಹೊತ್ತೊಯ್ದರು. ವೈದಿಕ ಧರ್ಮತತ್ತ್ವಗಳ ವಿರೋಧವಾಗಿ ವಚನಸಾಹಿತ್ಯವು ಮೂಡಿ ಬಂದುದರಿಂದ ಅವುಗಳ ನಾಶಕ್ಕಾಗಿ ಆಗ ಅನೇಕ ಪ್ರಯತ್ನಗಳು ನಡೆದಿರಲಿಕ್ಕೆ ಸಾಕು. ಈ ಪ್ರಯತ್ನಕ್ಕೆ ಸಿಕ್ಕದೆ ಅಂದಿನ ಶರಣರು ಅವುಗಳನ್ನು ಹಳ್ಳಿಗಳಲ್ಲಿ ಗುಪ್ತವಾಗಿ ಕಾಯ್ದಿರಿಸಿಕೊಂಡು ಬಂದರು. ವಿಜಯನಗರದ 2ನೇ ಪ್ರೌಢದೇವರಾಯನ ಕಾಲದಲ್ಲಿ ನೂರೊಂದು ವಿರಕ್ತರು ಈ ವಚನಗಳ ಸಂಗ್ರಹಕಾರ್ಯವನ್ನು ಕೈಗೆತ್ತಿಕೊಂಡರು. ಅನಂತರ ತೋಂಟದ ಸಿದ್ಧಲಿಂಗಯತಿಗಳು ಮತ್ತು ಅವರ ಶಿಷ್ಯಪ್ರಶಿಷ್ಯರು ಈ ವಚನಗಳ

ಸಂಗ್ರಹಕಾರ್ಯದಲ್ಲಿ ಪ್ರಶಂಸನೀಯ ಕಾರ್ಯವನ್ನು ಮಾಡಿದರು. ಅಂದಿನಿಂದ ಕೆಲಮಟ್ಟಿಗೆ ವಚನಗಳು ಪ್ರಚಾರದಲ್ಲಿ ಬರಹತ್ತಿದವು.

1. ಇಂಥ ಪ್ರಯತ್ನಗಳಲ್ಲಿ ಅನೇಕ ಶರಣರು ಮತ್ತು ವಿರಕ್ತರು ಹೀಗೆ ಸಂಗ್ರಹಿಸಿದ ವಚನಗಳನ್ನು ವಿವಿಧ ವಿನ್ಯಾಸಗಳಲ್ಲಿ ಜೋಡಿಸಿರುವುದು ಕಂಡುಬರುತ್ತದೆ. ಇಂಥ ಜೋಡಣೆಗಳಲ್ಲಿ ವಚನಗಳನ್ನು ನೂರೊಂದು ಸ್ಥಳಗಳಲ್ಲಿ ಹೊಂದಿಸಲಾದ ಕೆಲವು ಕೃತಿಗಳು ನಮಗಿಂದು ಲಭ್ಯವಾಗಿವೆ. ಅವುಗಳಲ್ಲಿ ಮಹಾಲಿಂಗದೇವರು ನಿರೂಪಿಸಿದ ಏಕೋತ್ತರ ಶತಸ್ಥಲ ಮತ್ತು ಸಿದ್ಧಲಿಂಗೇಶ್ವರ ಏಕೋತ್ತರ ಶತಸ್ಥಲಗಳು ಪ್ರಮುಖವಾಗಿವೆ. ಸಿದ್ಧಲಿಂಗೇಶ್ವರ ಏಕೋತ್ತರ ಶತಸ್ಥಲ ಗ್ರಂಥವನ್ನು ಮೊಟ್ಟಮೊದಲು ಡಾ. ಫ.ಗು. ಹಳಕಟ್ಟಿಯವರು ತಮ್ಮ ಶಿವಾನುಭವ ಗ್ರಂಥಮಾಲೆಯಿಂದ 1928 ರಲ್ಲಿ ಪ್ರಕಟಿಸಿರುವರು. ಅವರಿಗೆ ಒಂದೇ ಒಂದು ಹಸ್ತಪ್ರತಿ ಲಭ್ಯವಿದ್ದು ಅದನ್ನೇ ಮುದ್ರಿಸಿರುವರು. ತಮ್ಮ ಪ್ರಸ್ತಾವನೆಯಲ್ಲಿ ಹೇಳಿದ ಅವರ ಕೆಳಗಿನ ಮಾತುಗಳು ಅತ್ಯಂತ ಗಮನಾರ್ಹವಾಗಿವೆ.

"ಈ ಗ್ರಂಥವು ಎಷ್ಟು ಮಹತ್ವದ್ದಿರುತ್ತದೆಂಬುದನ್ನು ನಾವು ಬೇರೆ ಹೇಳುವುದು ಬೇಡ. ಇದರಲ್ಲಿ ಏಕೋತ್ತರ ಶತಸ್ಥಳದ ವಿಷಯಗಳು ಬಹಳ ಅತ್ಯುತ್ತಮ ರೀತಿಯಿಂದ ಪ್ರತಿಪಾದಿಸಲ್ಪಟ್ಟಿವೆ. ಇವುಗಳನ್ನು ವಿವರಿಸುವ ಪದ್ಧತಿಯಾದರೂ ಮಾದರಿಯಾಗಿರುತ್ತದೆ. ಗ್ರಂಥಕಾರನು ಮೊದಲಿಗೆ ತಾನು ಹೇಳುವ ವಿಷಯವನ್ನು ಬಹು ಸುಲಭವಾಗಿ ಸ್ವಲ್ಪ ಶಬ್ದಗಳಲ್ಲಿ ಸ್ಪಷ್ಟವಾಗಿ ವಿವರಿಸಿದ್ದಾನೆ. ಇದಕ್ಕೆ ಅವನು ಸೂತ್ರವೆಂದು ಕರೆದಿದ್ದಾನೆ. ಆಮೇಲೆ ವಿಷಯವನ್ನು ನಿರೂಪಿಸತಕ್ಕ ಒಂದು ಮೂಲ ವಚನವನ್ನು ಕೊಟ್ಟಿದ್ದಾನೆ. ಆಮೇಲೆ ಇನ್ನೊಬ್ಬ ವಚನಕಾರನ ವಚನವನ್ನು ತೆಗೆದುಕೊಂಡು ಅದರ ಮರ್ಮವನ್ನು ಹಾಡುಗಳ ರೂಪದಲ್ಲಿ ಬಹು ಸುಂದರವಾಗಿ ನಿರೂಪಿಸಿದ್ದಾನೆ. ಆ ಹಾಡುಗಳಾದರೋ ಅತ್ಯಂತ ಮನೋಹರವಾಗಿವೆ. ಅವುಗಳ ಭಾಷೆಯು ಅತ್ಯಂತ ಮನೋಹರವಾಗಿದೆ. ಅವುಗಳ ಭಾಷೆಯು ಬಹು ಸುಂದರವು. ಇವುಗಳ ಮೇಲಿಂದ ಈ ಗ್ರಂಥಕಾರನು ಒಬ್ಬ ಅತ್ಯುತ್ತಮ ಕವಿ ಇದ್ದಾನೆಂದು ಹೇಳಲಿಕ್ಕೆ ಏನೂ ಅಡ್ಡಿ ಇಲ್ಲ. ಆಮೇಲೆ ವಿಷಯದ ಭಾವವನ್ನು ಒಂದು ವೃತ್ತ ಪದ್ಯದಲ್ಲಿ ಸಂಕ್ಷೇಪವಾಗಿ ವಿವರಿಸಿದ್ದಾನೆ. ಈ ಪದ್ಯಗಳಾದರೂ ಬಹು ಲಲಿತವಾಗಿವೆ. ಈ ಪದ್ಯಗಳ ಮೇಲಿಂದ ಸಿದ್ಧಲಿಂಗೇಶ್ವರ ಎಂಬುದೇ ಕವಿಯ ಮುದ್ರಿಕೆ ಇರಬಹುದೆಂದು ನಮಗೆ ತೋರುತ್ತದೆ. ಆದ್ದರಿಂದ ಈ ಗ್ರಂಥಕ್ಕೆ ನಾವು ಸಿದ್ಧಲಿಂಗೇಶ್ವರ ಏಕೋತ್ತರ ಶತಸ್ಥಲ ಎಂಬ ಹೆಸರನ್ನಿಟ್ಟಿದ್ದೇವೆ. ಗ್ರಂಥದಿಂದ ಕವಿಯ ವೃತ್ತಾಂತ ಮುಂತಾದವುಗಳು ಏನೂ ತಿಳಿಯುವಂತೆ ಇಲ್ಲ."

ಈ ಗ್ರಂಥದ ರಚನೆಯನ್ನು ಕುರಿತು ಪ್ರಸಿದ್ಧ ವಚನ ಸಂಶೋಧಕರಾಗಿದ್ದ ಶ್ರೀ ಎಸ್. ಶಿವಣ್ಣನವರು ಹೇಳುವುದೇನೆಂದರೆ, 'ಸಿದ್ಧಲಿಂಗಯತಿಗಳ ಶಿಷ್ಯ ವಿರಕ್ತ ತೋಂಟದಾರ್ಯರ ಸಿದ್ಧಲಿಂಗೇಶ್ವರಾಂಕಿತ ಏಕೋತ್ತರ ಶತಸ್ಥಲ ರಚಿಸಿದರೆಂದು ತಿಳಿಯುತ್ತದೆ". ಅದಕ್ಕೆ ವ್ಯತಿರಿಕ್ತವಾಗಿ ಡಾ. ಆರ್.ಸಿ. ಹಿರೇಮಠರು ಇದು 19ನೇ ಶತಮಾನದ ಕೃತಿಯೆಂದು ಹೇಳುತ್ತಾರೆ.

ಪ್ರತಿಯೊಂದು ಸ್ಥಲದ ಅಡಿಯಲ್ಲಿ ಸೂತ್ರ, ಒಂದು ವಚನ, ಒಂದು ಪದ, ಒಂದು ವೃತ್ತ, ಕೊನೆಗೆ ಗದ್ಯ ಇದಿಷ್ಟು ಭಾಗಗಳು ಆದ್ಯಂತವಾಗಿ ಹೇಳಲ್ಪಟ್ಟಿವೆ.

2. ಅನಂತರ ಪ್ರಕಟವಾದ 2ನೇ ಕೃತಿ ಮಹಾಲಿಂಗದೇವರು ನಿರೂಪಿಸಿದ ಏಕೋತ್ತರ ಶತಸ್ಥಲವು ಪ್ರೊ. ಸಂ. ಶಿ. ಭೂಸನೂರುಮಠರಿಂದ ಸಂಪಾದಿಸಲ್ಪಟ್ಟು 1974ರಲ್ಲಿ ಬೆಳಗಾವಿ ರುದ್ರಾಕ್ಷಿ ಮಠದ ಅಧಿಪತಿಗಳಾಗಿದ್ದ ಡಾ. ಶಿವಬಸವ ಸ್ವಾಮಿಗಳಿಂದ ಪ್ರಕಟಿಸಲ್ಪಟ್ಟಿದೆ. ಇದಕ್ಕೆ ಬರೆದ ಪ್ರಕಾಶಕರ ಮಾತುಗಳಲ್ಲಿ ಈ ಗ್ರಂಥದ ಬಗೆಗೆ ಹೇಳಿದ ವಿಷಯ ಹೀಗಿದೆ :

"ವಿಜಯನಗರದ ಪ್ರೌಢ ದೇವರಾಯ (ಕ್ರಿ.ಶ. 1419-1446)ನ ಕಾಲ ಕನ್ನಡ ಸಾಹಿತ್ಯದ ಒಂದು ಸುಗ್ಗಿಯ ಕಾಲ; ವೀರಶೈವ ಸಾಹಿತ್ಯ ಪುನರುತ್ಥಾನಗೊಂಡು ಉಜ್ವಲವಾದ ಬೆಳೆಯನ್ನು ಕೊಟ್ಟ ಮಹಾಸಂಪತ್ತಿನ ಕಾಲ. ಈ ಪ್ರೌಢರಾಯ ಅಥವಾ ಪ್ರೌಢದೇವರಾಯನಲ್ಲಿ ದಂಡನಾಯಕ ಮತ್ತು ಮಂತ್ರಿಯಾಗಿದ್ದ ಜಕ್ಕಣಾಚಾರ್ಯನೆ ತನ್ನ ಗುರುವಿನ ಗುರುವಾದ ಮಹಾಲಿಂಗದೇವರಿಂದ ಪೂರ್ವಜನ್ಮ ನಿವೃತ್ತಿಯಾಗಿ ಪುನರ್ಜಾತನೆನಿಸಿಕೊಂಡು, ಪರಮ ಗುರುವೆ ಇನ್ನು ಎನ್ನ ಅಂಗವೂ ಲಿಂಗದಲ್ಲಿ ಲೀಯವಹ ಭೇದವ ನಿರೂಪಿಸುವುದು ಎಂದು ಬಿನ್ನಹ ಮಾಡಿಕೊಂಡರೆ ಆ ಶ್ರೀ ಗುರುಸ್ವಾಮಿ ತಮ್ಮ ಪರಮ ಜ್ಞಾನಾನುಭಾವ ಪ್ರಸನ್ನ ಪ್ರಕಾಶದಿಂದ ಷಟ್‌ಸ್ಥಲವನ್ನು ಬಸವರಾಜದೇವರು, ಚೆನ್ನಬಸವರಾಜದೇವರು, ಪ್ರಭುದೇವರು ಮುಖ್ಯವಾದ ಅಸಂಖ್ಯಾತ ಮಹಾಗಣಂಗಳ ಪರಮವಾಕ್ಯಾಮೃತವಪ್ಪ ವಚನಗಳಿಂದ ಆ ತಚ್ಛಿಷ್ಯಂಗೆ ಬೋಧಿಸುತ್ತಿರಲು, ಆ ಷಟ್‌ಸ್ಥಲದಲ್ಲಿ ಅಂಗಸ್ಥಲನಾಲ್ವತ್ತುನಾಲ್ಕು, ಲಿಂಗಸ್ಥಲ ಐವತ್ತೇಳು, ಉಭಯಂ ಏಕೋತ್ತರ ಶತಸ್ಥಲಂಗಳಾದವು....." ಈ ಮಹಾಗ್ರಂಥ ರೂಪಗೊಂಡುದು ಹೀಗೆ.

3. ಗದುಗಿನ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದ ಲಿಂಗಾಯತ ಅಧ್ಯಯನ ಸಂಸ್ಥೆಯಿಂದ ಚೆನ್ನಬಸವಣ್ಣನವರ ವಚನೈಕೋತ್ತರ ಶತಸ್ಥಲ ಎಂಬ ಗ್ರಂಥವು ಪ್ರೊ. ಜಿ.ಎ. ಶಿವಲಿಂಗಯ್ಯನವರಿಂದ ಸಂಪಾದಿಸಲ್ಪಟ್ಟು 1983 ರಲ್ಲಿ ಪ್ರಕಟವಾಗಿದೆ. ಇದು ಚೆನ್ನಬಸವಣ್ಣನವರ ಕೃತಿಯೆಂದು ಅವರು ಹೇಳಿದ್ದರೂ ಸಹ 12ನೇ ಶತಮಾನದ

ಚನ್ನಬಸವಣ್ಣನವರಿಗೂ ಇವರಿಗೂ ವ್ಯತ್ಯಾಸವಿದೆ ಎಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

"ಇದರಲ್ಲಿ ಪ್ರತಿಯೊಂದು ಸ್ಥಳಕ್ಕೆ ಒಂದೊಂದು ವಚನವನ್ನು ಕೊಟ್ಟಿದ್ದು ಕೆಲವು ಸ್ಥಲಗಳಿಗೆ 2-3 ವಚನಗಳನ್ನು ಸೇರಿಸಲಾಗಿದೆ. ಹೀಗಾಗಿ ಇದರಲ್ಲಿ ಒಟ್ಟು 110 ವಚನಗಳು ಸಂಕಲಿತಗೊಂಡಿವೆ. ನಾವು ತುಲನಾತ್ಮಕವಾಗಿ ಅವಲೋಕಿಸಿದಾಗ ಇದರಲ್ಲಿಯ ಹೆಚ್ಚಿನ ವಚನಗಳು ಮಹಾಲಿಂಗದೇವನ ಏಕೋತ್ತರ ಶತಸ್ಥಲದಲ್ಲಿ ಬಂದಿರುವುದು ಕಂಡುಬರುತ್ತದೆ. ಆದುದರಿಂದ ಇದು ಅನುಕೂಲತೆಗಾಗಿ ಅವಲೋಕಿಸುವ ಮಹಾಲಿಂಗದೇವನ ಏಕೋತ್ತರ ಶತಸ್ಥಲದ ಸಾರಸಂಗ್ರಹವಾದಂತೆ ಭಾಸವಾಗುತ್ತದೆ."

"ಪ್ರಕಟವಾದ ನೂರೊಂದು ಸ್ಥಲಗಳ ಕೃತಿಗಳಲ್ಲಿ ಇಮ್ಮಡಿ ಗುರುಸಿದ್ಧರ (1500) ಕೈವಲ್ಯಸೋಪಾನ ನಾಮೈಕೋತ್ತರ ಶತಸ್ಥಲ ಕೃತಿಯು ಶಿವಮೊಗ್ಗ ಜಿಲ್ಲೆಯ ಆನಂದಪುರ ಮುರುಘರಾಜೇಂದ್ರ ಮಠದಿಂದ ಪ್ರಕಟವಾಗಿದೆ. ಇದರಲ್ಲಿ ಕೇವಲ 101 ಸ್ವರವಚನಗಳು (ಹಾಡುಗಳು) ಸಂಗ್ರಹಿಸಲ್ಪಟ್ಟಿದ್ದು ಅನುಭಾವಪೂರ್ಣವಾಗಿವೆ."

"ವೀರಶೈವ ಧರ್ಮದ ತಿರುಳನ್ನು ಅರಗಿಸಿಕೊಂಡಿದ್ದ ಮಹಾನುಭಾವಿ ಮಗ್ಗೆಯ ಮಾಯಿದೇವರು (1550) ಪದ್ಯೈಕೋತ್ತರ ಶತಸ್ಥಲ ಎಂಬ ಗ್ರಂಥವನ್ನು ರಚಿಸಿದ್ದು ಶ್ರೀ ಎ.ಪಿ. ಗಿರಿರಾಜು ಅವರು ಪ್ರಕಟಿಸಿದ್ದಾರೆ. ಇದರಲ್ಲಿ 101 ವಾರ್ಧಕ ಷಟ್ಪದಿಗಳಿವೆ". ಹೀಗೆ ವಚನಗಳನ್ನು ಆಧಾರವಾಗಿಟ್ಟುಕೊಂಡೆ ಏಕೋತ್ತರ ಶತಸ್ಥಲಗಳ ಗ್ರಂಥಗಳ ವಾಹಿನಿ ಹರಿದು ಬಂದಿದೆ, ಮುಂದುವರಿದಿದೆ.

ವಿಜಯನಗರ ಕಾಲದಲ್ಲಿದ್ದ ಜಕ್ಕಣಾರ್ಯನು (1430) ಶರಣರ ಸ್ವರವಚನಗಳನ್ನು ಮಾತ್ರ ಸಂಕಲಿಸಿ ನೂರೊಂದು ಸ್ಥಲಗಳಲ್ಲಿ ಹೆಣೆದಿದ್ದಾನೆ.

ಏಕೋತ್ತರ ಶತಸ್ಥಲವನ್ನು ಕುರಿತ 2 ಕೃತಿಗಳು, 10 ಲೇಖನಗಳು ರುದ್ರಾಕ್ಷಿಮಠದ ಲಿಂಗಾಯತ ಸಂಶೋಧನೆ ಕೇಂದ್ರ ಗ್ರಂಥಾಲಯ (ಬೆಳಗಾವಿ) ದಲ್ಲಿ ಲಭ್ಯವಿವೆ.

**5. ಇವೆರಡು ಗ್ರಂಥಗಳು**

ಸಿದ್ಧಾಂತ ಶಿಖಾಮಣಿ ಮತ್ತು ಏಕೋತ್ತರ ಶತಸ್ಥಲ ಇವೆರಡು ಗ್ರಂಥಗಳಲ್ಲಿ ಒಂದು ಸಂಸ್ಕೃತ ಭಾಷೆಯಲ್ಲಿದೆ ಮತ್ತೊಂದು ಕನ್ನಡ ಭಾಷೆಯಲ್ಲಿದೆ. ಎರಡರಲ್ಲಿಯೂ ನೂರೊಂದು ಸ್ಥಲಗಳ ನಿರೂಪಣೆಯಿದೆ. ಈ ನಿರೂಪಣೆಯು ಲಿಂಗವಂತ ಷಟ್‌ಸ್ಥಲ ಸಿದ್ಧಾಂತದ ವಿಸ್ತೃತ ವಿವರಣೆಯಾಗಿದೆ ಎಂದು ವಿದ್ವಾಂಸರ ಅಂಬೋಣವಾಗಿದೆ. ಇವುಳ ಕರ್ತೃಗಳು ಪ್ರಾಚೀನ ಅಥವಾ ಅರ್ವಾಚೀನರಾಗಿದ್ದರೆಂದು ಭಾವಿಸಿದ್ದರೂ ಸಹ ಈ ಕೃತಿಗಳ ರಚನೆಯ ಕಾಲಕ್ಕೆ ಒಬ್ಬರ ಕೃತಿಯನ್ನು ಮತ್ತೊಬ್ಬರು ನೋಡಿದಂತೆ

ಕಾಣಿಸುವುದಿಲ್ಲ. ಇವೆರಡು ಮಾರ್ಗಗಳು ಸ್ವತಂತ್ರವಾಗಿ ವೀರಶೈವ ಸಾಹಿತ್ಯದಲ್ಲಿ ಹರಿದು ಬಂದಿವೆ.

ಆದರೆ ಒಂದು ವಿಷಯವನ್ನು ನಾವಿಲ್ಲಿ ಗಮನಕ್ಕೆ ತೆಗೆದುಕೊಳ್ಳಬೇಕು. ಇವೆರಡು ಗ್ರಂಥಗಳು ಗುರುಮಠ ವಿರಕ್ತಮಠಗಳನ್ನು ಸಮದೃಷ್ಟಿಯಲ್ಲಿ ಕಂಡು ರೂಪುಗೊಂಡಂತೆ ಭಾಸವಾಗುತ್ತದೆ.

ಈ ಕೃತಿಗಳನ್ನು ಸಂಪಾದಿಸಿದ, ವ್ಯಾಖ್ಯೆಗಳನ್ನು ಬರೆದ ಅನುಭಾವಿಗಳು ಗುರುಪೀಠ ವಿರಕ್ತಪೀಠ ಎಂಬ ವಿಭಿನ್ನ ಭಾವನೆಯನ್ನು ತಾಳದೆ ತೆರೆದ ಮನಸ್ಸಿನಿಂದ ಬರೆದಿರುವರು. ಆದರೆ ದುರ್ದೈವದಿಂದ ಈ ಬಗೆಯ ಅಭಿನ್ನ ಅಭಿಪ್ರಾಯಕ್ಕೆ ವಿಭಿನ್ನವಾದ ಅಭಿಪ್ರಾಯವು ಕಳೆದ ಶತಮಾನದ ಆದಿಯಲ್ಲಿ ಮೊಳಕೆಯೊಡೆದಿದೆ. ಈ ಭಿನ್ನಾಭಿಪ್ರಾಯದ ಹೆಚ್ಚಿನ ಗಮನವು ಸಿದ್ಧಾಂತ ಶಿಖಾಮಣಿಯ ಕರ್ತೃ ಮತ್ತು ಕಾಲವನ್ನು ಕುರಿತಾದುದಾಗಿದೆ. ಶರಣರಿಗಿಂತ ಮುಂಚಿತವಾಗಿ ಸಿದ್ಧಾಂತ ಶಿಖಾಮಣಿ ರಚಿಸಲ್ಪಟ್ಟಿತೋ ಅಥವಾ ತದನಂತರ ಕಾಲದಲ್ಲಿ ರಚಿಸಲ್ಪಟ್ಟಿತೋ ಎಂಬ ಚರ್ಚೆಯಲ್ಲಿಯೇ ಬಹಳಷ್ಟು ಸಾಹಿತ್ಯ ನಿರ್ಮಾಣಗೊಂಡಿದೆ.

ಆದರೆ 19ನೇ ಶತಮಾನದ ಮುಂಚೆ ಈ ಬಗೆಯ ವಾಗ್ವಾದಗಳು ಈ ಗ್ರಂಥಗಳ ಪ್ರಾಚೀನತೆ ಅರ್ವಾಚೀನತೆಯ ಬಗ್ಗೆ ಯಾರಲ್ಲಿಯೂ ಚರ್ಚೆ ನಡೆದಂತೆ ತೋರುವುದಿಲ್ಲ. ಭಿನ್ನಾಭಿಪ್ರಾಯಗಳಿದ್ದಂತೆಯೂ ತೋರುವುದಿಲ್ಲ. ಇದರ ಕಾಲನಿರ್ಣಯದಿಂದ ಇಂದಿನ ವೀರಶೈವ ಯಾವುದೊಂದು ಪಂಗಡವು ಶ್ರೇಷ್ಠ ಅಥವಾ ಕನಿಷ್ಠವೆಂದು ಅನಿಸುವುದಿಲ್ಲ. ಡಿ.ವಿ.ಜಿ.ಯವರು ಹೇಳುವಂತೆ:

ಗ್ರೀಸಿನಾ ಕಬ್ಬಗಳನೋದುವರು ಕಾಶಿಯಲ್ಲಿ,
ಕಾಶಿಯಾ ಶಾಸ್ತ್ರಗಳನಾಕ್ಸ್‌ಫರ್ಡಿನವರು,
ದೇಶಕಾಲ ವಿಭಾಗ ಮನದರಾಜ್ಯದೊಳಿಲ್ಲ,
ಶ್ವಾಸವದು ಬೊಮ್ಮವದು ಮಂಕುತಿಮ್ಮ

ಮೇಲಿನ ಪದ್ಯದ ಅನುಸಾರವಾಗಿ ಯಾವುದೇ ಒಂದು ತತ್ವ ವಿಚಾರವು ಪ್ರಾಚೀನವಾಗಿರಲಿ ಅಥವಾ ಅರ್ವಾಚೀನವಾಗಿರಲಿ ಆದರೆ ಅದರ ಶ್ರೇಷ್ಠತೆಗೆ ಕುಂದು ಬರುವುದಿಲ್ಲ. ಕಾಳಿದಾಸನು ಸಹ ಇದೇ ವಿಚಾರವನ್ನು ಸಾರ್ವಕಾಲಿಕ ಸತ್ಯವೆನ್ನುವಂತೆ ಹೇಳಿದ್ದಾನೆ:

ಪುರಾಣ ಮಿತ್ಯೇವನ ಸಾಧುಸರ್ವಂ
ನಚಾಪಿ ಕಾವ್ಯಂ ನವ ಮಿತ್ಯವದ್ಯಂ
ಸಂತಃ ಪರೀಕ್ಷಾನ್ಯತರದ್ ಭಜಂತೇ
ಮೂಢಃ ಪರಪ್ರತ್ಯೇಯನೇಯ ಬುದ್ಧಿಃ

ಕವಿಕುಲಗುರು ಕಾಳಿದಾಸನು ನಮಗೆ ಪ್ರಾಚೀನ ಕವಿಯಷ್ಟೇ. ಆದರೆ ಅವನು ಜೀವಿಸಿದ್ದ ಪ್ರಾಚೀನ ಕಾಲದಲ್ಲಿ ಸಹ ನವೀನ ಕಾವ್ಯವನ್ನು ರಚಿಸಿದ ಆ ಕವಿಯನ್ನೂ, ಅವನ ಕಾವ್ಯವನ್ನೂ ಅಂದಿನ ವಿದ್ವಾಂಸರು 'ಅವನೇನು ಮಹಾ? ಅವನ ಕಾವ್ಯದಲ್ಲೇನು ಹೊಸತಿದೆ? ಅದು ಇತ್ತೀಚಿನ ಕಾವ್ಯ' ಎಂದು ಮೂಗು ಮುರಿದು ಹೀಗಳೆದಂತೆ ತೋರುತ್ತದೆ. ಅಂತೆಯೇ ಅವನು ಪುರಾಣದಲ್ಲಿ (ಪೂರ್ವಕಾಲದಲ್ಲಿ) ಹೇಳಿದ್ದೆಲ್ಲ ಒಳ್ಳೇದಿರುವುದಿಲ್ಲ. ಆಧುನಿಕ ಕಾವ್ಯವೆಂಬ ಕಾರಣದಿಂದ ಅದರಲ್ಲಿ ಹೇಳಿರುವುದೆಲ್ಲ ಕೆಟ್ಟದಿರುವುದಿಲ್ಲ. ಆದ್ದರಿಂದ ವಿಚಾರವಂತರು ಆ ಕಾವ್ಯವನ್ನು ಓದಿ, ವಿಮರ್ಶಿಸಿ ಉತ್ಕೃಷ್ಟ ಕಾವ್ಯವಾಗಿದ್ದರೆ ಹೊಗಳುತ್ತಾರೆ. ಆದರೆ ಮೂಢಮತಿಗಳು ಸಾರಸಾರ ವಿಚಾರ ಮಾಡದೆ ಪರರು ಹೇಳಿದ್ದನ್ನೆ ತಮ್ಮದೆಂದು ಹೇಳುವರು.

Though old the thought, and off expressed, it is his at last who says it best.

...... Orison Swet Modern, in his 'pushing to the front'.

"ಒಂದು ವಿಚಾರವು ಅಥವಾ ಕಲ್ಪನೆಯು ಪ್ರಾಚೀನ ಕಾಲದಲ್ಲಿ ಮೇಲಿಂದ ಮೇಲೆ ಹೇಳಲ್ಪಟ್ಟಿರಬಹುದು. ಆದರೆ ಅದನ್ನು ಉತ್ಕೃಷ್ಟ ಶೈಲಿಯಲ್ಲಿ ಉಚಿತ ಶಬ್ದಗಳಲ್ಲಿ ಮನಕ್ಕೆ ನಾಟುವಂತೆ ಸುಂದರವಾಗಿ ಹೇಳಬಲ್ಲವನದೇ ಆ ವಿಚಾರವಾಗಿರುತ್ತದೆ."

ಮೇಲಿನ ಎರಡು ಗ್ರಂಥಗಳಲ್ಲಿ ಯಾವುದೊಂದು ಗ್ರಂಥವು ಪ್ರಾಚೀನವೆಂಬ ಕಾರಣದಿಂದ ಶ್ರೇಷ್ಠವೆನಿಸಲಾರದು. ಅರ್ವಾಚೀನವೆಂಬ ಕಾರಣದಿಂದ ಕನಿಷ್ಠವೆನಿಸ ಲಾರದು. ಪ್ರಾಜ್ಞರು ಇವೆರಡೂ ಗ್ರಂಥಗಳಲ್ಲಿ ಪ್ರತಿಪಾದಿತವಾದ ವಿಷಯ ವಿವೇಚನೆಯನ್ನು ಪರೀಕ್ಷಿಸಿದ ನಂತರ ಯಾವ ಗ್ರಂಥ ಉತ್ತಮವಾಗಿದೆ, ಯಾವ ಗ್ರಂಥ ಉತ್ತಮವಾಗಿಲ್ಲ ಎಂಬ ಅಭಿಪ್ರಾಯಕ್ಕೆ ಬರಬೇಕು. ಆದ್ದರಿಂದ ವಿದ್ವಾಂಸರು, ಅನುಭಾವಿಗಳು ಪೂರ್ವಗ್ರಹ ಪೀಡಿತರಾಗದೆ ತೆರೆದ ಮನಸ್ಸಿನಿಂದ ಸಾರಾಸಾರ ವಿಮರ್ಶಿಸಿ ನೊಡಬೇಕು.*

*** ಟಿಪ್ಪಣಿ :** ಪ್ರಸ್ತುತ ಲೇಖನವನ್ನು ಸಿದ್ಧಪಡಿಸಿದ ಅನಂತರ 'ಪ್ರಸಾದ' ದ್ವೈಮಾಸಿಕ ಪತ್ರಿಕೆಯ ಜನವರಿ-ಫೆಬ್ರವರಿ 2016ರ ಸಂಪುಟ 31, ಸಂಚಿಕೆ 1 ರಲ್ಲಿ ವಿಜಾಪುರದ ಜ್ಞಾನಯೋಗಾಶ್ರಮದ ಪರಮಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳಿಂದ ವ್ಯಾಖ್ಯಾನಿಸಿದ ಆಂಗ್ಲ ಭಾಷಾ ಸಿದ್ಧಾಂತ ಶಿಖಾಮಣಿ ಗ್ರಂಥ ಮೈಸೂರಿನಿಂದ ಪ್ರಕಟವಾಗಿರುವ ವಿಷಯ ಗಮನಕ್ಕೆ ಬಂತು. ಓದುಗರು ಗಮನಿಸಬೇಕು. - ಲೇಖಕ.

□

# ಹಿಂದಿಯಲ್ಲಿ ಸಂತ ಸಾಹಿತ್ಯ

**ಡಾ. ತಿಪ್ಪೇಸ್ವಾಮಿ**

ಹಿಂದಿ ಸಾಹಿತ್ಯದ ಒಂದು ಸಾವಿರದ ಇನ್ನೂರು ವರ್ಷಗಳ ಇತಿಹಾಸದಲ್ಲಿ 'ಸುವರ್ಣಯುಗ'ವೆಂದೇ ಪ್ರಸಿದ್ಧಿಯಾಗಿರುವ ಭಕ್ತಿಕಾಲ (ಕ್ರಿ.ಶ.1375ರಿಂದ ಕ್ರಿ.ಶ. 1700 ಹದಿನಾಲ್ಕನೆ ಶತಮಾನದ ಮಧ್ಯಭಾಗದಿಂದ ಹದಿನೇಳನೆ ಶತಮಾನದ ಮಧ್ಯಭಾಗದವರೆಗೆ ಹಬ್ಬಿಕೊಂಡಿದೆ. ಭಕ್ತಿಕಾಲದಲ್ಲಿ ಬಂದ ಪರಮಾತ್ಮನ ಉಪಾಸನಾ ಮಾರ್ಗಗಳನ್ನು ಒಳಗೊಂಡ ಕಾವ್ಯಧಾರೆಗಳನ್ನು ನಿರ್ಗುಣ ಭಕ್ತಿಧಾರೆ ಹಾಗೂ ಸಗುಣ ಭಕ್ತಿಧಾರೆ ಎಂದು ವಿಭಜಿಸಿದ್ದಾರೆ. ನಿರ್ಗುಣ ಭಕ್ತಿಧಾರೆಯಲ್ಲಿ ಜ್ಞಾನಮಾರ್ಗಿ ಶಾಖೆ ಮತ್ತು ಪ್ರೇಮಮಾರ್ಗಿ ಶಾಖೆ ಎಂದು ಹಾಗೂ ಸಗುಣ ಭಕ್ತಿಧಾರೆಯಲ್ಲಿ ರಾಮಭಕ್ತಿ ಶಾಖೆ ಮತ್ತು ಕೃಷ್ಣಭಕ್ತಿ ಶಾಖೆ ಎಂದು ವಿಭಜಿಸಿದ್ದಾರೆ. ಈ ನಾಲ್ಕು ಭಕ್ತಿಶಾಖೆಗಳಲ್ಲಿ ಪ್ರಜ್ವಲಿಸುತ್ತಿರುವ ಕವಿಪುಂಗವರು ತಮ್ಮ ಅನನ್ಯ ಪ್ರತಿಭೆಯಿಂದ ನೀಡಿರುವ ರಚನೆಗಳು ವಿಶ್ವಸಾಹಿತ್ಯಕ್ಕೆ ಹಿಂದಿಯ, ಭಾರತೀಯ ಸಾಹಿತ್ಯದ ಮಹತ್ವದ ಕೊಡುಗೆಗಳಾಗಿವೆ. ಅಸಂಖ್ಯ ಸಂತರ ಸಾಹಿತ್ಯ, ಮಲಿಕ್ ಮಹಮದ್ ಜಾಯಸಿಯ 'ಪದ್ಮಾವತ್' ಮಹಾಕಾವ್ಯ, ತುಲಸಿದಾಸರ 'ಶ್ರೀರಾಮಚರಿತಮಾನಸ', ಸೂರದಾಸರ ಕೃಷ್ಣನನ್ನು ಕುರಿತ ಗೀತಸಾಗರವಾದ 'ಸೂರ್‌ಸಾಗರ್' ಸದಾಕಾಲಕ್ಕೂ ಓದುಗರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿರುವ ಕೃತಿರತ್ನಗಳು.

ಹನ್ನೆರಡನೆಯ ಶತಮಾನದಿಂದ ಹದಿನೇಳನೆ ಶತಮಾನದವರೆಗಿನ ಕಾಲಾವಧಿ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ಪುನರುಜ್ಜೀವನದ ಮತ್ತು ಆತ್ಮಾವಲೋಕನದ ಇತಿಹಾಸ. ಈ ಕಾಲಾವಧಿಯಲ್ಲಿ ನಮ್ಮ ದೇಶದ ವಿವಿಧ ಭಾಷಾಪ್ರದೇಶಗಳಲ್ಲಿ ಭಕ್ತರ, ಸಂತರ ಮತ್ತು ಸುಧಾರಕರ ಪ್ರವಾಹವೇ ಹರಿಯಿತು. ಕರ್ನಾಟಕದಲ್ಲಿ ಬಸವಾದಿ ಶರಣರು ಮತ್ತು ದಾಸರು, ತಮಿಳುನಾಡಿನಲ್ಲಿ ಆಳ್ವಾರರು, ತೆಲುಗಿನಲ್ಲಿ ವೇಮನ ಮತ್ತು ಪೋತನ, ಬಂಗಾಳದಲ್ಲಿ ಚೈತನ್ಯಪ್ರಭು, ಪಂಜಾಬಿನಲ್ಲಿ

**ಡಾ. ತಿಪ್ಪೇಸ್ವಾಮಿ,** ನಂ. 369, 'ಅನುವಾದ' ಎ ಮತ್ತು ಬಿ ಬ್ಲಾಕ್, ಕುವೆಂಪುನಗರ, ಮೈಸೂರು 23

ಗುರುನಾನಕ್, ಒರಿಸ್ಸಾದಲ್ಲಿ ಜಗನ್ನಾಥದಾಸ, ಅನಂತದಾಸ, ಅಚ್ಯುತದಾಸ, ಗುಜರಾತಿನಲ್ಲಿ ನರಸಿ ಮೆಹ್ತಾ, ಮಹಾರಾಷ್ಟ್ರದಲ್ಲಿ ತುಕಾರಾಂ, ನಾಮದೇವ ಏಕನಾಥ, ರಾಜಸ್ಥಾನದಲ್ಲಿ ಮೀರಾ ಮುಂತಾದ ಭಕ್ತರು, ಸಂತರು, ಸಮಾಜಸುಧಾರಕರು ತಮ್ಮ ಧರ್ಮ, ದೇವರು ಆಚಾರವಿಚಾರಗಳು ಮತ್ತು ಜೀವನವಿಧಾನಗಳನ್ನು ಕುರಿತಂತೆ ಏನೆಲ್ಲ ಗಂಭೀರ ಚಿಂತನೆ ಮಾಡಿದರೋ ಸಮಾಜದ ಅಂತರಂಗ ಬಹಿರಂಗವನ್ನು ವಿಶ್ಲೇಷಿಸಿದರೋ ಅವುಗಳಿಂದ ವ್ಯಕ್ತಿಯ ಅಪೂರ್ಣತೆ, ಸಮಾಜದಲ್ಲಿನ ಅಸಾಂಗತ್ಯಗಳು ಅನಾವರಣಗೊಂಡವು. ಈ ಎಲ್ಲರ ಚಿಂತನೆಗಳು ಮುಂದಿನ ಚಿಂತನೆಗಳಿಗೆ ಪ್ರೇರಣೆ ನೀಡಿದವು, ಚಾಲನೆ ನೀಡಿದವು.

ಭಾರತೀಯ ಸಮಾಜದ ಮಧ್ಯಕಾಲೀನ ಧರ್ಮಸಾಧನೆಯ ಲಕ್ಷ್ಯವೂ ಸಮಾಜದ ಒಳಿತಿಗಾಗಿ ಮಿಡಿಯುವುದಾಗಿದೆ. ಮಧ್ಯಕಾಲದ ಸಾಧಕರ ಬದುಕಿನ ಎರಡು ಕಣ್ಣುಗಳೆಂದರೆ–ಒಂದು, ಸಮಾಜ ಇನ್ನೊಂದು, ಆಧ್ಯಾತ್ಮ. ಇವೆರಡರ ಮಣಿಕಾಂಚನಯೋಗವೇ ಭಕ್ತಿಸಾಹಿತ್ಯ. ಇವು ಭಕ್ತಿಕಾಲದ ಗರಿಮೆಗಳು. ಸಮಾಜದ ಎಲ್ಲ ವರ್ಗದ ಜನರೂ ಭಕ್ತಿಗೆ ಅಧಿಕಾರಿಗಳು ಎಂದು ಹೇಳಿ ಅವರನ್ನು ಭಕ್ತಿಸ್ರೋತಸ್ವಿನಿಯಲ್ಲಿ ಮೀಯಿಸಿದರು. ಮನುಷ್ಯ ಮನುಷ್ಯರ ನಡುವೆ ಇದ್ದ ಎಲ್ಲ ದೂರಗಳನ್ನು, ಸಂಕುಚಿತ ವಿಚಾರಗಳನ್ನು ಬುಡಸಹಿತ ಕಿತ್ತುಹಾಕಿ ಎಲ್ಲರನ್ನು ಒಟ್ಟಿಗೆ ಕರೆದುಕೊಂಡು ಹೋಗುವ ಮಾರ್ಗವಾಯಿತು ಭಕ್ತಿಮಾರ್ಗ. ದಲಿತರಿಗೂ ದೇವಮಂದಿರಗಳ ಮಾರ್ಗಗಳು ಮತ್ತು ಬಾಗಿಲುಗಳು ಮುಚ್ಚಿದ್ದಾಗ ಅವನ್ನು ತೆರೆದು ಎಲ್ಲರಿಗೂ ಮುಕ್ತಗೊಳಿಸಿದ್ದು ಈ ಭಕ್ತಿಪಂಥದ ವೈಶಿಷ್ಟ್ಯವಾಗಿದೆ. ಭಾರತದ ಎಲ್ಲ ಪ್ರದೇಶಗಳಲ್ಲಿ ಸಮಾಂತರವಾಗಿ ಮೂಡಿಬಂದಿರುವ ಭಕ್ತಿಸಾಹಿತ್ಯ ಮಾನವತೆಯನ್ನು ಪ್ರತಿಪಾದಿಸುತ್ತದೆ.

ಮಧ್ಯಯುಗದ ಸಾಧನಮಾರ್ಗಗಳಲ್ಲಿ ಒಂದಾದ ಜ್ಞಾನಮಾರ್ಗ ಅಥವಾ ನಿರ್ಗುಣ ಭಕ್ತಿಧಾರೆ ಹಿಂದಿಯಲ್ಲಿ ಸಂತಮತವೆಂದು ಪ್ರಸಿದ್ಧವಾಗಿದೆ. ಈ ಸಂತಮತದ ಮೇರು ಪುರುಷ ಕಬೀರದಾಸ. ಈತ ಮತ್ತು ಈತನ ಸಮಕಾಲೀನರು ಪ್ರತಿಪಾದಿಸಿದ ಸಂತಮತದ ಭಕ್ತಿಮಾರ್ಗ ಎಷ್ಟು ಉದಾತ್ತಸ್ವರೂಪದಾಗಿತ್ತೆಂದರೆ ಸಮಾಜದ ಎಲ್ಲ ವರ್ಗಗಳ ಜನರಿಗೂ ಇದರ ಬಾಗಿಲು ತೆರೆದಿತ್ತು. ಭಕ್ತಿಯನ್ನು ಸಾರ್ವತ್ರಿಕಗೊಳಿಸಿ ಮನುಷ್ಯ ಮನುಷ್ಯನ ನಡುವೆ ಇದ್ದ ಎಲ್ಲ ಸಂಕುಚಿತ ವಿಚಾರಗಳನ್ನು, ಅಡ್ಡಗೋಡೆಗಳನ್ನು ಬುಡಸಹಿತ ಕಿತ್ತುಹಾಕಿ ಮನುಷ್ಯನನ್ನು ಅನನ್ಯವಾಗಿ ಪ್ರೀತಿಸಿ ಮಾನವೀಯತೆಯನ್ನು ಎತ್ತಿಹಿಡಿದ ಸಂತಮತ ವಿಶ್ವಮತ, ಸಂತಧರ್ಮ ವಿಶ್ವಧರ್ಮ.

ತಮ್ಮ ಕಾಲದ ಎಲ್ಲ ಅಸಾಂಗತ್ಯ, ಆಡಂಬರ, ವರ್ಣ, ವರ್ಗ ವ್ಯವಸ್ಥೆಗೆ ತೀವ್ರ ಪ್ರತಿಕ್ರಿಯಾತ್ಮಕ ರೂಪದಲ್ಲಿ ಸಂತರ ಹೃದಯದಿಂದ ಪುಟಿದು ಬಂದಿರುವ ವಿಚಾರಧಾರೆ

ಅಂದಿಗೆ ಪ್ರಸ್ತುತವಿದ್ದಂತೆ ಇಂದಿಗೂ ಪ್ರಸ್ತುತವಾಗಿದೆ. ಸಂತಮತವೆಂದೇ ಪ್ರಸಿದ್ಧವಾಗಿರುವ ಹಿಂದಿ ನಿರ್ಗುಣ ಭಕ್ತಿಧಾರೆಯ ವಿಶೇಷತೆಗಳನ್ನು ಕೆಳಕಂಡಂತೆ ಗುರುತಿಸಬಹುದು. ಸಂತ ಶಬ್ದದ ವಿವರಣೆ ಹಿಂದಿಯಲ್ಲಿ ನಿರ್ಗುಣೋಪಾಸಕರಿಗೆ ವಿಶೇಷವಾಗಿ ಉಪಯೋಗಿಸಲಾಗುವ ಶಬ್ದ 'ಸಂತ'. ಸಾಮಾನ್ಯ ಅರ್ಥದಲ್ಲಿ ಈ ಶಬ್ದವನ್ನು ಪವಿತ್ರಾತ್ಮ, ಪರೋಪಕಾರಿ, ಸಜ್ಜನ, ಸದಾಚಾರಿ ಎಂಬ ಅರ್ಥಗಳಲ್ಲೂ ಬಳಸಲಾಗುತ್ತದೆ. ಅಂತೆಯೇ ಭಕ್ತರನ್ನು, ಸಾಧುಗಳನ್ನು, ಮಹಾತ್ಮರನ್ನು ಸಂಬೋಧಿಸುವಾಗಲೂ 'ಸಂತ' ಶಬ್ದವನ್ನು ಬಳಸುವುದನ್ನು ನಾವು ಗಮನಿಸಬಹುದಾಗಿದೆ.

'ಸಂತ' ಶಬ್ದ 'ಶಾಂತ' ಶಬ್ದದ ರೂಪಾಂತರವೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಈ ರೀತಿ ಅಭಿಪ್ರಾಯಪಡುವವರ ಪ್ರಕಾರ ಬ್ರಹ್ಮಾನಂದ ಸಂಪನ್ನ ವ್ಯಕ್ತಿಯೇ ಸಂತ. ಬೌದ್ಧರ 'ಧಮ್ಮಪದ'ದಲ್ಲಿ ಎಷ್ಟೋ ಕಡೆ 'ಶಾಂತ' ಅಂದರೆ 'ನಿವೃತ್ತಿಮಾರ್ಗದ ವಿರಾಗಿ' ಎನ್ನುವ ಅರ್ಥದಲ್ಲಿ ಸಂತ ಶಬ್ದ ಪ್ರಯೋಗಗೊಂಡಿರುವುದನ್ನು ನಾವು ಗಮನಿಸಬಹುದು. ಇನ್ನು ಕೆಲವರು 'ಸಂತ' ಶಬ್ದ 'ಸಂತಿ' ಅಥವಾ 'ಸಂತ್ಯ' ಶಬ್ದದ ಇನ್ನೊಂದು ರೂಪವಾಗಿದ್ದು, ಇದರ ಅರ್ಥ 'ಫಲದಾತೃಗಳಲ್ಲಿ ಶ್ರೇಷ್ಠನಾದವನು' ಎಂದು ಹೇಳಿದ್ದಾರೆ. ಅಂದರೆ ಸಾತ್ವಿಕ ಮನಸ್ಸಿನ, ಸಕಲ ಚರಾಚರಗಳಿಗೆ ಲೇಸನ್ನು ಬಯಸುವವನೇ ವ್ಯಾಪಕ ಅರ್ಥದಲ್ಲಿ 'ಸಂತ'.

ಸಂಸ್ಕೃತದ 'ಸನ್'ನಿಂದ 'ಸಂತ' ಶಬ್ದ ಬಂದಿದೆ ಎಂದು ಅಭಿಪ್ರಾಯಪಡುವವರ ಪ್ರಕಾರ 'ಸಂತ' ಸತ್ಯದ ಸಾಕಾರಮೂರ್ತಿ, ಶುದ್ಧ ಅಸ್ತಿತ್ವವುಳ್ಳವ, ಎಂದೂ ನಾಶವಾಗದವ, ವಿಕಾರಕ್ಕೊಳಗಾಗದವ, ಯಾವ ವಿಕಾರಕ್ಕೂ ಒಳಗಾಗದ್ದೇ 'ಸತ್'. ಈ 'ಸತ್' ಬ್ರಹ್ಮ ಅಥವಾ ಪರತತ್ವ, ವೈದಿಕ ಸಾಹಿತ್ಯದಲ್ಲಿ 'ಸತ್'ನ ಪ್ರಯೋಗ ಪರತತ್ವ ಅಥವಾ ಪರಮಾತ್ಮನಿಗೆ ಪರ್ಯಾಯವಾಗಿಯೇ ಬಳಕೆಯಾಗಿದೆ. ಛಾಂದೋಗ್ಯ ಉಪನಿಷತ್ತಿನಲ್ಲಿ ಹೇಳಿರುವಂತೆ, ಮೊದಲು ಒಂದು ಅದ್ವಿತೀಯ 'ಸತ್' ಇತ್ತು. ಈ 'ಸತ್' (ಸತ್ಯ) ಅನ್ನೇ ನಾನಾ ಪ್ರಕಾರಗಳಲ್ಲಿ ವಿಪ್ರರು ವರ್ಣಿಸಿದ್ದಾರೆ. ಅಪಭ್ರಂಶದ 'ಪಾಹುಡ್' ದೋಹಾದಲ್ಲಿ ಸಂತ ಶಬ್ದವನ್ನು ಮೇಲಿನ ಅರ್ಥದಲ್ಲಿಯೇ ಬಳಸಲಾಗಿದೆ. ತೈತ್ತರೀಯ ಉಪನಿಷತ್ತಿನ ಪ್ರಕಾರ ಬ್ರಹ್ಮನನ್ನು 'ಅಸತ್' ಎಂದು ಭಾವಿಸುವ ಮನುಷ್ಯ ತಾನೇ 'ಅಸತ್' ಆಗುತ್ತಾನೆ. 'ಬ್ರಹ್ಮ'ನ ಅಸ್ತಿತ್ವವನ್ನು ಸ್ವೀಕರಿಸಿದ್ದಾದರೆ ಬ್ರಹ್ಮವೇತ್ತರು ಅವನನ್ನು 'ಸತ್' ಎಂದೇ ಪರಿಗಣಿಸುತ್ತಾರೆ. ಅಂದರೆ ಬ್ರಹ್ಮನೇ 'ಸತ್'. ಈ 'ಸತ್' ಅನ್ನು ಒಪ್ಪುವವನೇ 'ಸಂತ'. ನಮ್ಮ ಭಕ್ತರು 'ಭಕ್ತ' ಮತ್ತು 'ಭಗವಂತ'ನಲ್ಲಿ ಎಂದೂ ಭಿನ್ನತೆಯನ್ನು ಕಂಡಿಲ್ಲ. ಇವರಿಬ್ಬರಲ್ಲಿ ಯಾವುದೇ ಭೇದವಿಲ್ಲ. ತುಲಸೀದಾಸರು 'ಸಂತನನ್ನು ಅನಂತನೆಂದೇ ಭಾವಿಸಿದ್ದೇನೆ' ಎಂದು

ಹೇಳಿದರೆ, ಗರೀಬದಾಸ ಎಂಬ ಭಕ್ತ 'ಸಂತ ಮತ್ತು ಪರಮಾತ್ಮ ಇಬ್ಬರೂ ಒಬ್ಬರೇ. ಇದರಲ್ಲಿ ಮೀನ–ಮೇಷವೆಣಿಸುವ ಆವಶ್ಯಕತೆ ಇಲ್ಲ' ಎಂದು ಅಭಿಪ್ರಾಯಪಡುತ್ತಾನೆ. ಪಲಟು ಸಾಹೇಬ 'ಸಂತ ಮತ್ತು ರಾಮ ಇವರಲ್ಲಿ ಯಾವುದೇ ಭೇದವಿಲ್ಲ' ಎಂದು ನುಡಿದಿದ್ದಾನೆ. ಹೀಗೆ ಸತ್ರೂಪಿ ಪರತತ್ವವನ್ನು ಆತ್ಮೀಕರಿಸಿಕೊಂಡು ಅವನನ್ನು ಸಾಕ್ಷಾತ್ಕರಿಸಿಕೊಂಡ ಸಾಧಕನೇ ಸಂತ. ಈ 'ಸಂತ'ನೇ ಸಾಕ್ಷಾತ್‌ದೈವ.

ಸಂತನ ಗುಣ–ಸ್ವಭಾವವನ್ನು ನಮ್ಮ ಭಕ್ತಕವಿಗಳು ಮನೋಜ್ಞವಾಗಿ ವ್ಯಾಖ್ಯಾನಿಸಿದ್ದಾರೆ. ಕಬೀರ–"ನಿರ್ವೈರಿ, ನಿಷ್ಕಾಮಿ, ಪ್ರಭುಪ್ರೇಮಿ, 'ವಿಷಯ'ಗಳಿಂದ ಮುಕ್ತನಾದವನೇ ಸಂತ" ಎಂದಿದ್ದಾರೆ. ತುಲಸೀದಾಸರು "ಎಲ್ಲ ಸಾಂಸಾರಿಕ ಸಂಬಂಧಗಳ ಜೊತೆಗಿರುವ ಬಂಧಗಳನ್ನು ಬಿಡಿಸಿಕೊಂಡು ಮನಸ್ಸನ್ನು ಬಿಗಿಯಾದ ಹಗ್ಗದಲ್ಲಿ ಬಂಧಿಸಿ, ಪ್ರಭುಚರಣಗಳಲ್ಲಿ ಅರ್ಪಿಸಿ, ಆ ಮೂಲಕ ಸಮದರ್ಶಿಯಾಗಿರುವವ ಹಾಗೂ ಯಾವುದೇ ಕಾಮನೆಗೆ ಒಳಗಾಗದಿರುವವನೇ ಸಂತ" ಎಂದಿದ್ದಾರೆ.

ಹಾಗೆ ನೋಡಿದರೆ, ರೂಢಿಗತ ಅರ್ಥದಲ್ಲಿ ಪಂಡಿತ ಪರಶುರಾಮ ಚತುರ್ವೇದಿಯವರು ಅಭಿಪ್ರಾಯಪಡುವಂತೆ ಒಂದು ಕಾಲದಲ್ಲಿ 'ವಿಟ್ಠಲ' ಹಾಗೂ ವಾರಕರಿ ಸಂಪ್ರದಾಯದ ಪ್ರಧಾನ ಪ್ರಚಾರಕರನ್ನು ಮತ್ತು ನಿರ್ಗುಣ ಭಕ್ತಿಯ ಸಾಧಕರನ್ನು 'ಸಂತ'ರೆಂದು ಕರೆಯುತ್ತಿದ್ದರು. ಜ್ಞಾನದೇವ, ನಾಮದೇವ, ಏಕನಾಥ, ತುಕರಾಂ ಮೊದಲಾದ ಭಕ್ತರು ಈ ಸಾಲಿನಲ್ಲಿ ಬರುತ್ತಾರೆ. ಈ ಎಲ್ಲರೂ 'ಸಂತ' ಶಬ್ದವನ್ನು ವ್ಯಾಖ್ಯಾನಿಸಿದ್ದಾರೆ. ಸಾಧನಾಮಾರ್ಗದಲ್ಲಿನ ಕೊಂಚ ಭಿನ್ನತೆಯಿಂದಾಗಿ ಈ ವ್ಯಾಖ್ಯಾನಗಳಲ್ಲಿ ಅಂತರವೂ ಕಂಡುಬರುತ್ತದೆ. ಉದಾಹರಣೆಗೆ, ವೈಚಾರಿಕತೆಗೆ ಪ್ರಾಧಾನ್ಯ ನೀಡುವ ಸಂತರು ವಿವೇಕವಂತನಾಗಿರಬೇಕೆಂದು, ಭಕ್ತಿಭಾವ ಸಂಪೂರಿತರಾಗಿರುವ ಸಂತರು ಪರತತ್ವದೊಂದಿಗೆ ಪರಿಚಿತರಾಗಿರಬೇಕೆಂದು, ಅವನನ್ನು ತನ್ನೊಳಗೆ, ತನ್ನನ್ನು ಅವನೊಳಗೆ ಕಾಣಬೇಕೆಂದು, ಆಚರಣೆಗೆ ಮಹತ್ವಕೊಡುವ ಸಂತರು ಅಷ್ಟೇ ಮಹತ್ವವನ್ನು ಭಗವತ್ ಚಿಂತನೆಗೂ ಕೊಡಬೇಕೆಂದು ಹೇಳುತ್ತಾರೆ. ಹೀಗೆ ಜ್ಞಾನ, ಭಕ್ತಿ ಮತ್ತು ಕ್ರಿಯೆಗೆ ಮಹತ್ವ ಕೊಡುವ ಈ ಎಲ್ಲ ಸಂತರ ಪ್ರಮುಖ ಉದ್ದೇಶ ಮಾನವನ ಬದುಕಿಗೆ ಎಲ್ಲಿಲ್ಲದ ಗೌರವ ಕೊಡುವುದು. ಈ ಭೂಮಿಯ ಮೇಲೆ ಜೀವನ್ಮುಕ್ತರಾಗಿ ಆನಂದಮಯ ಬದುಕನ್ನು ಬಾಳುವುದು ಹಾಗೂ ಲೋಕಮಂಗಳಕಾಮಿಯಾಗಿರುವುದೇ ಆಗಿದೆ. ಈ ಸಿದ್ಧಾಂತಗಳನ್ನು ಪಾಲಿಸುವವನೇ ಸಂತ.

ನಿರ್ಗುಣ ಮತ್ತು ಸಗುಣೋಪಾಸಕರು ವ್ಯಾಪಕ ಅರ್ಥದಲ್ಲಿ ಭಕ್ತರೇ ಆದರೂ ವಿಶಿಷ್ಟ ಅರ್ಥದಲ್ಲಿ ನಿರ್ಗುಣೋಪಾಸಕರು ಮಾತ್ರ 'ಸಂತ'ರೆನಿಸಿಕೊಳ್ಳುತ್ತಾರೆ. ಡಾ.

ವಿನಯಮೋಹನ್ ಶರ್ಮಾರವರು ಅಭಿಪ್ರಾಯಪಡುವಂತೆ "ಹಿಂದಿಯಲ್ಲಿ 'ಸಂತ' ಶಬ್ದದ ಪ್ರಯೋಗ ನಿರ್ಗುಣ ಬ್ರಹ್ಮನ ಉಪಾಸಕ ಕವಿಗಳಿಗೆ ಅನ್ವಯಿಸುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ 'ಭಕ್ತ' ಶಬ್ದವನ್ನು ಸಗುಣ ಬ್ರಹ್ಮೋಪಾಸಕರಿಗೆ ಉಪಯೋಗಿಸುತ್ತಾರೆ.

ಹಿಂದಿಯಲ್ಲಿ ನಿರ್ಗುಣೋಪಾಸಕ ಭಕ್ತರ ಸಮೃದ್ಧ ಪರಂಪರೆಯಿದ್ದು, ಇವರು 'ಸಂತ'ರೆಂದೂ, ಇವರು ಪ್ರತಿಪಾದಿಸಿದ ಸಿದ್ಧಾಂತಗಳು 'ಸಂತಮತ'ವೆಂದೂ ಪ್ರಸಿದ್ಧವಾಗಿವೆ. ಈ ಸಂತಮತ ಭಾರತೀಯ ಸಾಹಿತ್ಯಕ್ಕೆ ಮಧ್ಯಯುಗದ ಅನುಪಮ ಕೊಡುಗೆಯಾದರೂ, ಕಬೀರನನ್ನು ಈ ಮತದ ಪ್ರವರ್ತಕನೆಂದು ಹೇಳಲಾಗುವುದಾದರೂ, ಈ ಮತದ ಬೇರುಗಳು ನಾಥ- ಸಿದ್ಧರ ಬಾಣಿ(ವಾಣಿ)ಗಳಲ್ಲಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ.

ಸಂತಮತ ಯಾವುದೇ ಧರ್ಮ, ಸಂಪ್ರದಾಯದಿಂದ ದೂರವಿದೆ. ಸಂತರು ಸಾರಸಂಗ್ರಹಿಗಳಾಗಿ ತಮ್ಮ ಸಮಕಾಲೀನ ಬದುಕಿನಲ್ಲಿ ಎದುರಾದ ಎಲ್ಲ ಸಾಧನಾಮಾರ್ಗಗಳ ಉತ್ತಮಾಂಶಗಳನ್ನು ಪ್ರಾಂಜಲ ಮನಸ್ಸಿನಿಂದ ಸ್ವೀಕರಿಸಿದರಾದರೂ, ಅವನ್ನು ತಮ್ಮ ವಿವೇಕ ಮತ್ತು ಚಿಂತನೆಯ ನಿಕಷಕ್ಕೆ ಗುರಿಪಡಿಸಿ ತಮ್ಮದೇ ಆದ ಸಿದ್ಧಾಂತಗಳನ್ನು ರೂಪಿಸಿಕೊಂಡರು. ಮಧ್ಯಯುಗದ ಅಂದರೆ, 15ನೆಯ ಶತಮಾನದ ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ವಲಯದಲ್ಲಿದ್ದ ಅಸಾಂಗತ್ಯಗಳು, ಅದರಲ್ಲೂ ವಿಶೇಷವಾಗಿ ಹಿಂದೂ ಧರ್ಮದಲ್ಲಿದ್ದ ಅಸಮಾನತೆಗಳು ರೂಢಿಬದ್ಧವಾದ ಸಂಪ್ರದಾಯ ಆಚಾರ-ವಿಚಾರಗಳು ಸಂತಮತದ ಹುಟ್ಟಿಗೆ ಕಾರಣಗಳಾದವು. ವ್ಯವಸ್ಥೆಯ ವಿರುದ್ಧ, ಸ್ಥಾಪಿತ ಮೌಲ್ಯಗಳಿಗೆ ಪ್ರತಿಕ್ರಿಯಾತ್ಮಕ ಆಂದೋಲನವಾಗಿ ರೂಪುಗೊಂಡ ಸಂತಮತದ ಧ್ವನಿ ತುಳಿತಕ್ಕೊಳಗಾದ ಜನಾಂಗದ ವೇದಿಕೆಯಾಗಿದೆ. ಸಾಮಾಜಿಕ ದೃಷ್ಟಿಯಿಂದ ಸರ್ವೋದಯ ಸಿದ್ಧಾಂತಗಳ ಮೇಲೆ ತಮ್ಮ ಸಾಧನೆಯ ಬಲದ ಮೇಲೆ ಆಧ್ಯಾತ್ಮಿಕ ಎತ್ತರಗಳನ್ನು ಏರಬೇಕೆನ್ನುವ ಕಾಳಜಿ-ಕಳಕಳಿಯನ್ನಿಟ್ಟುಕೊಂಡ ಸಂತಮತ ವಿಶ್ವಮತ, ಸಂತಧರ್ಮ ವಿಶ್ವಧರ್ಮವಾಗಿದೆ.

**ಸಂತಸಾಹಿತ್ಯದ ಪ್ರವೃತ್ತಿಗಳು**

1. ಸಂತರ ದೇವರ ಪರಿಕಲ್ಪನೆ ಎಂದರೆ ವಿಶ್ವದ ನಿಯಾಮಕಶಕ್ತಿಯಾದ ಪರತತ್ವ ನಿರ್ಗುಣ, ನಿರಾಕಾರ, ನಿರಂಜನಸ್ವರೂಪಿ, ಇದರಿಂದಲೇ ಚರಾಚರ ಸೃಷ್ಟಿ ಸಂಚಾಲಿತವಾಗುತ್ತದೆ. ಆ ಪರತತ್ವವನ್ನೇ ಸತ್, ಪೂರ್ಣ, ಸರ್ವವ್ಯಾಪಿ, ನಿತ್ಯ ಎಂದೆಲ್ಲ ಕರೆಯಲಾಗಿದೆ. ಈ ಸತ್ಯದ ಅನುಭೂತಿ ಜ್ಞಾನ ಮತ್ತು ಪ್ರೇಮದಿಂದ ಮಾತ್ರ ಸಾಧ್ಯ. ಜ್ಞಾನವೆಂದರೆ ಅರಿವು, ತನ್ನ ನಾನು ಅರಿಯುವುದು. ಪ್ರೇಮವೆಂದರೆ

ಜಗತ್ತನ್ನು, ಬದುಕನ್ನು ಪರತತ್ವದ ಪ್ರಸಾದವೆಂದು ಸ್ವೀಕರಿಸಿ ಪ್ರೀತಿಸುವುದು. ಈ ದೃಷ್ಟಿಯಿಂದ ಸಂತರು ಜ್ಞಾನಯೋಗಿಗಳೂ ಹೌದು, ಪ್ರೇಮಯೋಗಿಗಳೂ ಹೌದು, ಪರಮಾತ್ಮರೂಪಿ ಪರತತ್ವ ಘಟಘಟವಾಸಿ, ಸರ್ವಾಂತರ್ಯಾಮಿ ಬ್ರಹ್ಮ ಯಾ ಪರತತ್ವವನ್ನು ವೇದಾದಿ ಶಾಸ್ತ್ರಗಳು ಸಹ ವರ್ಣಿಸಲು ಅಸಮರ್ಥವಾಗಿವೆ. ಅವನು ಅಸೀಮ, ಅಗೋಚರ, ಅನಂತ, ಈ ಅನಂತ ತತ್ವವನ್ನು ನಂಬುವ ಸಂತಧರ್ಮ ಆಸ್ತಿಕ ಧರ್ಮ.

2. ಸಂತರ ಪ್ರಕಾರ ಬ್ರಹ್ಮ ಅಥವಾ ಪರತತ್ವ ಅಸೀಮವಾದರೆ ಜೀವ ಸಸೀಮವಾದದ್ದು. ಈ ಸಸೀಮವಾದ ಜೀವ ತನ್ನ ನಿರಂತರ ಸಾಧನೆಯಿಂದ ಮಾತ್ರ ಬ್ರಹ್ಮಸಾಕ್ಷಾತ್ಕಾರ ಮಾಡಿಕೊಳ್ಳಬಲ್ಲದು. ಪ್ರತಿ ಜೀವದಲ್ಲೂ ಪರಮಾತ್ಮನಿದ್ದಾನೆ. ಈ ಜೀವ ಬ್ರಹ್ಮನ ಅಂಶ. ಬ್ರಹ್ಮನೇ ಅನೇಕ ಜೀವರೂಪಗಳಲ್ಲಿದ್ದಾನೆ. ಜೀವದಿಂದ ಬ್ರಹ್ಮಪ್ರಾಪ್ತಿಯ ಸುಖ ಎಂಥ ದಿವ್ಯಾನಂದಕರವಾದುದು ಎಂದರೆ ಅದರ ಮುಂದೆ ಪ್ರಾಪಂಚಿಕವಾದ ಎಲ್ಲ ಸುಖಗಳು ನಗಣ್ಯ, ನಿರರ್ಥಕ, ತ್ಯಾಜ್ಯವಾದವುಗಳಾಗಿವೆ. ಜೀವದ ಪರಮಲಕ್ಷ್ಯ ಬ್ರಹ್ಮಾನಂದಸುಖವೇ ಆಗಿದೆ. ಅದರ ಮುಂದೆ ಜೀವದ ಸಕಲೈಶ್ವರ್ಯಗಳೂ ನಿಷ್ಫಲ. ಹೀಗಾಗಿ ಜೀವ ಬ್ರಹ್ಮೈಕ್ಯವೇ ಜೀವದ ಅಂತಿಮ ಗುರಿ, ಲಕ್ಷ.

3. ಸಂತರು ಜಗತ್ತನ್ನು ಮಿಥ್ಯೆ, ಭ್ರಮಾತ್ಮಕ, ದುಃಖಮಯ, ಕ್ಷಣಭಂಗುರವೆಂದು ಭಾವಿಸುತ್ತಾರೆ. ಆದರೆ ಮನುಷ್ಯಶರೀರವನ್ನು ಅವರು ಸೃಷ್ಟಿಯ ಸರ್ವೋತ್ಕೃಷ್ಟವಾದ ಅಂಶವೆಂದು ನಂಬಿದ್ದಾರೆ. ಈ ಶರೀರದ ಮೂಲಕ ಮನುಷ್ಯ ಆಂತರಿಕ ಸಾಧನೆ ಮಾಡುತ್ತ ಪೂರ್ಣತ್ವವನ್ನು ಪಡೆದುಕೊಳ್ಳುತ್ತಾನೆ ಎಂದು ನಂಬುತ್ತಾರೆ. ಪೂರ್ಣತೆಯ ಚರಮಸ್ಥಿತಿಗೆ ತಲುಪುವ ಜೀವಿಯೇ ಜೀವನ್ಮುಕ್ತ ಸಂತನಾಗುತ್ತಾನೆ. ಜೀವನ್ಮುಕ್ತ ಸಂತ ಲೌಕಿಕದಲ್ಲಿ ಇದ್ದೂ ಇಲ್ಲದಂತೆ ಇರುತ್ತಾನೆ. ಲೌಕಿಕದಿಂದ ಸಂಪೂರ್ಣವಾಗಿ ವಿಮುಖವಾಗಿ ತನ್ನ ಅಸ್ತಿತ್ವವನ್ನು ಲೋಕಮಂಗಳಕ್ಕಾಗಿ ಸಮರ್ಪಿಸಿಕೊಳ್ಳುತ್ತಾನೆ. ಇಲ್ಲಿ ಹೃದಯಶುದ್ಧಿಗೆ ಪ್ರಾಧಾನ್ಯವೇ ಹೊರತಾಗಿ ಆಡಂಬರ, ಅಬ್ಬರಗಳು ಅರ್ಥಹೀನ. ಜೀವನ್ಮುಕ್ತ ಸಂತನ ಬದುಕನ್ನು ಸಹಜಮಾರ್ಗದ ಬದುಕು ಅನ್ನಬಹುದು.

4. ಸಂತರು ಎಲ್ಲ ಬಗೆಯ ಯೋಗಗಳನ್ನು ಕುರಿತು ಚರ್ಚಿಸಿದ್ದರೂ ಸಹಜಯೋಗವನ್ನು ಸ್ವೀಕರಿಸಿದರು, ಒಪ್ಪಿದರು. ಸಹಜ ಭಾವದಿಂದ ಆತ್ಮವನ್ನು ಪರಮಾತ್ಮನೊಂದಿಗೆ ಲೀನಗೊಳಿಸುವುದೇ ಸಹಜಯೋಗ, ವೀಣೆಯ ತಂತಿಗಳನ್ನು ಸಡಿಲಬಿಟ್ಟರೆ ನಾದ ಹೊರಹೊಮ್ಮದು. ತೀರ ಬಿಗಿ ಮಾಡಿದರೆ ತಂತಿಗಳೇ ಕಿತ್ತು ಬರುವುವು. ಈ ಎರಡೂ ಸ್ಥಿತಿಗಳನ್ನು ಸಂತರು ನಿರಾಕರಿಸಿ ಮಧ್ಯಮ ಮಾರ್ಗವನ್ನು ಅನುಸರಿಸಿ ಇದನ್ನು 'ಸಹಜ'ವೆಂದು ಕರೆದರು. ಸಹಜವಾದ ಬಾಳನ್ನು ಬಾಳುತ್ತ

ಆತ್ಮಸಾಧನೆ ಮಾಡಬೇಕೆಂದರು. ಮನಸ್ಸಿನ ಸಂಯಮ, ಜ್ಞಾನದ ಅರಿವು ಮತ್ತು ಸತ್ಸಂಗದಿಂದ ಇದು ಸಾಧ್ಯ ಅಂದರು. ಅದರಲ್ಲೂ ಸತ್ಸಂಗವೊಂದಿದ್ದರೆ ಕೈಲಾಸ, ಮೋಕ್ಷವೂ ನಗಣ್ಯ. ಆದರೆ ಇದು ತಂತಿಯ ಮೇಲೆ ಮಾಡಲಾಗುವ ಕಸರತ್ತಿನಷ್ಟೇ ಕಷ್ಟ, ಕಬೀರ 'ಸಹಜ'ವನ್ನು ವರ್ಣಿಸುತ್ತ 'ಸಹಜ' ಸಹಜ ಎಂದು ಎಲ್ಲರೂ ಹೇಳುತ್ತಾರೆ. ಆದರೆ ಸಹಜದ ಅರ್ಥವನ್ನು ತಿಳಿದಿರುವವರು ವಿರಳ. ಸಹಜ ಭಾವದಿಂದ ಕ್ರಮಕ್ರಮೇಣವಾಗಿ 'ವಿಷಯ'ಗಳನ್ನು ಪರಿತ್ಯಜಿಸುವವನೇ 'ಸಹಜವಾದಿ' ಎಂದು ಹೇಳಿದ್ದಾನೆ. ಸಹಜವಾದಿಗಳಾದ ಸಂತರು ಹಠಯೋಗವನ್ನು ವಿರೋಧಿಸಿದರು. ಭಗವದ್ಭಕ್ತಿಯನ್ನು ಸಮರ್ಥಿಸಿದರು. ಸುಖ–ದುಃಖವನ್ನು ಸಮರಸ ಭಾವನೆಯಿಂದ ಸ್ವೀಕರಿಸುವುದೇ ಸಹಜಾವಸ್ಥೆ, ನಿರ್ವಾಣ ಎಂದು ಹೇಳಿದರು. 'ಸಹಜ ಸ್ಥಿತಿಗೆ ತಲುಪಿದ ಆತ್ಮಕ್ಕೆ ಯಾವುದೂ ತ್ಯಾಜ್ಯವಲ್ಲ ಅಥವಾ ಯಾವುದೂ ಸಂಪೂರ್ಣ ಸ್ವೀಕಾರಾರ್ಹವೂ ಅಲ್ಲ. ಇದು ಸ್ವೀಕೃತಿಯಿದ್ದರೂ ಅಸ್ವೀಕೃತಿಯ ಸ್ಥಿತಿ. ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿ.

ಸಂತಧರ್ಮ ಸಹಜಧರ್ಮವಾಗಿದೆ. ಸಂತರು ಈ 'ಸಹಜ'ವನ್ನು ಆಧ್ಯಾತ್ಮ ಮತ್ತು ವ್ಯಾವಹಾರಿಕ ಕ್ಷೇತ್ರಗಳೆರಡಕ್ಕೂ ಅನ್ವಯಿಸಿದರು. ಈ ದೃಷ್ಟಿಯಿಂದ ನೋಡಿದಾಗ ಸಂತರು ಸಾಧಕರೂ ಆಗಿದ್ದರು. ಗೃಹಸ್ಥರೂ ಆಗಿದ್ದರು. ಇದೇ ಸಂತರ ಸಹಜ ಪಥ, ಇದೇ ಅವರ ಸತ್ಯಪಥ.

ಸಂತರು ಸನ್ಯಾಸ ಧರ್ಮವನ್ನು ಬೋಧಿಸಲಿಲ್ಲ. ಲೌಕಿಕವನ್ನೇ ಇಡಿಯಾಗಿ ಸ್ವೀಕರಿಸಲಿಲ್ಲ. ಕಮಲಪತ್ರದ ಮೇಲಿನ ನೀರ ಹನಿಯಂತೆ ಇವರ ಲೌಕಿಕ ಬದುಕು. ಇಲ್ಲಿ 'ಸಂದು' ಅಲ್ಲಿಯೂ ಸಲ್ಲಬೇಕು ಎಂಬುದು ಇವರ ಜೀವನಧೋರಣೆ.

5. ಸಂತರು ಮಾಯೆಯ ಅಸ್ತಿತ್ವವನ್ನು ಒಪ್ಪುತ್ತಾರೆ. ಜೀವ ಮತ್ತು ಪರಮಾತ್ಮನ ಮಿಲನಕ್ಕೆ ಅಡ್ಡಿಯಾಗಿರುವುದು, ಇವೆರಡರ ಮಧ್ಯೆ ವಿಭೇದಕಶಕ್ತಿಯಾಗಿರುವುದು ಮಾಯೆ. ಮಾಯೆಯ ಬಂಧನದಲ್ಲಿರುವ ಜೀವ ಪರತತ್ವದ ಅರಿವನ್ನು ಪಡೆದುಕೊಳ್ಳಲಾರದು ಎಂದು ಸಂತರು ಸ್ಪಷ್ಟವಾಗಿ ಅಭಿಪ್ರಾಯಪಡುತ್ತಾರೆ. ಅಜ್ಞಾನ ಮತ್ತು ಅವಿದ್ಯೆಯ ವಶದಲ್ಲಿರುವ ಜೀವ ಪರಮಾತ್ಮನ ಚಿಂತೆಗೆ ಎಂದೂ ತೊಡಗದು. ಹೀಗಾಗಿ ಇವೆರಡನ್ನು ಗೆಲ್ಲಲು ಸತತ ಪ್ರಯತ್ನ ಮಾಡುವುದು ಜೀವದ ಕರ್ತವ್ಯವೆಂದು ಸಂತರು ಹೇಳಿದ್ದಾರೆ. ಕಾಂಚನ ಮತ್ತು ಕಾಮಿನಿ ಸಾಧಕನ ಶತ್ರುಗಳು ಎಂದು ಸಂತರು ಹೇಳುತ್ತಾರೆ. ಕಬೀರನಂತೂ ಮಾಯೆಯನ್ನು ಮೋಸಗಾರ್ತಿ ಎಂದು ಕರೆದಿದ್ದಾನೆ.

6. ಸಂತರಿಗೆ ಮುಕ್ತಿಯ ಬಗೆಗೆ, ಸತ್ತ ಮೇಲೆ ದೊರೆಯುವ ಮೋಕ್ಷದ ಬಗ್ಗೆ ನಂಬಿಕೆಯಿಲ್ಲ. ಏಕೆಂದರೆ ಅವರು ಭಕ್ತಿ ಮತ್ತು ಸತ್ಸಂಗವನ್ನು ಮುಕ್ತಿಗಿಂತಲೂ

ಶ್ರೇಷ್ಠವೆಂದು ಪರಿಭಾವಿಸಿದ್ದಾರೆ. ಸಂತರು 'ಮುಕ್ತಿ ಸಂತರ ದಾಸಿ' ಎಂದು ಮಾರ್ಮಿಕವಾಗಿ ನುಡಿದಿದ್ದಾರೆ. ಮರಣೋತ್ತರದ ಮುಕ್ತಿಗಿಂತಲು ಹೆಚ್ಚಾಗಿ ಸಂತರು ಬದುಕುವ ಭವದ ಬದುಕಿನಲ್ಲಿ, ಭವದ ಬಂಧನಗಳಿಂದ ಮುಕ್ತರಾಗಿ, ನಿರ್ಮೋಹಿಗಳಾಗಿ, ನಿರ್ಲಿಪ್ತರಾಗಿ ಬದುಕುವ ತೂರಿಯಾವಸ್ಥೆಯನ್ನು ತಲುಪುವುದೇ ಮುಕ್ತಿ ಎಂದು ನಂಬಿದ್ದರು. ಸಂತರ ದೃಷ್ಟಿಯಲ್ಲಿ ಭವದಲ್ಲಿದ್ದುಕೊಂಡು ಪಡೆಯುವ ಜೀವನ್ಮುಕ್ತಾವಸ್ಥೆಯೇ ನಿಜವಾದ ಮುಕ್ತಿ.

7. ಮರಣ ಅಥವಾ ಮೃತ್ಯುವೆಂದರೆ ಪಾರ್ಥಿವಶರೀರದ ಅವಸಾನ. ಈ ಮರಣದ ಉರಿವ ಕೆಂಡದ ಮೇಲೆ ಇಡೀ ಜೀವಲೋಕ ನಿಂತಿದೆ. ಸಂತರು ಈ ಮರಣದ ಮಾಧುರ್ಯ ಮತ್ತು ಅಮೃತತ್ವವನ್ನು ಸಹಜ ಮರಣದಲ್ಲಿ ನೋಡಬಯಸುತ್ತಾರೆ. ಅಂಥ ಮರಣ–ಮೋಕ್ಷವನ್ನು ಪಡೆದ ಮೇಲೆ, ಮತ್ತೆ ಭವದ ಜಂಜಡಕ್ಕೆ ಬರಲು ಸಂತರು ಇಚ್ಛಿಸುವುದಿಲ್ಲ. ಇವರಿಗೆ ಮೃತ್ಯು ಶಾಶ್ವತ ಬ್ರಹ್ಮನ ಲೀಲಾವಿಲಾಸದ ಕೇಂದ್ರವಾಗಿದೆ.

8. ಸಂತರು ಪುನರ್ಜನ್ಮವನ್ನು ಬಯಸುವುದಿಲ್ಲ. ಆದರೆ ಕರ್ಮಸಿದ್ಧಾಂತವನ್ನು ನಂಬುತ್ತಾರೆ. ಜೀವದ ಬದುಕಿನ ವಾಸ್ತವಗಳಿಗೆ ಅದರ ಸಂಚಿತ ಕರ್ಮಗಳು, ಪೂರ್ವಜನ್ಮದ ಲೆಕ್ಕಗಳು ಕಾರಣವೆಂದು ದೃಢವಾಗಿ ನಂಬುತ್ತಾರೆ. ಜೀವದ ಪ್ರಾರಬ್ಧಗಳು, ಜಾತಿ, ಆಯಸ್ಸು, ಭೋಗ ಹೀಗೆ ಎಲ್ಲವೂ ಪೂರ್ವಜನ್ಮದ ಲೇಖಾನುಸಾರವಾಗಿ ನಿಶ್ಚಿತವಾದವುಗಳಾಗಿರುತ್ತವೆ. ಅವನ್ನು ಬದಲಿಸುವುದು ಸಾಧ್ಯವಿಲ್ಲ. ಕರ್ಮಗಳ ಫಲ ಉಣ್ಣುವುದು ಅನಿವಾರ್ಯವೆಂದು ಸಂತರು ಭಾವಿಸುತ್ತಾರೆ. ಕಬೀರ ತಾನು ನಿಮ್ನ ಜಾತಿಯಲ್ಲಿ ಹುಟ್ಟಿರುವುದಕ್ಕೆ ತನ್ನ ಪೂರ್ವಜನ್ಮದ ಕರ್ಮವೇ ಕಾರಣವೆಂದು ಹೇಳಿದ್ದಾನೆ. ಆದರೆ ಪೂರ್ವಜನ್ಮದ ಕರ್ಮಾಂತರಗಳನ್ನೇ 'ಚರಮ ಬರಹ'ಗಳೆಂದು ಭಾವಿಸಿ, ಈ

9. ಜನ್ಮದಲ್ಲಿ ಅಕರ್ಮಣ್ಯರಾಗಿರುವಂತೆ ಹೇಳುವುದಿಲ್ಲ. ಸಂತರು 'ಇಹ'ದ ಬದುಕನ್ನು ಕರ್ಮಕ್ಷೇತ್ರವೆಂದು ಭಾವಿಸಿ ಕರ್ಮಠರಾಗಲು ಹೇಳುತ್ತಾರೆ. ಸತ್ಸಂಗ, ಸದಾಚಾರ, ನಿಷ್ಕಾಮಕರ್ಮದ ಮೂಲಕ ಮನಸ್ಸನ್ನು ಪರಮಾತ್ಮೋನ್ಮುಖಗೊಳಿಸಲು ಕರೆಯುತ್ತಿದ್ದಾರೆ. ಪರಮಾತ್ಮೋನ್ಮುಖವಾದ ಜೀವಿಗೆ ಆತನ ಕರ್ಮ ಪರಮಾತ್ಮನ ಸಾಕ್ಷಾತ್ಕಾರಕ್ಕೆ ಮಾಧ್ಯಮವಾಗುತ್ತದೆ. ಕಾಯಕವೇ ಕೈಲಾಸದ ಹಾದಿಯಾಗಿರುತ್ತದೆ. ಕಬೀರ ನೇಯ್ಗೆಯವ, ರವಿದಾಸ ಚಮ್ಮಾರ, ಇವರು ಈ ಕಾಯಕದ ಮೂಲಕವೇ ಪರಮಾತ್ಮನನ್ನು ಕಂಡರು. ಸಂತರು ಕರ್ಮಸಿದ್ಧಾಂತದ ಪಾರಂಪರಿಕ ಅರ್ಥವನ್ನು ನಂಬಿದರೂ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಈ ಜನ್ಮದ ಕರ್ಮಗಳ ಫಲ ಮುಂದಿನ ಜನ್ಮದಲ್ಲಲ್ಲ, ಈ ಜನ್ಮದಲ್ಲೇ ದೊರೆಯುತ್ತವೆ ಎಂದು ನುಡಿದು, ಈ

ಬದುಕಿನಲ್ಲಿ ಸತ್ಕರ್ಮಗಳನ್ನು ಮಾಡಲು ಕರೆ ನೀಡಿ ಕರ್ಮದ ಮರ್ಮವನ್ನು ಅನಾವರಣಗೊಳಿಸಿದ್ದಾರೆ. ಮನುಷ್ಯನ ಕರ್ಮಗಳು ಅವನ ಮನಸ್ಸಿನ ಪ್ರತಿಬಿಂಬಗಳು ಎಂದು ಸಂತರು ಹೇಳಿದ್ದಾರೆ. ಸಂತರು ಸ್ವರ್ಗ–ನರಕಗಳನ್ನು ಈ ಭವದಲ್ಲಿಯೇ ಕಂಡು, ಆ ಸ್ವರ್ಗ–ನರಕಗಳನ್ನು ನಿರಾಕರಿಸಿದರು.

10. ಸಂತರು ಭಕ್ತಿಭಂಡಾರಿಗಳು. ಇವರು ಪರಮಾತ್ಮನ ಅಸೀಮವಾದ ಅಸ್ತಿತ್ವದಲ್ಲಿ ಅಪಾರವಾದ ವಿಶ್ವಾಸವನ್ನಿಟ್ಟು ಅವನ ಸಾಕ್ಷಾತ್ಕಾರಕ್ಕಾಗಿ ನಿರಂತರ ಸಾಧನೆ ಮಾಡಿದರು. ಸಂತರ ದೃಷ್ಟಿಯಲ್ಲಿ ಪರಮಾತ್ಮನ ಸಾಕ್ಷಾತ್ಕಾರಕ್ಕೆ ವೇದಶಾಸ್ತ್ರಗಳ, ಪುಸ್ತಕಜ್ಞಾನದ ಆವಶ್ಯಕತೆಯಿಲ್ಲ. ತೀರ್ಥಯಾತ್ರೆ, ಉಪವಾಸ–ವ್ರತಗಳ ಗೊಡವೆ ಬೇಕಿಲ್ಲ.

ಜ್ಞಾನ ಮತ್ತು ಪ್ರೇಮ ಸಂತರ ಭಕ್ತಿಮಾರ್ಗದ ಎರಡು ಕಣ್ಣುಗಳು. ಈ ಕಣ್ಣುಗಳ ಮೂಲಕ ಜಗತ್ತನ್ನೇ ಪರಮಾತ್ಮನ ಚೈತನ್ಯಪುಂಜವೆಂದು ಸಂತರು ಭಾವಿಸಿದರು. ತನ್ನ ತಾ ಅರಿಯುವ ಜ್ಞಾನ ಮತ್ತು ಜಗತ್ತನ್ನು ಪರಮಾತ್ಮನ ಸೃಷ್ಟಿಯೆಂದು ಪರಿಭಾವಿಸಿ ಅದನ್ನು ಮನದಲ್ಲಿ, ನಯನಗಳಲ್ಲಿ, ಹೃದಯದಲ್ಲಿ ತುಂಬಿಕೊಂಡು ನಲಿಯುವಂಥ ಮನಸ್ಸು ಸಂತರದು.

ಈ ಅರಿವು ಬರುವುದು ಮಾತ್ರ ಗುರುಕೃಪೆಯಿಂದ, ಅವನ ಉಪದೇಶದಿಂದ ಎಂದು ಸಂತರು ಭಾವಿಸುತ್ತಾರೆ. ಹೀಗಾಗಿ ಸಂತರ ಭಕ್ತಿಮಾರ್ಗದಲ್ಲಿ ಗುರುವಿಗೆ ಅನನ್ಯ ಸ್ಥಾನವಿದೆ. ಶಿವಪಥಕ್ಕೆ ಗುರುಪಥವೇ ಮೊದಲು ಎಂಬಂತೆ ಗುರು–ಗೋವಿಂದರ ಮಧ್ಯೆ ಮೊದಲ ಪೂಜೆ ಯಾರಿಗೆ ಎಂಬ ಪ್ರಶ್ನೆ ಬಂದರೆ, ಗುರುವಿಗೇ ಎಂಬ ಧೋರಣೆ ಸಂತರದು. ಏಕೆಂದರೆ, ಗೋವಿಂದನ ದಾರಿ ತೋರುವವನೇ ಗುರು. ಈತ 'ಮನುಷ್ಯ'ನನ್ನು 'ದೇವತೆ'ಯನ್ನಾಗಿ ಮಾಡಬಲ್ಲ ಶಕ್ತಿ. ಗುರುವಿನ ಜ್ಞಾನ ದೀಪಕ್ಕೆ ಸಂತರದು ಸದಾ ಮುಗಿದ ಕೈಗಳು, ಬಾಗಿದ ತಲೆಗಳು.

ಸಂತರ ಭಕ್ತಿ ಪ್ರೇಮದ ಯೋಗದಿಂದ ಪುಷ್ಟಗೊಂಡ, ಜ್ಞಾನದ ಬಲದಿಂದ ಪರಿಪಾಕಗೊಂಡ ತವನಿಧಿ. ಭಕ್ತಿಯ ಶ್ರೀಮಂತಿಕೆಯಿಂದ ತುಂಬಿ ತುಳುಕುವ ಸಂತರು ನಾಮಸ್ಮರಣೆಗೆ ಒತ್ತು ನೀಡಿದರು. ಸಂತರ ನಾಮಸ್ಮರಣೆ ಒಂದು ಯಾಂತ್ರಿಕ ವಿಧಿಯಲ್ಲ, ಜಪಮಣಿಗಳ ಎಣಿಕೆ ಇಲ್ಲಿಲ್ಲ. ಇವರ ರಾಮನಾಮಸ್ಮರಣೆ ಎಂದರೆ ಎಲ್ಲ ಸಾತ್ವಿಕ ಕ್ರಿಯೆಗಳ ಪರ್ಯಾಯ ಶಕ್ತಿ, ಆತ್ಮನನ್ನು ಪರಮಾತ್ಮನೆಡೆಗೆ ಸೆಳೆದೊಯ್ಯುವ ಚುಂಬಕ. ನಾಮಸ್ಮರಣೆ ಸಂತರ ಪಾಲಿಗೆ ಪ್ರೇಮಸಾಧನೆ. ಇಲ್ಲಿ 'ತನ್ನದು' ಅನ್ನುವುದೇ ಇಲ್ಲ, ಎಲ್ಲ ಪರಮಾತ್ಮನದು. ಇಹದ ಒಂದೊಂದು ಸೃಷ್ಟಿಯನ್ನು ಪರಮಾತ್ಮನ ಕೃಪಾಪ್ರಸಾದವೆಂದು ಭಾವಿಸಿ ಅದರೊಡನೆ ಏಕಾಕಾರಗೊಳ್ಳುವುದು ಸಂತರ ಭಕ್ತಿಯ ಪರಾಕಾಷ್ಠೆಯಾಗಿದೆ.

ಸಂತರು ಧಾರ್ಮಿಕ ಸಾಮ್ರಾಜ್ಯದಲ್ಲಿ ಲೋಕತಂತ್ರವನ್ನು ಸ್ಥಾಪಿಸಿದರು. ಭಕ್ತಿಯನ್ನು ಕೆಳವರ್ಗದ ಜನರವರೆಗೂ ಕೊಂಡೊಯ್ದು ಸಾರ್ವತ್ರಿಕಗೊಳಿಸಿದರು. ಭಕ್ತಿಗೂ ಹುಟ್ಟಿಗೂ ಯಾವುದೇ ಸಂಬಂಧವಿಲ್ಲವೆಂದು ಹೇಳಿ, ಯಾರು ಬೇಕಾದರೂ ಭಕ್ತರಾಗಬಹುದೆಂದು ಹೇಳಿದರು. ಉಚ್ಚವರ್ಗದವರ 'ಅಹಂ'ಗೆ ಕೊಡಲಿಪೆಟ್ಟು ಹಾಕಿದರು. ಸಂತರ ದೃಷ್ಟಿಯಲ್ಲಿ ನಿಮ್ಮ ಜಾತಿಯೆಂಬುದೇ ಇಲ್ಲ. ಅವರ ದೃಷ್ಟಿಯಲ್ಲಿ ಭಕ್ತನಲ್ಲದವನು, ಭಗವತ್‌ಚಿಂತನೆಯಲ್ಲಿ ತೊಡಗದವನು ಮಾತ್ರ ನಿಮ್ನ. ವಿಷಯ ಸುಖಗಳಿಂದ ಮನಸ್ಸನ್ನು ಪ್ರಭುಚರಣಗಳತ್ತ ಒಲಿಸುವುದೇ ಭಕ್ತಿಯ ಚರಮ ಲಕ್ಷ್ಯವೆಂದು ಸಂತರು ಹೇಳಿದರು. ಸಂತಮತದಲ್ಲಿ ಎಲ್ಲ ವರ್ಗದ ಜನರಿದ್ದು, ಇವರು ತಮ್ಮ ನಿರ್ಮಲ ಅಂತಃಕರಣದಿಂದ, ಶುದ್ಧ ಆಚರಣೆಯಿಂದ ವಿನಯದಿಂದ ಮಹಾನ್ ಭಕ್ತರೆನಿಸಿಕೊಂಡರು. ಅಹಂಕಾರ ವಿಲಯನವೇ ಸಂತರ ಭಕ್ತಿಯ ಆದರ್ಶವಾಗಿದೆ.

11. ಸಂತರು ಶ್ರೇಷ್ಠ ಅನುಭಾವಿಗಳೂ ಆಗಿದ್ದಾರೆ. ಸಂತರ ಅನುಭಾವ ಮಾರ್ಗದಲ್ಲಿ ಆತ್ಮ ಪ್ರಿಯತಮೆ, ಪರಮಾತ್ಮ ಪ್ರಿಯತಮ. ಆತ್ಮ ಹೆಣ್ಣು, ಪರಮಾತ್ಮ ಗಂಡು. ಆತ್ಮ ಸಸೀಮ, ಪರಮಾತ್ಮ ಅಸೀಮ. ಆ ಅಸೀಮನತ್ತ ಆಕೃಷ್ಟಗೊಂಡು ಆತ್ಮ ಸಾಗುವ ಬಗೆಯೇ ಅನುಭಾವ. ಇದನ್ನೇ ಹಿಂದಿಯಲ್ಲಿ 'ರಹಸ್ಯವಾದ' ಅನ್ನುತ್ತಾರೆ. ಅಜ್ಞಾತಶಕ್ತಿಯತ್ತ ಆತ್ಮದ ಚಲನೆಯೇ ರಹಸ್ಯವಾದ. ಇಲ್ಲಿ ಪ್ರಿಯತಮೆಯದು ಮಾಧುರ್ಯ ಭಕ್ತಿ. ಪತಿವ್ರತೆಯ ನಿಷ್ಠೆ. ಆ ಪರಮಾತ್ಮನೊಡನೆ ವಿಲಯನಗೊಳ್ಳಲು, ಐಕ್ಯಗೊಳ್ಳಲು ಸಾಗುವ ಪಥವೇ ಅನುಭಾವಪಥ. ಸಂತರ ರಹಸ್ಯವಾದ ಒಂದು ಆಧ್ಯಾತ್ಮಿಕ ಅನುಭವ. ಅನಿರ್ವಚನೀಯವಾದ ಅನುಭೂತಿ. ಸಾಧನಾ ಮಾರ್ಗದಲ್ಲಿ ಆತ್ಮರೂಪಿ ಸತಿ ವಿರಹಿ. ಈ ವಿರಹಿಯ ವಿರಹ ಅದರ ಪಾಲಿಗೆ ಶಾಪವಲ್ಲ, ವರದಾನ. ಈ ವಿರಹ ಸಾಧಕನಿಗೆ ಒಡ್ಡಿರುವ ಒಂದು ಪರೀಕ್ಷೆ. ಈ ಪರೀಕ್ಷೆಯಲ್ಲಿ ಸತಿ ನಿರಾಶಳಾಗದೆ, ವಿಚಲಿತಳಾಗದೆ ಗತಿಶೀಲಳಾಗಿ ಸಾಧನೆಯ ಪರಾಕಾಷ್ಠೆಯನ್ನು ಮುಟ್ಟಿದಾಗ ಪ್ರಾಪ್ತವಾಗುವ ಮಿಲನದ ಆನಂದದಲ್ಲಿ ಆತ್ಮ ಸುಖಿ, ಇದೇ ಐಕ್ಯಸ್ಥಿತಿ. ಸಾಧನೆಯ ಆರಂಭದಲ್ಲಿದ್ದ ದ್ವೈತ ಐಕ್ಯದಲ್ಲಿ ಅದ್ವೈತವಾಗಿ ಪರಿವರ್ತಿತವಾಗುತ್ತದೆ. ಆತ್ಮ ತನ್ನನ್ನು ತಾನು ಇಲ್ಲವಾಗಿಸಿಕೊಂಡು ಅನಂತದಲ್ಲಿ ಅನಂತವಾಗುವ ಅನುಭೂತಿ ಅಥವಾ ಅನುಭಾವ ವರ್ಣನಾತೀತ ಅನಿರ್ವಚನೀಯ. ಬೆಲ್ಲ ತಿಂದ ಮೂಗ ಅದರ ಸಿಹಿಯನ್ನು ಹೇಗೆ ವರ್ಣಿಸಲಾರನೋ ಹಾಗೆ, ಈ ಅನುಭಾವ, ರಹಸ್ಯಾನುಭೂತಿ ಎಂದು ಸಂತರು ಅಭಿಪ್ರಾಯಪಡುತ್ತಾರೆ. ಮುಂದುವರೆದು ಇದು ಅನುಭವಗಮ್ಯವೇ ಹೊರತು ಪರಕಾಯಗಮ್ಯವಲ್ಲವೆಂದು ಹೇಳುತ್ತಾರೆ. ಆತ್ಮಗಳು ಪರಮಾತ್ಮನ ಸ್ಫುಲಿಂಗಗಳು. ಈ ಸ್ಫುಲಿಂಗಗಳು ಎಷ್ಟಾದರೂ

ಇರಬಹುದು. ಆದರೆ ಪುರುಷ ಅಥವಾ ಪರಮಾತ್ಮ ಒಬ್ಬನೇ ಎಂದು ಹೇಳುವ ಸಂತರು ಪ್ರತಿಯೊಬ್ಬ ಸಾಧಕನು ತನ್ನ ಸಾಧನೆಯ ಮೂಲಕ ಆಧ್ಯಾತ್ಮಾನುಭವದ ದಿವ್ಯಾನುಭೂತಿಯನ್ನು ಅನುಭವಿಸಬಹುದು ಎಂದು ಅಭಿಪ್ರಾಯಪಡುತ್ತಾರೆ.

12. ಸಂತ ಸಾಹಿತ್ಯ ಸಮಾಜನಿಷ್ಠವಾದ ಸಾಹಿತ್ಯ. ಅಧ್ಯಾತ್ಮ ಸಾಧನೆ ಹಾಗೂ ಸಮಾಜಪರವಾದ ಕಾಳಜಿ ಸಂತರ ಬದುಕಿನ ಎರಡು ಧ್ರುವಗಳಾಗಿದ್ದು, ಇವು ಒಂದಕ್ಕೊಂದು ಪೂರಕವಾದ ಅಂಶಗಳಾಗಿವೆ. ಅಧ್ಯಾತ್ಮಸಾಧನೆಯಿಂದ ವ್ಯಕ್ತಿ ಜೀವನ್ಮುಕ್ತನಾಗಬಹುದಾದರೆ ಸಮಾಜಪರವಾದ ಚಿಂತನೆಗಳಿಂದ ತಮ್ಮ ಸುತ್ತಲ ಬದುಕನ್ನು ಎತ್ತರಕ್ಕೊಯ್ಯಲು ಸಾಧ್ಯ ಎಂದು ಸಂತರು ಭಾವಿಸಿದರು. ತಾವು ಬದುಕಿದ ಸಮಾಜದಲ್ಲಿನ ಜಡ್ಡುಗಟ್ಟಿದ ಮೌಲ್ಯಗಳನ್ನು ವೈಚಾರಿಕ ನಿಕಷಕ್ಕೆ ಒಳಗು ಮಾಡಿದರು. ದೇವರ ಅಸ್ತಿತ್ವದಿಂದ ಹಿಡಿದು ಬದುಕಿನ ಒಳಹೊರಗಿನ ಅರ್ಥಹೀನ ಮೌಲ್ಯಗಳನ್ನು ಪ್ರಶ್ನಿಸಿದರು. ದೇವರ ಸಗುಣ ರೂಪವನ್ನು ನಿರಾಕರಿಸಿ, ಅವನು ಆಕಾರಹೀನ, ರೂಪಹೀನ ಎಂದು ಹೇಳಿ ಅವನು ಗುಡಿ, ಮಸೀದಿಗಳಲ್ಲಿಲ್ಲ, ಜನರ ಹೃದಯಗಳಲ್ಲಿದ್ದಾನೆ ಎಂದರು. ಅವನನ್ನು ರಾಮ–ಕೃಷ್ಣರ ಅವತಾರದ ಚೌಕಟ್ಟಿನಲ್ಲಿ ನೋಡದೆ ನಾಮಾತೀತ ತತ್ವ, ಸರ್ವಾಂತರ್ಯಾಮಿ ಅಂದರು. ಅಧ್ಯಾತ್ಮ ಸಾಧನೆಯ ಮೂಲಕ ಆತ್ಮಿಕ ವಿಕಾಸವನ್ನು ಸಮರ್ಥಿಸಿದರು. ಸಂತರು ಸೇವೆಯಲ್ಲಿ ಪರಮಾತ್ಮನನ್ನು ಕಾಣಬೇಕೆಂದು ಬೋಧಿಸಿದರು. ದೇವರನ್ನು ಸತ್ಯವೆಂದು ಕರೆಯದೆ ಸತ್ಯವನ್ನು ದೇವರೆಂದು ಕರೆದರು. ಸತ್ಯವನ್ನು ತಪಸ್ಸು, ದೇವಪೂಜೆ ಎಂದು ಮಾನ್ಯ ಮಾಡಿದರು. ದೇವರು ಚರ್ಚೆಯ ವಸ್ತು. ಆದರೆ ಸತ್ಯ ಚರ್ಚಾತೀತ. ಅದು ಚರ್ಚಾತೀತವಾದ್ದರಿಂದ ದೇವರು ಎಂಬುದಾಗಿ ಸಂತರ ಅಭಿಮತವಾಗಿದೆ. ತೀರ್ಥಯಾತ್ರೆ, ತಲೆ ಬೋಳಿಸುವಿಕೆ, ಮೂರ್ತಿಪೂಜೆ, ಬಹುದೇವೋಪಾಸನೆ, ನಮಾಜು ಮಾಡುವಿಕೆ ಮುಂತಾದ ಬಾಹ್ಯ ಆಚರಣೆಗಳನ್ನು ನಿರ್ಭಿಡೆಯಿಂದ ಖಂಡಿಸಿದರು. ಮಾತು ಮತ್ತು ಕ್ರಿಯೆಯ ನಡುವೆ ಹೊಂದಾಣಿಕೆ, ಪವಿತ್ರವಾದ ಆಚಾರ–ವಿಚಾರ, ಅಹಿಂಸೆ, ಕಾಯಕನಿಷ್ಠೆ, ಅಸಂಗ್ರಹ, ಅಹಂನ ವಿಲಯನ, ಆತ್ಮಾವಲೋಕನ, ಸುಖದುಃಖಗಳ ಸಮಭಾವದ ಸ್ವೀಕರಣೆ, ಗೃಹಸ್ಥ ಬದುಕಿನಲ್ಲೇ ಆತ್ಮಸಾಕ್ಷಾತ್ಕಾರದ ಸಮರ್ಥನೆ, ಜೀವದಯೆ, ಅಂತಃಕರಣಪೂರ್ಣವಾದ ವ್ಯವಹಾರ, ಇವು ಸಂತರು ಸುಂದರ ಸಮಾಜದ ನಿರ್ಮಾಣಕ್ಕಾಗಿ ಕಲ್ಪಿಸಿದ ಆದರ್ಶ ತತ್ವಗಳು.

ಈ ಮಾತುಗಳನ್ನು ಸಂತರು ಹಿಂದೂ–ಮುಸ್ಲಿಮರೆಂಬ ಭೇದಮಾಡದೆ ಎಲ್ಲರಿಗೂ ಹೇಳಿದರು. ದೋಷ ಕಂಡ ಕಡೆ ಬೊಟ್ಟುಮಾಡಿ ತೋರಿಸಿದರು. ಸಂತರು ಜಾತಿರಹಿತ ಸಮಾಜವನ್ನು ಪರಿಕಲ್ಪಿಸಿದರು. ಹುಟ್ಟಿಗೂ, ಜಾತಿಗೂ ಯಾವುದೇ ಸಂಬಂಧವಿಲ್ಲವೆಂದು ಬಲವಾಗಿ ಪ್ರತಿಪಾದಿಸಿದರಲ್ಲದೆ, ಆಚಾರಗಳಿಂದ,

ವಿಚಾರಗಳಿಂದ ಯಾರು ಬೇಕಾದರೂ ಉತ್ತಮರಾಗಬಲ್ಲರು ಎಂದು ಹೇಳಿದರು. ಹಿಂದೂ ಸಮಾಜದ ಅಭಿಶಾಪವಾದ ವರ್ಣಾಶ್ರಮ ಧರ್ಮವನ್ನು, ಅದರಲ್ಲೂ ವಿಶೇಷವಾಗಿ ಅಸ್ಪೃಶ್ಯತೆಯನ್ನು ನಿರಾಕರಿಸಿ, ಮಾನವತಾವಾದವನ್ನು ಪ್ರತಿಪಾದಿಸಿದ ಸಂತರು ಪ್ರೀತಿ ಮತ್ತು ಅಂತಃಕರಣವನ್ನು ತಮ್ಮ ಬದುಕಿನ ದ್ರವ್ಯವಾಗಿಸಿಕೊಂಡರು.

11. ಕಾವ್ಯ ಬರೆಯುವುದು ಸಂತರ ಉದ್ದೇಶವಾಗಿರಲಿಲ್ಲ. ಅವರ ಬದುಕೇ ಕಾವ್ಯವಾಗಿತ್ತು. ವೈಯಕ್ತಿಕ ಸಾಧನೆ ಮತ್ತು ಸಮಾಜ ಸುಧಾರಣೆಯ ಹಾದಿಯಲ್ಲಿ ಅವರ ಅನುಭೂತಿಗಳು, ಅನುಭವಗಳು ಮಾತಿನ ಮೂಲಕ ಅಭಿವ್ಯಕ್ತಗೊಂಡಾಗ ಅವು ಕಾವ್ಯವಾದುವು. ಇವರ ಕಾವ್ಯ ಪಂಡಿತರ ಕಾವ್ಯಗಳಲ್ಲ. ಆದರೆ, ಪಂಡಿತರನ್ನೂ ಬೆರಗುಗೊಳಿಸುವಂತಹ ಕಾವ್ಯ.

ಸಂತರ ಅನುಭವದ ಮೂಸೆಯಲ್ಲಿ ಮೂಡಿ ಬಂದಿರುವ ಮುತ್ತುಗಳೇ ಸಂತವಾಣಿ. ಸಂತರು ತಾವು ಕಂಡುಕೊಂಡ 'ಸತ್ಯ'ಗಳನ್ನು, ಅನುಭವಗಳನ್ನು 'ಅನುಭಾವ'ವನ್ನು ಹೇಳಿರುವ ಬಗೆ, ಉಪಯೋಗಿಸಿರುವ ಮಾತಿನ ಭಂಗಿಮೆಗಳು, ದೃಷ್ಟಾಂತಗಳು, ರೂಪಕಗಳು, ಉಪಮೆಗಳು ಅವರ ಮಾತುಗಳಿಗೆ ಮೆರುಗನ್ನು ತಂದಿವೆ, ಉತ್ತಮ ಕಾವ್ಯವಾಗಿಸಿವೆ, ಕಲಾತ್ಮಕವಾದ ಸೃಷ್ಟಿಗಳಾಗಿಸಿವೆ.

ಸಂತರದು ಜಂಗಮ ಸಾಹಿತ್ಯ. ಕೂತು ಬರೆದ ಸಾಹಿತ್ಯವಲ್ಲ. ಜಂಗಮರಾಗಿ ಲೋಕಸಂಚಾರ ಮಾಡುತ್ತಾ, ಅನುಭವಗಳನ್ನು ಹೇಳುತ್ತಾ ಹೋದರು. ಹೀಗಾಗಿ ಸಂತರು ಬರೆದದ್ದೆಲ್ಲ ಮುಕ್ತಕ ಸಾಹಿತ್ಯ, ಸಂತರು ಅನನ್ಯ ಪ್ರತಿಭಾವಂತರಾಗಿದ್ದಾಗ್ಯೂ ಮಹಾಕಾವ್ಯಗಳನ್ನು ಬರೆಯಲಿಲ್ಲ. ಕಾವ್ಯಸೃಷ್ಟಿ ಇವರ ಧರ್ಮವಾಗಿರಲಿಲ್ಲ. ಇನ್ನು ಇವರು ತಮ್ಮ ಅಭಿವ್ಯಕ್ತಿಗಾಗಿ ಬಳಸಿದ ಭಾಷೆ–ಆಡುಭಾಷೆ, ಜನಸಾಮಾನ್ಯರ ಭಾಷೆ. ಇದನ್ನು 'ಸಧುಕ್ಕಡಿ', ಅಂದರೆ ಸಾಧುಗಳ ಭಾಷೆ ಎಂದೂ ಕರೆಯುತ್ತಾರೆ. ತಾವು ಸಂಚರಿಸಿದ ಪ್ರದೇಶಗಳ ಶಬ್ದಾವಳಿಗಳನ್ನು ಮುಕ್ತವಾಗಿ ಸ್ವೀಕರಿಸಿದ ಸಂತರು ಜನಭಾಷೆಯನ್ನು 'ಅನುಭಾವ'ದ ಭಾಷೆಯಾಗಿ, ಸಮಾಜದ ಡೊಂಕುಗಳನ್ನು ತಿದ್ದುವ ಅಸ್ತ್ರವಾಗಿ ಉಪಯೋಗಿಸಿದರು.

ಶಿವಶರಣರ ಬೆಡಗಿನ ವಚನಗಳಂತೆ ಸಂತರೂ ಬೆಡಗಿನ ವಚನಗಳನ್ನು ಬರೆದರು. ಇವೇ 'ಉಲಟ್‌ಬಾಂಸಿ'ಗಳು. ಒಗಟಿನ ಮಾದರಿಯ ಈ ಪದಗಳಲ್ಲಿ ಗೂಢಾರ್ಥಗಳು ಗರ್ಭಸ್ಥವಾಗಿರುತ್ತವೆ. ವಿರೋಧಾಭಾಸಯುಕ್ತವಾದ ಹೇಳಿಕೆಗಳ ಮೂಲಕ ಸಾಧಕ ತನ್ನ ಜ್ಞಾನ ಮತ್ತು ಯೋಗಸಾಧನೆಯ ಎತ್ತರ ಬಿತ್ತರಗಳನ್ನು ವರ್ಣಿಸುತ್ತಾನೆ. ಇಲ್ಲಿ ಒಂದೊಂದು ಶಬ್ದವೂ ಗೂಢಾರ್ಥಗಳ ಭಂಡಾರ. ಈ ಅರ್ಥಗಳನ್ನು ಭೇದಿಸಿ ಒಳಹೊಕ್ಕರೆ ಅವು ಸ್ಫುರಿಸುವ ಅರ್ಥಗಳು ತತ್ವಶೋಧಕನ

ಸಾಧನೆಯ ಎತ್ತರವನ್ನೂ ಕಾಣೆಯ ವಿಸ್ತಾರವನ್ನೂ ನಿಚ್ಚಳಗೊಳಿಸುತ್ತವೆ. ಹೀಗಾಗಿ ಈ 'ಉಲಟ್‌ಬಾಂಸಿ'ಗಳು ಸಂತರ ವಿಶೇಷ ಕೊಡುಗೆಗಳಾಗಿವೆ.

* * *

ಇದುವರೆಗೆ ಸಂತ ಸಾಹಿತ್ಯದ ವಿಭಿನ್ನ ಆಯಾಮಗಳ ತಾತ್ವಿಕ ಚಿಂತನೆಯನ್ನು ಪ್ರಸ್ತುತಪಡಿಸಿದೆ. ಸಂತರು ತಮ್ಮ ಬದುಕನ್ನು ವ್ಯಕ್ತಿ ಮತ್ತು ಸಮಾಜದ ಕಲ್ಯಾಣಕ್ಕಾಗಿ ಅರ್ಪಿಸಿಕೊಂಡ ಸಾಧಕರು. ಸಮಾಜದಲ್ಲಿ ಬೇರೂರಿರುವ ವರ್ಣಗಳು, ಜಾತಿಗಳು ಮತ್ತು ಸಾಂಪ್ರದಾಯಿಕ ಆಚಾರ–ವಿಚಾರಗಳನ್ನು ಸಂಪೂರ್ಣವಾಗಿ ಇಲ್ಲವಾಗಿಸಲು ಅಹರ್ನಿಶಿ ಕ್ರಿಯಾಶೀಲರಾಗಿದ್ದ ಮಹಿಮರು. ಸಂತರ ವೈಚಾರಿಕ ಚಿಂತನೆ ಮಾನವೀಯ ಭಾವನೆಗಳಿಂದ ಸಂಪುಷ್ಟಗೊಂಡಿರುವುದರಿಂದಾಗಿ ಅವು ಅಂದಿನ ದಿನಗಳಿಗೆ ಯುಕ್ತವಾಗಿದ್ದಂತೆ ಇಂದಿನ ದಿನಗಳಿಗೂ ಉಪಯುಕ್ತವಾಗಿವೆ, ಪ್ರಾಸಂಗಿಕವಾಗಿವೆ. ಕಬೀರ ಮತ್ತು ರವಿದಾಸರಂಥ ಸಂತರು ತಮ್ಮ ಅನನ್ಯ ಚಿಂತನೆಗಳಿಂದ ಸಮಾಜ ಸಾಗಬೇಕಾದ ರೀತಿಯನ್ನು ತೋರಿದ್ದಾರೆ. ಸಂತರು ಈ ಜಗತ್ತಿಗೆ ವೈಚಾರಿಕ ಚಿಂತನೆಯನ್ನು ನೀಡದೆಹೋಗಿದ್ದಿದ್ದರೆ ಪ್ರಪಂಚ ಸುಟ್ಟು ಭಸ್ಮವಾಗುತ್ತಿತ್ತು ಎಂದು ಕಬೀರ್ ಹೇಳಿರುವ ಈ ವಚನದಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲ–

'ಆಗ್ ಲಗೀ ಆಕಾಶ್ ಮೇ ಝುರ್ ಝುರ್ ಪರೇ ಅಂಗಾರ್
ಸಂತ್‌ನ ಹೋತೆ ಜಗತ್ ಮೇ ಜಲ್ ಜಾತಾ ಸಂಸಾರ್'

ಸಂತ ರವಿದಾಸರು ತಮ್ಮ ಒಂದು ಗೀತೆಯಲ್ಲಿ ಹುಟ್ಟಿನಿಂದ ಯಾರೂ ನಿಮ್ನರಲ್ಲ, ಆದರೆ ಮನುಷ್ಯನು ಮಾಡುವ ಕೆಟ್ಟ ಕೆಲಸಗಳು ಅವನನ್ನು ನಿಮ್ನರನ್ನಾಗಿಸುತ್ತವೆ ಎಂದಿದ್ದಾರೆ–

ರವಿದಾಸ್ ಜನ್ಮಕೇ ಕಾರನ್ಯೆ ಹೋತ್‌ನ ಕೋಈ ನೀಚ್
ನರ್ ಕೂಂ ನೀಚ್ ಕರಿ ಜಾರಿ ಹೈ, ಓಛೇ ಕರಮೆ ಕೌ ಕೀಚ್.

□

**ಕೃತಿ ವಿಮರ್ಶೆ**

# ಬಾಹ್ಯಾಕಾಶ ತಂತ್ರಜ್ಞಾನ ಮತ್ತು ಸಾಮಾಜಿಕ ಅನ್ವಯ

## ಲೇ. ಡಾ. ಎ.ಎಸ್. ಕಿರಣ್‌ಕುಮಾರ್

**ಆರ್.ಎಸ್. ಪೂರ್ಣಾನಂದ**

ಇದು ಇಸ್ರೋ ಸಂಸ್ಥೆಯ ನಿರ್ದೇಶಕರಾಗಿದ್ದ ಡಾ. ಎ.ಎಸ್. ಕಿರಣ್‌ಕುಮಾರ್ ಅವರು ಜೆಎಸ್‌ಎಸ್ ಮಹಾವಿದ್ಯಾಪೀಠ ಸುವರ್ಣ ಮಹೋತ್ಸವ ದತ್ತಿ ಉಪನ್ಯಾಸ ಮಾಲೆ ಯಲ್ಲಿ ನೀಡಿದ ಭಾಷಣದ ಪುಸ್ತಕರೂಪ.

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ ಶೈಕ್ಷಣಿಕ ಮತ್ತು ಸಾಮಾಜಿಕ ಸಂಸ್ಥೆಗಳ ಆಡಳಿತಾತ್ಮಕ ಉಸ್ತುವಾರಿಗಾಗಿ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಮೈಸೂರಿನಲ್ಲಿ 1954 ರಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠವನ್ನು ಸಂಸ್ಥಾಪಿಸಿದರು. 2004 ರಲ್ಲಿ ನಡೆದ ಇದರ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಒಂದು ಹೊಸ ಉಪನ್ಯಾಸಮಾಲೆಯನ್ನು ಪ್ರಾರಂಭಿಸ ಲಾಯಿತು. ಅದರಡಿಯಲ್ಲಿ ರಾಷ್ಟ್ರದ ಅತ್ಯುತ್ತಮ ವಿದ್ವಾಂಸರುಗಳಿಂದ ಪ್ರಸಕ್ತ ಸಾಮಾಜಿಕ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಉಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ಇದುವರೆಗೆ ಡಾ. ನಂದನ್ ನಿಲೇಕಣಿ, ಡಾ. ಸ್ಯಾಮ್ ಪಿತ್ರೋಡ, ಡಾ. ಸಿ.ಎನ್.ಆರ್. ರಾವ್, ಸದ್ಗುರು ಜಗ್ಗಿ ವಾಸುದೇವ್, ಡಾ. ಎ.ಪಿ.ಜೆ. ಅಬ್ದುಲ್ ಕಲಾಂ, ಶ್ರೀಮತಿ ಸುಧಾ ಮೂರ್ತಿ, ಡಾ. ಎ.ಎಸ್. ಕಿರಣ್‌ಕುಮಾರ್ ಮತ್ತು ಡಾ. ಎಸ್. ಗುರುಮೂರ್ತಿಗಳಂಥ ಖ್ಯಾತನಾಮರು ಭಾಷಣ ಮಾಡಿದ್ದಾರೆ. ಭಾಷಣಗಳ ಕೊನೆಯಲ್ಲಿ ಶ್ರೋತೃಗಳು ಕೇಳುವ ಪ್ರಶ್ನೆಗಳಿಗೆ ಭಾಷಣಕಾರರು ಉತ್ತರ ನೀಡುತ್ತಾರೆ. ಈ ಎಲ್ಲ ವಿವರಗಳೂ ಪುಸ್ತಕರೂಪದಲ್ಲಿ ಪ್ರಕಟವಾಗುತ್ತದೆ.

ಡಾ. ಕಿರಣ್‌ಕುಮಾರ್ ಅವರು ಬಾಹ್ಯಾಕಾಶ ವಿಜ್ಞಾನಕ್ಷೇತ್ರದಲ್ಲಿ ಒಂದು ಅವಿಸ್ಮರಣೀಯ ಹೆಸರು. ಅವರ ಅವಧಿಯಲ್ಲಿ ಇಸ್ರೋ ಅಭೂತಪೂರ್ವ ಯಶಸ್ಸು

**ಶ್ರೀ ಆರ್.ಎಸ್. ಪೂರ್ಣಾನಂದ,** ನಂ. 803, 'ಶಂಕರಿ', 26ನೇ ಕ್ರಾಸ್, 4ನೇ ಮುಖ್ಯ ರಸ್ತೆ, ವಿದ್ಯಾರಣ್ಯಪುರಂ, ಮೈಸೂರು

ಸಾಧಿಸಿತು. ಕ್ರಯೋಜೆನಿಕ್ ತಂತ್ರಜ್ಞಾನದ ಮೂಲಕ ಭಾರತದ ತಂತ್ರಜ್ಞಾನಸಾಮರ್ಥ್ಯ ದೇಶವಿದೇಶಗಳ ಪ್ರಶಂಸೆಗೆ ಒಳಗಾಯಿತು, ಹಲವಾರು ದೇಶಗಳ ರಾಕೆಟ್‌ಗಳನ್ನು ಉಡಾಯಿಸುವ ನಿಟ್ಟಿನಲ್ಲಿ ವಿಶ್ವಾಸಾರ್ಹ ಸಂಸ್ಥೆಯೆನಿಸಿತು. ಇಸ್ರೋ ಎಂದರೆ ರಾಕೆಟ್ ಉಡಾವಣೆಯಷ್ಟೇ ಅಲ್ಲ, ಜನಸಾಮಾನ್ಯರ ದೈನಂದಿನ ಜೀವನದಲ್ಲಿ ಧನಾತ್ಮಕ ಬದಲಾವಣೆಗಳನ್ನು ಸದ್ದಿಲ್ಲದೆ ತಂದಿರುವುದು ಅದರ ಸಾಧನೆ ಎಂಬುದನ್ನು ಈ ಪುಸ್ತಕ ಮನೋಜ್ಞನಾಗಿ ವಿವರಿಸುತ್ತದೆ. ಕಳೆದ ಐದು ದಶಕಗಳಲ್ಲಿ ಇಸ್ರೋ ಸಾಮಾಜಿಕ ಬದ್ಧತೆ ಯಿಂದ ಸಾಮುದಾಯಿಕ ಅಭಿವೃದ್ಧಿಯಲ್ಲಿ ಪಾಲ್ಗೊಂಡ ರೋಚಕ ಕಥನ ಆಧುನಿಕ ಭಾರತದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯಬೇಕಾದುದು. ಪುಸ್ತಕದ ಪ್ರಾರಂಭದಲ್ಲಿ ಲೇಖಕರು ಆಧುನಿಕ ಭಾರತದ ಬಾಹ್ಯಾಕಾಶ ವಿಜ್ಞಾನದ ಪಿತಾಮಹ ಡಾ. ವಿಕ್ರಂ ಸಾರಾಭಾಯಿಯವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸುತ್ತಾರೆ.

ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನಗಳ ನೆರವಿಲ್ಲದ ನಮ್ಮ ದೈನಂದಿನ ಜೀವನವನ್ನು ಕಲ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ಇಂದು ನಾವು ಹಲವಾರು ವೈಜ್ಞಾನಿಕ ಉಪಕರಣಗಳನ್ನು ಮತ್ತು ಗ್ಯಾಜೆಟ್‌ಗಳನ್ನು, ಅವುಗಳ ಆವಿಷ್ಕಾರದ ಹಿಂದಿರುವ ಸಾಹಸಿ ಗಳನ್ನು ಕಾಣದೆಯೂ ಬಳಸುತ್ತಿರುತ್ತೇವೆ. ಆರೋಗ್ಯಸೇವೆ, ಆಹಾರ, ಕೃಷಿ, ಮಾಹಿತಿ, ಅಂತರ್ಜಾಲ, ಸಂವಹನಗಳಿಂದ ಹಿಡಿದು ಹವಾಮಾನ ಮುನ್ಸೂಚನೆ, ಬ್ಯಾಂಕಿಂಗ್ ಮತ್ತು ವಾಣಿಜ್ಯ ನಿರ್ವಹಣೆ, ಖನಿಜಸಂಪತ್ತು ಮತ್ತು ಅಂತರ್ಜಲದವರೆಗೆ ಎಲ್ಲ ಕ್ಷೇತ್ರಗಳಲ್ಲೂ ಇಸ್ರೋ ನೆರವು ನೀಡುತ್ತಿದೆ ಎಂಬುದನ್ನು ಸೋದಾಹರಣವಾಗಿ ವಿವರಿಸಿದ್ದಾರೆ.

ಇಸ್ರೋ ಸಂಸ್ಥೆಯು ಪ್ರಾರಂಭಿಕ ದಿನಗಳಲ್ಲಿಯೇ ಜಿಯೋಸ್ಟೇಷನರಿ ಸ್ಯಾಟಲೈಟನ್ನು ಹಾರಿಸಿದ ಘಟನೆಯು ಇಂದು ದೇಶಾದ್ಯಂತ ಬಳಕೆಯಲ್ಲಿರುವ ಟೆಲಿವಿಜನ್ ಪ್ರಸಾರಕ್ಕೆ ಕಾರಣವಾಗಿದೆ. ಇನ್‌ಸ್ಯಾಟ್ ಸ್ಯಾಟಲೈಟ್‌ಗಳ ಮೂಲಕ ಸಂವಹನ ಕ್ಷೇತ್ರದಲ್ಲಿ ಕ್ರಾಂತಿಯನ್ನೇ ಉಂಟುಮಾಡಿದೆ. 1996 ರಲ್ಲಿ ಕೇವಲ ಎರಡು ಟವರ್‌ಗಳಿಂದ ಪ್ರಾರಂಭವಾದ ವಿ-ಸ್ಯಾಟ್ ಕಾರ್ಯಕ್ರಮ ಇಂದು ದೇಶಾದ್ಯಂತ ಸುಮಾರು 2.5 ಲಕ್ಷ ಟವರ್‌ಗಳ ಮೂಲಕ ಎಟಿಎಂ ಬ್ಯಾಂಕಿಂಗ್, ಷೇರುಪೇಟೆ ಮುಂತಾದ ವ್ಯವಹಾರಗಳು ಸುಸೂತ್ರವಾಗಿ ನಡೆಯಲು ನೆರವಾಗುತ್ತಿವೆ.

ಟೆಲಿಮೆಡಿಸಿನ್, ಟೆಲಿ-ಎಜುಕೇಷನ್ ಮತ್ತು ಜಿಪಿಎಸ್ ಇವು ಇಂದು ವ್ಯಾಪಕವಾಗಿ ಕೇಳಿಬರುತ್ತಿರುವ ಸೇವಾಕ್ಷೇತ್ರಗಳು. ಹಾಗೆಯೇ ಹವಾಮಾನ ಮುನ್ಸೂಚನೆಗಳು, ಬಿರುಗಾಳಿ, ಚಂಡಮಾರುತ, ಮಳೆ ಪ್ರಮಾಣ ಇವುಗಳ ಬಗ್ಗೆ ನಿಖರವಾದ ಮಾಹಿತಿ ಲಭಿಸುತ್ತಿವೆ. ಕೃಷಿಕರಿಗೆ ಸಹಾಯವಾಗುವಂತೆ ಆರ್ದ್ರತೆಯ ಮಟ್ಟ, ಕೃಷಿಗೆ ಬೇಕಾದ ನೀರಿನ ಪ್ರಮಾಣ, ಕೃಷಿ ಹೆಚ್ಚಳಕ್ಕೆ ಆಧುನಿಕ ಸಲಹೆಗಳು

ಇವೆಲ್ಲವೂ ಇಂದು ಇಸ್ರೋ ಕಾರ್ಯಕ್ರಮಗಳಿಂದ ಸುಲಭಲಭ್ಯವಾಗಿವೆ. ಹಾಗೆಯೇ ಮೀನುಗಾರಿಕೆ, ಅರಣ್ಯೀಕರಣಕ್ಕೆ ಸಂಬಂಧಿಸಿದ ಯೋಜನೆಗಳಿಗೂ ಉಪಯುಕ್ತ ಮಾಹಿತಿ ದೊರೆಯುತ್ತಿದೆ. ಮಾಹಿತಿ ತಂತ್ರಜ್ಞಾನ, ಮಂಜುಕುಸಿತ, ಹಿಮಾಲಯ ಪರ್ವತಗಳ ಸರ್ವೇಕ್ಷಣೆ, ಗಣಿಗಾರಿಕೆಯ ವ್ಯಾಪ್ತಿ ಮತ್ತು ನಿರ್ವಹಣೆ, ಪ್ರಾಗೈತಿಹಾಸಿಕ ಸ್ಮಾರಕಗಳ ಸಂರಕ್ಷಣೆ ಇವೆಲ್ಲಕ್ಕೂ ಬೇಕಾಗುವ ಪೂರಕ ಮಾಹಿತಿಯನ್ನು ಇಸ್ರೋ ಅತ್ಯಂತ ಜವಾಬ್ದಾರಿಯಿಂದ ನಿರ್ವಹಿಸುತ್ತಿದೆ. ಚಂದ್ರಯಾನ-1 ಮತ್ತು ಮಂಗಳಯಾನವೂ ಸೇರಿದಂತೆ ಇದುವರೆಗೆ 22 ದೇಶಗಳ 57 ಸ್ಯಾಟಲೈಟ್‌ಗಳನ್ನು ಗಗನಕ್ಕೆ ಹಾರಿಸಿದ ಹಿರಿಮೆ ಭಾರತದ್ದು.

ಮೂಲತಃ ವಿಜ್ಞಾನಕ್ಕೆ ಸಂಬಂಧಿಸಿದ ಈ ವಿವರಗಳನ್ನು ಡಾ. ಕಿರಣ್ ಕುಮಾರ್ ಅವರು ಜನಸಾಮಾನ್ಯರಿಗೂ ಅರ್ಥವಾಗುವಂತೆ ಸುಲಭ ಕನ್ನಡದಲ್ಲಿ ಬರೆದಿರುವುದು ಉಲ್ಲೇಖನಾರ್ಹ. ಕನ್ನಡದಲ್ಲಿ ವಿಜ್ಞಾನದ ಎಂಥ ಕ್ಲಿಷ್ಟವಾದ ವಿಷಯವನ್ನೂ ತಿಳಿಸುವುದು ಸುಲಭವೆಂಬುದು ಈ ಕೃತಿಯನ್ನು ಓದಿದರೆ ತಿಳಿಯುತ್ತದೆ. ಪುಸ್ತಕದಲ್ಲಿ ಬಳಸಿರುವ ಚಿತ್ರಗಳು ವಿಷಯಕ್ಕೆ ಪೂರಕವೂ, ಉಪಯುಕ್ತವೂ ಆಗಿವೆ.

□

ಕುರೂಪಿ ಸುರೂಪಿಯ ನೆನೆದಡೆ ಸುರೂಪಿಯಪ್ಪನೆ ?
ಆ ಸುರೂಪಿ ಕುರೂಪಿಯ ನೆನೆದಡೆ ಕುರೂಪಿಯಪ್ಪನೆ ?
ಧನವುಳ್ಳವರ ನೆನೆದಡೆ ದಾರಿದ್ರ್ಯ ಹೋಹುದೆ ?
ಪುರಾತನರ ನೆನೆದು ಕೃತಾರ್ಥರಾದೆವೆಂಬರು !
ತಮ್ಮಲ್ಲಿ ಭಕ್ತಿ ನಿಷ್ಠೆಯಿಲ್ಲದವರ ಕಂಡಡೆ
ಮೆಚ್ಚನು ಗುಹೇಶ್ವರನು.

**ಅಲ್ಲಮಪ್ರಭು**

# ವಾರ್ತಾವಿಹಾರ

## ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1059ನೆಯ ಜಯಂತಿ ಮಹೋತ್ಸವ

ಶಿವಮೊಗ್ಗ ನಗರದಲ್ಲಿ ದಿನಾಂಕ 4.1.2019 ರಿಂದ 10.1.2019 ರವರೆಗೆ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1059ನೆಯ ಜಯಂತಿ ಮಹೋತ್ಸವವು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ನೆರವೇರಿತು.

**ಉದ್ಘಾಟನಾ ಸಮಾರಂಭ**

4.1.2019 ರಂದು ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಪದ್ಮವಿಭೂಷಣ ಡಾ. ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು ಉದ್ಘಾಟಿಸಿ, ಪ್ರತಿಯೊಬ್ಬ ವ್ಯಕ್ತಿಗೆ ತಾನು ಹುಟ್ಟಿದ ಧರ್ಮದ ಬಗ್ಗೆ ಅಭಿಮಾನ ಮತ್ತು ಸ್ವಾಭಿಮಾನವಿರಬೇಕು; ಆದರೆ ದುರಭಿಮಾನ ಬೆಳೆಸಿಕೊಳ್ಳಬಾರದು. ಮನಸ್ಸಿನ ಅಂತರಂಗದಲ್ಲಿ ಪ್ರೀತಿಯಿದ್ದಾಗ ಮಾತ್ರ ಧರ್ಮದ ಅರಿವು ಮೂಡಬಲ್ಲದು ಎಂದು ತಿಳಿಸಿದರು.

ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ದಯವೇ ಧರ್ಮದ ಮೂಲವೆಂದು ಪ್ರತಿಪಾದಿಸಿದ ಶರಣರು ಅಹಿಂಸೆಯನ್ನೇ ಬದುಕಿನುದ್ದಕ್ಕೂ ಪಾಲಿಸಿಕೊಂಡು ಬಂದರು. ಅಂತಹ ಮಹಾಪುರುಷರನ್ನು ಒಂದು ಧರ್ಮ ಅಥವಾ ಜಾತಿಗೆ ಮೀಸಲುಗೊಳಿಸುವುದು ಸರಿಯಲ್ಲ. ಆಧುನಿಕ ಜೀವನದ ಭರಾಟೆಯಲ್ಲಿ ಭ್ರಾಂತಿಯ ಮಧ್ಯೆ ಬದುಕುತ್ತಿರುವ ನಾವು ಜೀವನದ ವಾಸ್ತವವನ್ನು ಮರೆಯುತ್ತಿದ್ದೇವೆ. ಇಂತಹ ಗೊಂದಲಗಳಿಂದ ಹೊರಬರಲು ಧಾರ್ಮಿಕ ಕಾರ್ಯಕ್ರಮಗಳು ಸಹಕಾರಿಯಾಗುತ್ತವೆ ಎಂದು ನುಡಿದರು.

ಶ್ರೀ ಸುತ್ತೂರು ಮಠವು ರಾಷ್ಟ್ರಪತಿಗಳು, ಪ್ರಧಾನಮಂತ್ರಿಗಳು ಮೊದಲಾದ ಗಣ್ಯಾತಿಗಣ್ಯ ವ್ಯಕ್ತಿಗಳು ಪಾಲ್ಗೊಂಡಂತಹ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ಮತ್ತು ಯಶಸ್ವಿಯಾಗಿ ನಿರ್ವಹಿಸಿಕೊಂಡು ಬಂದ ಮಾದರಿ ಮಠವಾಗಿದೆ. ಶ್ರೀಮಠದ ಕಾರ್ಯಕ್ಷೇತ್ರ ಇಂದು ಜಗತ್ತಿನ ವಿವಿಧ ದೇಶಗಳಲ್ಲಿಯೂ ಕಂಡುಬರುತ್ತಿದೆ ಎಂದು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೇದಿಕೆಯನ್ನು ಉದ್ಘಾಟಿಸಿದ ತೊಗರ್ಸಿ ಮಠದ ಶ್ರೀ ಮಹಾಂತ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳು ತಿಳಿಸಿದರು.

ಹಾವೇರಿಯ ಹುಕ್ಕೇರಿ ಮಠದ ಶ್ರೀ ಸದಾಶಿವ ಮಹಾಸ್ವಾಮಿಗಳು ಜಗಜ್ಯೋತಿ ಬಸವೇಶ್ವರ ಅನುಭವ ಮಂಟಪವನ್ನು ಉದ್ಘಾಟಿಸಿದರು.

ಮಾಜಿ ಸಚಿವರಾದ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರವರು ಅಕ್ಕಮಹಾದೇವಿ ಮಹಾದ್ವಾರವನ್ನು ಉದ್ಘಾಟಿಸಿದರು.

ವಿಜಯಪುರ ಜ್ಞಾನಯೋಗಾಶ್ರಮದ ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮೀಜಿಯವರು ಜಾತಿ ಮತ ಮತ್ತು ಪಂಥವನ್ನು ಬಿಟ್ಟು ಸಮಾಜಕ್ಕೆ ನಿಸ್ವಾರ್ಥ ಸೇವೆ ಸಲ್ಲಿಸಿದವರು ದಾರ್ಶನಿಕರಾಗಿದ್ದಾರೆ. ಅವರು ಎಂದೂ ತಮ್ಮ ವೈಯಕ್ತಿಕ ವಿಷಯಗಳಿಗೆ ಆದ್ಯತೆ ನೀಡಲಿಲ್ಲ. ಮಹಾತ್ಮರ ದರ್ಜೆಯಲ್ಲಿ ಸಾಗಬೇಕಾದರೆ ನಮ್ಮಲ್ಲಿನ ಅವಗುಣಗಳನ್ನು ಬಿಡಬೇಕು ಎಂದು ಸಂದೇಶ ನೀಡಿದರು.

ಸಾಮಾಜಿಕ ಜೀವನದಲ್ಲಿ ಇಂದು ವ್ಯಕ್ತಿಗಳನ್ನು ಹೊಸಕಿಹಾಕುವ ಕೆಲಸ ನಡೆಯುತ್ತಿದೆ. ಹೀಗಾಗಿ ಯಾರಿಗೆ ಯಾರ ಮೇಲೂ ನಂಬಿಕೆ ಇಲ್ಲದ ವಾತಾವರಣ ಇದೆ. ನಿರಾಸೆಯ ಈ ವಾತಾವರಣ ಬದಲಾವಣೆಯಾಗಬೇಕು ಎಂಬುದು ಸುತ್ತೂರು ಶ್ರೀಮಠದ ಆಶಯವಾಗಿದೆ ಎಂದು ತರಳುಬಾಳು ಬೃಹನ್ಮಠದ ಜಗದ್ಗುರು ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ತಿಳಿಸಿದರು.

ಚಿತ್ರದುರ್ಗದ ಮಾದಾರ ಚೆನ್ನಯ್ಯ ಗುರುಪೀಠದ ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮಿಗಳು ಮಠಗಳು ನಿಮ್ನ ವರ್ಗದವರಿಗೆ ಒತ್ತು ನೀಡದಿದ್ದರೆ ಶೋಷಿತ ವರ್ಗಗಳು ಅನಕ್ಷರತೆಯಿಂದ ಬದುಕುತ್ತಿದ್ದವು. ಈ ನಿಟ್ಟಿನಲ್ಲಿ ನಿಮ್ನ ವರ್ಗದ ಜನತೆಗೂ ಅಕ್ಷರ ಕಲಿಯುವ ಅವಕಾಶ ನೀಡಿರುವ ಬಗ್ಗೆ ವೀರಶೈವ ಮಠಗಳ ಪಾತ್ರ ಮಹತ್ತರವಾದುದು ಎಂದು ತಿಳಿಸಿದರು.

ಸುತ್ತೂರು ಮಠದ ಚಾರಿತ್ರಿಕ ಮತ್ತು ಧಾರ್ಮಿಕ ಪರಂಪರೆಯ ಬಗ್ಗೆ ಪ್ರೊ. ಮಲೆಯೂರು ಗುರುಸ್ವಾಮಿಯವರು ಉಪನ್ಯಾಸ ನೀಡಿದರು.

ಶಂಕರದೇವ ಮಹಾದಾಸೋಹ ಮಂಟಪವನ್ನು ಕವಲೇದುರ್ಗದ ಭುವನಗಿರಿ ಮಠದ ಡಾ. ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ಅಜಗಣ್ಣ ಮುಕ್ತಾಯಕ್ಕ ದ್ವಾರವನ್ನು ಜಿಲ್ಲಾ ಪಂಚಾಯತ್ ಉಪಾಧ್ಯಕ್ಷರಾದ ಶ್ರೀಮತಿ ವೇದಾ ವಿಜಯಕುಮಾರ್‌ರವರು, ಶರಣೆ ಸತ್ಯಕ್ಕ ಮಹಾದ್ವಾರವನ್ನು ಶಿವಮೊಗ್ಗದ ಮಹಾಪೌರರಾದ ಶ್ರೀ ಎಸ್.ಎನ್. ಚನ್ನಬಸಪ್ಪನವರು, ಅನಿಮಿಷ ದ್ವಾರವನ್ನು ಪಾಲಿಕೆಯ ಸದಸ್ಯರಾದ ನಾಗರಾಜ್ ಕಂಕಾರಿಯವರು ಉದ್ಘಾಟಿಸಿದರು.

ಇದೇ ಸಂದರ್ಭದಲ್ಲಿ ಕೃಷಿ ಹಾಗೂ ಕೈಗಾರಿಕಾ ವಸ್ತುಪ್ರದರ್ಶನ ಮಳಿಗೆಗಳು ಉದ್ಘಾಟನೆಯಾದವು.

ಶಾಸಕರು ಹಾಗೂ ಜಯಂತಿ ಮಹೋತ್ಸವದ ಕಾರ್ಯಾಧ್ಯಕ್ಷರಾದ ಆದ ಶ್ರೀ ಎಸ್. ರುದ್ರೇಗೌಡ, ಮಾಜಿ ಸಚಿವರಾದ ಶ್ರೀ ಡಿ.ಹೆಚ್. ಶಂಕರಮೂರ್ತಿ, ಶಾಸಕರಾದ ಶ್ರೀ ಕುಮಾರ್ ಎಸ್. ಬಂಗಾರಪ್ಪ, ಶ್ರೀ ಪ್ರೀತಮ್ ಜೆ.ಗೌಡ, ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಜ್ಯೋತಿ ಎಸ್. ಕುಮಾರ್, ಕೃಷಿ ತೋಟಗಾರಿಕೆ ವಿ.ವಿ. ಕುಲಪತಿಗಳಾದ ಡಾ. ಎಂ.ಕೆ. ನಾಯಕ್, ಕುವೆಂಪು ವಿ.ವಿ. ಕುಲಪತಿಗಳಾದ ಪ್ರೊ. ಜೋಗನ್ ಶಂಕರ್ ಮುಂತಾದವರು ಭಾಗವಹಿಸಿದ್ದರು.

* * *

5.1.2019 ರ ಬೆಳಗ್ಗೆ ಶುಭಮಂಗಳ ಸಮುದಾಯ ಭವನದಲ್ಲಿ ಏರ್ಪಡಿಸಿದ್ದ "ಮಹಿಳೆ - ವಿಕಾಸದ ಹೊಸ ಸಾಧ್ಯತೆಗಳು" ಅನುಭಾವಗೋಷ್ಠಿಯಲ್ಲಿ ಕಮಲಾ ನೆಹರೂ ಕಾಲೇಜಿನ ಪ್ರಾಂಶುಪಾಲರಾದ ಡಾ. ಪಾರ್ವತಮ್ಮನವರು ಆಶಯ ನುಡಿಗಳನ್ನಾಡಿದರು.

ಸಹ್ಯಾದ್ರಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ. ಶುಭಾ ಮರವಂತೆ "ಧರ್ಮ ಮತ್ತು ಅಧ್ಯಾತ್ಮ", ಪ್ರಸೂತಿ ತಜ್ಞರಾದ ಡಾ. ವೀಣಾ ಭಟ್ "ಆರೋಗ್ಯ ಮತ್ತು ಕುಟುಂಬ" ವಿಷಯವನ್ನು ಕುರಿತು ಮಾತನಾಡಿದರು. ಪ್ರೊ. ಕಿರಣ್ ದೇಸಾಯಿ ಯವರು ಅಧ್ಯಕ್ಷತೆ ವಹಿಸಿದ್ದರು.

* * *

5.1.2019 ರ ಸಂಜೆಯ ಸಮಾರಂಭ ಹರಿಹರ ದಾವಣಗೆರೆ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದ ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮಿಗಳು ಹಾಗೂ ಬಸವಕೇಂದ್ರದ ಬಸವ ಮರುಳಸಿದ್ಧ ಸ್ವಾಮೀಜಿಗಳವರ ಸಮ್ಮುಖದಲ್ಲಿ ನಡೆಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಡಾ. ಗೊ.ರು. ಚನ್ನಬಸಪ್ಪನವರು ಇಂದು ಹದಗೆಡುತ್ತಿರುವ ಸಾಮಾಜಿಕ ವ್ಯವಸ್ಥೆಯನ್ನು ಸರಿಪಡಿಸುವ ಸದುದ್ದೇಶದಿಂದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತನ್ನು ಸಂಸ್ಥಾಪಿಸಿ ಆ ಮೂಲಕ ಜನತೆಯನ್ನು ಒಗ್ಗೂಡಿಸುವ ಕೆಲಸಕ್ಕೆ ಕಾರಣಕರ್ತರಾಗಿದ್ದಾರೆ. ಅವರ ಆಶಯದಂತೆ ಶ್ರೀಮಠವು ಮುನ್ನಡೆಯುತ್ತಿದೆ ಎಂದು ತಿಳಿಸಿದರು.

ಬೆಂಗಳೂರಿನ ವಿಭು ಅಕಾಡೆಮಿಯ ಮುಖ್ಯಸ್ಥರಾದ ಡಾ. ವಿ.ಬಿ. ಆರತಿಯವರು ವಿಶೇಷ ಉಪನ್ಯಾಸ ನೀಡಿದರು.

ಸಮಾರಂಭದಲ್ಲಿ ಶ್ರೀ ಬಿ.ಎಂ. ಸುಕುಮಾರಶೆಟ್ಟಿ, ಶ್ರೀ ಮಾಡಾಳ್ ವಿರೂಪಾಕ್ಷಪ್ಪ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಕೋಶಾಧ್ಯಕ್ಷರಾದ ಶ್ರೀ ಸಿ.ಎಸ್. ಷಡಕ್ಷರಿ, ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷರಾದ ಶ್ರೀ ಹೆಚ್.ಆರ್. ಬಸವರಾಜಪ್ಪನವರು ಭಾಗವಹಿಸಿದ್ದರು.

* * *

6.1.2019 ರ ಸಂಜೆಯ ಸಮಾರಂಭದಲ್ಲಿ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಜಗದ್ಗುರು ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳವರು, ವ್ಯಕ್ತಿಯ ಹೃದಯದಲ್ಲಿರುವ ಕ್ಲೇಶಗಳನ್ನು ಹೋಗಲಾಡಿಸುವ ಶಕ್ತಿ ವಿಜ್ಞಾನಕ್ಕೆ ಇಲ್ಲ. ಆದರೆ ಅಧ್ಯಾತ್ಮದಲ್ಲಿದೆ. ಅಂತಹ ಅಧ್ಯಾತ್ಮ ಜ್ಞಾನವನ್ನು ತುಂಬುವ ಉತ್ಸವ ಇದಾಗಿದೆ ಎಂದು ತಿಳಿಸಿದರು.

ಗರ್ತಿಕೆರೆ ನಾರಾಯಣಗುರು ಆಶ್ರಮದ ಶ್ರೀ ರೇಣುಕಾನಂದ ಸ್ವಾಮೀಜಿ, ಹೊನ್ನಾಳಿ ಹಿರೇಕಲ್ಮಠದ ಶ್ರೀ ಒಡೆಯರ್ ಚನ್ನಮಲ್ಲಿಕಾರ್ಜುನ ಸ್ವಾಮೀಜಿ ಸಮ್ಮುಖ ವಹಿಸಿದ್ದರು.

ಸಂಸದರಾದ ಶ್ರೀ ಬಿ.ವೈ. ರಾಘವೇಂದ್ರರವರು ಮಾತನಾಡಿ, ಸುತ್ತೂರಿನ ಆದಿ ಜಗದ್ಗುರುಗಳ ಜಯಂತ್ಯುತ್ಸವವು ನಮ್ಮ ನಗರದಲ್ಲಿ ನಡೆಯುತ್ತಿರುವುದು ನಮ್ಮೆಲ್ಲರ ಸೌಭಾಗ್ಯ ಎಂದು ನುಡಿದರು.

ಜಾನಪದ ವಿದ್ವಾಂಸ ಶ್ರೀ ಶಂಭು ವಿ. ಬಳಿಗಾರ್‌ರವರು ವಿಶೇಷ ಉಪನ್ಯಾಸ ನೀಡಿದರು. ಸಮಾರಂಭದಲ್ಲಿ ಮಾಜಿ ಮುಖ್ಯಮಂತ್ರಿ ಶ್ರೀ ಬಿಎಸ್. ಯಡಿಯೂರಪ್ಪ, ಶ್ರೀ ಎಂ.ಪಿ. ರೇಣುಕಾಚಾರ್ಯ, ಶ್ರೀ ಅಶೋಕ್ ನಾಯ್ಕ್, ವಿಆರ್‌ಎಲ್ ಸಮೂಹ ಸಂಸ್ಥೆಗಳ ಅಧ್ಯಕ್ಷರಾದ ಡಾ. ವಿಜಯ ಸಂಕೇಶ್ವರ್, ಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಶ್ರೀ ಆರ್.ಎಂ. ಮಂಜುನಾಥಗೌಡ ಮುಂತಾದವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಸಮಾರಂಭದಲ್ಲಿ ಜಿಲ್ಲಾ ಪಂಚಾಯತ್ ಸದಸ್ಯರಾದ ಶ್ರೀ ನಾಗರಾಜ್, ಶ್ರೀಮತಿ ಅರುಂಧತಿ ರಾಜೇಶ್, ಮಹಾನಗರಪಾಲಿಕೆ ಸದಸ್ಯರಾದ ಶ್ರೀ ಹೆಚ್.ಸಿ. ಯೋಗೇಶ್, ಶ್ರೀ ಪಿ. ಪ್ರಭಾಕರ, ಶ್ರೀಮತಿ ಯಮುನಾ ರಂಗೇಗೌಡ, ಶ್ರೀ ಆರ್.ಎಸ್. ಸತ್ಯನಾರಾಯಣರಾಜು ಉಪಸ್ಥಿತರಿದ್ದರು.

ಬೆಳಗ್ಗೆ ನಡೆದ "ಯುವಜನ : ಅರಿವಿನ ಅವಕಾಶಗಳು" ವಿಷಯ ಕುರಿತ ಗೋಷ್ಠಿಯು ಮೂಲೆಗದ್ದೆ ಶ್ರೀ ಸದಾನಂದ ಶಿವಯೋಗಾಶ್ರಮದ ಶ್ರೀ ಸಿದ್ಧಲಿಂಗ ಸ್ವಾಮಿಗಳು, ತಾಳಗುಪ್ಪ ಶ್ರೀ ವಿರಕ್ತಮಠದ ಶ್ರೀ ಸಿದ್ಧವೀರ ಸ್ವಾಮಿಗಳ ಸಮ್ಮುಖದಲ್ಲಿ ನಡೆಯಿತು. ಅಧ್ಯಕ್ಷತೆಯನ್ನು ಜಿಲ್ಲಾಧಿಕಾರಿಗಳಾದ ಶ್ರೀ ಕೆ.ಎ. ದಯಾನಂದ ವಹಿಸಿದ್ದರು.

ಭದ್ರಾವತಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಜಿ. ಧನಂಜಯ, ಅಂಕಣಕಾರರು ಮತ್ತು ಆರ್ಥಿಕ ತಜ್ಞರಾದ ಶ್ರೀ ರುದ್ರಮೂರ್ತಿ, ಬೆಳಗಾವಿಯ ಜೆ.ಎನ್. ವೈದ್ಯಕೀಯ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ.

ಅವಿನಾಶ್ ಕವಿ, ಎಕ್ಸ್‌ಚೇಂಜಿಂಗ್ ಮಾಹಿತಿ ತಂತ್ರಜ್ಞಾನ ಸಂಸ್ಥೆಯ ಮುಖ್ಯಸ್ಥರಾದ ಶ್ರೀಮತಿ ರಶ್ಮಿ ಸೂರ್ಯನಾರಾಯಣ್, ಜೆಎಸ್‌ಎಸ್ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಡಾ. ಹೆಚ್.ಆರ್. ಮಹಾದೇವಸ್ವಾಮಿ ವಿಷಯ ಮಂಡನೆ ಮಾಡಿದರು.

* * *

7.1.2019 ರ ಸಮಾರಂಭವು ಹುಂಚ ಶ್ರೀ ಹೊಂಬುಜ ಜೈನ ಮಠದ ಜಗದ್ಗುರು ಡಾ. ಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮಿಗಳು ಮತ್ತು ಚಿತ್ರದುರ್ಗ ಶ್ರೀ ಬೋವಿ ಗುರುಪೀಠದ ಜಗದ್ಗುರು ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಮಹಾಸ್ವಾಮಿಗಳವರು ಹಾಗೂ ಬೆಂಗಳೂರಿನ ಸ್ವಾಮಿ ದಯಾನಂದ ಆಶ್ರಮದ ಶ್ರೀ ಸ್ವಾಮಿ ಸಚ್ಚಿದಾನಂದ ಸರಸ್ವತಿಯವರ ಸಮ್ಮುಖದಲ್ಲಿ ನಡೆಯಿತು.

ಸಭಾ ಕಾರ್ಯಕ್ರಮದಲ್ಲಿ ಸೂಫಿ ಸಂತ ಪದ್ಮಶ್ರೀ ಪುರಸ್ಕೃತ ಇಬ್ರಾಹಿಂ ನಾ. ಸುತಾರರವರು 'ಯಾರು ಜಾಣ' ಎಂಬ ವಿಷಯವನ್ನು ಕುರಿತು ಮಾತನಾಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಶಾಸಕರು ಹಾಗೂ ಮಾಜಿ ಉಪ ಮುಖ್ಯಮಂತ್ರಿಗಳಾದ ಶ್ರೀ ಕೆ.ಎಸ್. ಈಶ್ವರಪ್ಪನವರು, ನಮ್ಮ ಸರ್ಕಾರಗಳು ಮಾಡುವ ಕೆಲಸಗಳ ಜೊತೆಗೆ ವೈಚಾರಿಕ ಚಿಂತನೆಗಳನ್ನೊಳಗೊಂಡ ಕಾರ್ಯಕ್ರಮಗಳ ಮೂಲಕ ಸಮಾಜದ ಅಭಿವೃದ್ಧಿಗೆ ಶ್ರಮಿಸುತ್ತಿರುವ ಸುತ್ತೂರು ಮಠದ ಕಾರ್ಯಯೋಜನೆಗಳು ಶ್ಲಾಘನೀಯ ಎಂದರು.

ಮುಖ್ಯ ಅತಿಥಿಗಳಾಗಿ ಶಾಸಕರಾದ ಶ್ರೀ ಬಸನಗೌಡ ಪಾಟೀಲ್ ಯತ್ನಾಳ್, ಶ್ರೀ ಬಸವರಾಜ ಹೊರಟ್ಟಿ, ಶ್ರೀ ಹರತಾಳು ಹಾಲಪ್ಪ, ವಿಧಾನಸಭಾ ಸದಸ್ಯರಾದ ಶ್ರೀ ಬೆಳ್ಳಿ ಪ್ರಕಾಶ್, ವಿಧಾನ ಪರಿಷತ್ ಸದಸ್ಯರಾದ ಶ್ರೀ ಆರ್. ಪ್ರಸನ್ನಕುಮಾರ್, ಕರ್ನಾಟಕ ಸಂಘದ ಅಧ್ಯಕ್ಷರಾದ ಪ್ರೊ. ಕೆ. ಓಂಕಾರಪ್ಪ, ಶ್ರೀ ಕೆ.ಬಿ. ಪ್ರಸನ್ನಕುಮಾರ್ ಆಗಮಿಸಿದ್ದರು.

ಮಹಾನಗರಪಾಲಿಕೆ ಸದಸ್ಯರಾದ ಶ್ರೀಮತಿ ಮೀನಾ ಗೋವಿಂದರಾಜ್, ಶ್ರೀಮತಿ ಕಲ್ಪನಾ ರಮೇಶ್, ಶ್ರೀಮತಿ ಮೆಹೆಕ್ ಷರೀಫ್ ಉಪಸ್ಥಿತರಿದ್ದರು.

"ಕೃಷಿ: ನೆಲ-ಜಲ" ಅನುಭಾವಗೋಷ್ಠಿಯ ಸಮ್ಮುಖವನ್ನು ಸಾಣೆಹಳ್ಳಿಯ ಡಾ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು, ಶ್ರೀ ಸಿದ್ಧಗಿರಿ ಸಂಸ್ಥಾನ ಮಠದ ಜಗದ್ಗುರು ಶ್ರೀ ಅದೃಶ್ಯ ಕಾಡಸಿದ್ಧೇಶ್ವರ ಮಹಾಸ್ವಾಮಿಗಳು, ಶ್ರೀ ಸದ್ಗುರು ಕಬೀರಾನಂದಾಶ್ರಮದ ಶ್ರೀ ಶಿವಲಿಂಗಾನಂದ ಮಹಾಸ್ವಾಮಿಗಳವರು ವಹಿಸಿದ್ದರು.

ಸಾಣೆಹಳ್ಳಿ ಶ್ರೀಗಳು ಕೃಷಿ ಕ್ಷೇತ್ರದ ಬಲವರ್ಧನೆಗೆ ಸೂಕ್ತ ಯೋಜನೆಗಳನ್ನು ನಮ್ಮ ಸರ್ಕಾರಗಳು ರೂಪಿಸಿಕೊಂಡು ರೈತರ ಹಿತಾಸಕ್ತಿಗೆ ಆದ್ಯತೆ ನೀಡಬೇಕಿದೆ. ಕೆರೆಕಟ್ಟೆಗಳನ್ನು ಸಂರಕ್ಷಿಸಿ ನೀರನ್ನು ಉಳಿಸಿಕೊಳ್ಳುವ ಪ್ರಯತ್ನಕ್ಕೆ ಮುಂದಾಗಬೇಕಿದೆ ಎಂದು ತಿಳಿಸಿದರು.

ಗೋಷ್ಠಿಯ ಅಧ್ಯಕ್ಷತೆಯನ್ನು ಕೃಷಿ ವಿಜ್ಞಾನಿಗಳಾದ ಡಾ. ಎ.ಎಸ್. ಕುಮಾರಸ್ವಾಮಿಯವರು ವಹಿಸಿದ್ದರು. ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಡಾ. ಕೆ.ಸಿ. ಶಶಿಧರ್ ಆಶಯ ನುಡಿಗಳನ್ನಾಡಿದರು.

ಅಡಿಕೆ ಪತ್ರಿಕೆ ಸಂಪಾದಕರಾದ ಶ್ರೀ ಶ್ರೀಪಡ್ರೆ, ಸಾವಯವ ಕೃಷಿ ಮಿಷನ್‌ನ ಮಾಜಿ ಅಧ್ಯಕ್ಷರಾದ ಡಾ. ಆನಂದ್ ಅ.ಶ್ರೀ., ಅಖಿಲ ಭಾರತ ಸಮನ್ವಯ ಪ್ರಾಯೋಜನೆ ಮುಖ್ಯಸ್ಥರಾದ ಡಾ. ಎಚ್.ಪಿ. ಮಹೇಶ್ವರಪ್ಪ ಪ್ರಬಂಧ ಮಂಡನೆ ಮಾಡಿದರು.

ಸಹಕಾರ ಮಹಾಮಂಡಳಿ ಅಧ್ಯಕ್ಷರಾದ ಶ್ರೀ ಎಚ್.ಎಸ್. ಷಡಕ್ಷರಿ, ಮಹಾನಗರಪಾಲಿಕೆ ಸದಸ್ಯರಾದ ಶ್ರೀಮತಿ ಸುವರ್ಣ ಎನ್. ಶಂಕರ್, ಶ್ರೀ ಎಸ್. ಜ್ಞಾನೇಶ್ವರ್, ಹಾಲು ಒಕ್ಕೂಟ ಅಧ್ಯಕ್ಷರಾದ ಶ್ರೀ ವಿದ್ಯಾಧರ ಮುಂತಾದವರು ಭಾಗವಹಿಸಿದ್ದರು.

* * *

8.1.2019 ರ ಸಮಾರಂಭವು ಚಿತ್ರದುರ್ಗದ ಬಸವ ಕೇಂದ್ರ ಹಾಗೂ ಶ್ರೀ ಮುರುಘಾ ಮಠದ ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರು ಮತ್ತು ಶ್ರೀ ವಾಲ್ಮೀಕಿ ಗುರುಪೀಠದ ಜಗದ್ಗುರು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಮಹಾಸ್ವಾಮಿಗಳ ಸಮ್ಮುಖದಲ್ಲಿ ನೆರವೇರಿತು.

ಧರ್ಮದ ವಿಧಿಗಳನ್ನು ಮೀರಿದಂತಿದ್ದ ವಚನ ಸಂವಿಧಾನ ನಮ್ಮ ಜೀವನದ ಸಂವಿಧಾನವೂ ಹೌದು. ಈ ಎಲ್ಲಾ ಆಶಯಗಳನ್ನೊಳಗೊಂಡಂತೆ ನಮ್ಮ ಭಾರತದ ಸಂವಿಧಾನವಿದೆ. ಆದರೆ ಅದರಲ್ಲಿನ ಆಶೋತ್ತರಗಳನ್ನು ಸರಿಯಾಗಿ ಗ್ರಹಿಸದೆ ಮುನ್ನಡೆಯುತ್ತಿರುವುದು ದುರಂತಗಳಿಗೆ ಕಾರಣವಾಗಿದೆ ಎಂದು ಚಿತ್ರದುರ್ಗದ ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರು ತಿಳಿಸಿದರು.

ಮೈಸೂರಿನ ಖ್ಯಾತ ವಾಗ್ಮಿಗಳಾದ ಪ್ರೊ. ಎಂ. ಕೃಷ್ಣೇಗೌಡ ವಿಶೇಷ ಉಪನ್ಯಾಸ ನೀಡಿದರು. ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಆಯನೂರು ಮಂಜುನಾಥ್‌ರವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ವಿಧಾನಸಭಾ ಸದಸ್ಯರಾದ ಶ್ರೀ ಡಿ.ಎಸ್. ಸುರೇಶ್, ಮಾಜಿ ಶಾಸಕರಾದ ಶ್ರೀ ವಡ್ನಾಳ್ ರಾಜಣ್ಣ, ಜಿಲ್ಲಾ ಪಂಚಾಯತ್ ಸದಸ್ಯರಾದ ಶ್ರೀ ವೀರೇಶ್ ಕೊಟಗಿ, ಶ್ರೀ ಶಿವಲಿಂಗೇಗೌಡ,

ಮಹಾನಗರಪಾಲಿಕೆ ಸದಸ್ಯರಾದ ಶ್ರೀಮತಿ ಮಂಜುಳಾ, ಶ್ರೀ ಯು.ಹೆಚ್. ವಿಶ್ವನಾಥ್, ಶ್ರೀ ಎಸ್.ಜಿ. ರಾಜು, ಶ್ರೀ ಎನ್.ಎಸ್. ಮಂಜುನಾಥ್, ಶ್ರೀಮತಿ ಆಶಾ ಚಂದ್ರಪ್ಪ, ಶ್ರೀಮತಿ ಭಾನುಮತಿ ವಿನೋದ್, ಶ್ರೀಮತಿ ಲಕ್ಷ್ಮೀ ಶಂಕರ್‌ನಾಯ್ಕ್ ಉಪಸ್ಥಿತರಿದ್ದರು.

"ಪರಿಸರ ಸಂರಕ್ಷಣೆಯ ಸವಾಲು ಮತ್ತು ಸಾಧ್ಯತೆಗಳು" ಅನುಭಾವ ಗೋಷ್ಠಿಯ ಸಮ್ಮುಖವನ್ನು ಶಿರಾಳಕೊಪ್ಪ ಶ್ರೀ ಕೋರಿ ಸಿದ್ಧೇಶ್ವರ ವಿರಕ್ತಮಠದ ಶ್ರೀ ಸಿದ್ಧೇಶ್ವರ ಸ್ವಾಮಿಗಳು, ತೊಗರ್ಸಿ ಶ್ರೀ ಪಂಚವಣ್ಣಿಗೆ ಮಠದ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು ವಹಿಸಿದ್ದರು.

ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಪರಿಸರ ತಜ್ಞರಾದ ಪ್ರೊ. ಬಿ.ಎಂ. ಕುಮಾರಸ್ವಾಮಿಯವರು, ಪಶ್ಚಿಮ ಘಟ್ಟ ವಿಶಿಷ್ಟ ಭೌಗೋಳಿಕ ಪರಿಸರವಾಗಿದ್ದು ಇದು ನಮ್ಮ ದೇಶದ ವಾಯುಗುಣ ಹಾಗೂ ಮಳೆಯ ಮೇಲೆ ಅಗಾಧ ಪರಿಣಾಮ ಬೀರುತ್ತದೆ. ಇಲ್ಲಿನ ನದಿಗಳ ಮೂಲ ನಾಶವಾದರೆ ಜೀವವೈವಿಧ್ಯಗಳು ತಮ್ಮ ಅಸ್ತಿತ್ವ ಕಳೆದುಕೊಳ್ಳುತ್ತವೆ ಎಂದು ತಿಳಿಸಿದರು.

ಪರಿಸರ ಅಭಿಯಂತರರಾದ ಶ್ರೀ ಬಿ.ಪಿ. ಮನುಕುಮಾರ್ ಆಶಯ ನುಡಿಗಳನ್ನಾಡಿದರು. ಕೃಷಿ ವಿಜ್ಞಾನಿ ಡಾ. ಎ.ಎನ್. ನಾಗರಾಜ್, ವಿಜ್ಞಾನ ಲೇಖಕರಾದ ಡಾ. ಶೇಖರ್ ಗೌಳೇರ, ಉಪ ಪ್ರಾಂಶುಪಾಲರಾದ ಡಾ. ಎಲ್.ಕೆ. ಶ್ರೀಮತಿ, ವಿಶ್ರಾಂತ ಪ್ರಾಂಶುಪಾಲರಾದ ದಾವಣಗೆರೆಯ ಡಾ. ಎಂ.ಜಿ. ಈಶ್ವರಪ್ಪ ಪ್ರಬಂಧ ಮಂಡನೆ ಮಾಡಿದರು.

* * *

9.1.2019 ರ ಸಮಾರಂಭವು ಉಡುಪಿಯ ಪೇಜಾವರ ಶ್ರೀ ಅಧೋಕ್ಷಜ ಮಠದ ಡಾ. ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು, ಶ್ರೀಮದ್ ಪುಷ್ಪಗಿರಿ ಸೂರ್ಯಸಿಂಹಾಸನ ಮಠದ ಜಗದ್ಗುರು ಶ್ರೀ ಸೋಮಶೇಖರ ಶಿವಚಾರ್ಯ ಮಹಾಸ್ವಾಮಿಗಳು, ಹೊಸದುರ್ಗ ಶ್ರೀ ಕನಕಗುರು ಶಾಖಾಮಠದ ಶ್ರೀ ಈಶ್ವರಾನಂದಪುರಿ ಮಹಾಸ್ವಾಮಿಗಳು ಹಾಗೂ ತಾವರೆಕೆರೆ ಶ್ರೀ ಶಿಲಾಮಠದ ಡಾ. ಶ್ರೀ ಅಭಿನವ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳವರ ಸಮ್ಮುಖದಲ್ಲಿ ನೆರವೇರಿತು.

ಜೀವನದಲ್ಲಿ ಭಕ್ತಿ ಮತ್ತು ಸೇವೆಯೆಂಬ ಎರಡು ಅಂಶಗಳನ್ನು ರೂಢಿಸಿಕೊಂಡವರು ದಾರಿ ತಪ್ಪುವುದಿಲ್ಲ. ನಾವು ಮಾಡುವ ಪ್ರತಿಯೊಂದು ಕಾರ್ಯದಲ್ಲೂ ದೈವಭಕ್ತಿ, ಶ್ರದ್ಧೆ, ದೀನ ದುರ್ಬಲರ ಬಗ್ಗೆ ಸೇವಾ ಮನೋಭಾವ ಇರಬೇಕು ಎಂದು ಪೇಜಾವರ ಮಠದ ಡಾ. ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ತಿಳಿಸಿದರು.

ಸ್ವರ್ಗದಲ್ಲಿಯೂ ದೋಷ ಹುಡುಕುವವರು ನಮ್ಮಲ್ಲಿ ಇದ್ದಾರೆ. ನಮ್ಮ ನಡುವೆ ಕಸದ ಗುಂಡಿ ಇರುವಂತೆ ಗುಲಾಬಿಯ ತೋಟಗಳೂ ಇವೆ. ಮಕ್ಕಳಿಗೆ ಕೆಟ್ಟದ್ದನ್ನು

ತೋರಿಸುವ ಬದಲು ಒಳ್ಳೆಯ ಸಂಗತಿಗಳತ್ತ ಗಮನ ಸೆಳೆಯುವಂತೆ ಮಾಡಬೇಕಿದೆ ಎಂದು ಸಂಸ್ಕೃತಿ ಚಿಂತಕ ಡಾ. ಗುರುರಾಜ ಕರ್ಜಗಿ ತಿಳಿಸಿದರು.

ಸಮಾರಂಭದಲ್ಲಿ ಡಾ. ಡಿ.ಜಿ. ಬೆನಕಪ್ಪ ದಂಪತಿಗಳನ್ನು ಸನ್ಮಾನಿಸಲಾಯಿತು. ಮಾಜಿ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ, ಸಚಿವರಾದ ಶ್ರೀ ಸಿ.ಎಸ್. ಪುಟ್ಟರಾಜು, ವಿಧಾನ ಪರಿಷತ್ ಸದಸ್ಯ ಶ್ರೀ ಎಸ್. ರುದ್ರೇಗೌಡ, ಶ್ರೀ ಆಯನೂರು ಮಂಜುನಾಥ್, ಮಾಜಿ ಶಾಸಕ ಶ್ರೀ ಡಿ.ಜಿ. ಶಾಂತನಗೌಡ, ಪಾಲಿಕೆ ಸದಸ್ಯರಾದ ಶ್ರೀಮತಿ ಸುನಿತಾ ಅಣ್ಣಪ್ಪ, ಶ್ರೀ ಕೆ. ಶಂಕರ್ ಉಪಸ್ಥಿತರಿದ್ದರು.

"ಆರೋಗ್ಯವೇ ಭಾಗ್ಯ" ಕುರಿತ ಅನುಭಾವ ಗೋಷ್ಠಿಯ ಸಮ್ಮುಖವನ್ನು ರಂಭಾಪುರಿ ಸಂಸ್ಥಾನ ಶಾಖಾಮಠದ ಶ್ರೀ ನಾಗಭೂಷಣ ಶಿವಾಚಾರ್ಯ ಸ್ವಾಮಿಗಳು, ಶ್ರೀ ಮುರುಘರಾಜೇಂದ್ರ ವಿರಕ್ತ ಮಠದ ಶ್ರೀ ಚನ್ನಬಸವ ಸ್ವಾಮಿಗಳು ವಹಿಸಿದ್ದರು.

ದೈಹಿಕ ಮತ್ತು ಮಾನಸಿಕ ಆರೋಗ್ಯ ಎರಡನ್ನೂ ಕಾಪಾಡಿಕೊಳ್ಳುವಲ್ಲಿ ಆಹಾರದ ಪಾತ್ರ ಬಹುಮುಖ್ಯವಾಗಿದೆ. ಹಸಿದಾಗ ತಿನ್ನುವ, ಅದರಲ್ಲೂ ದುಡಿದು ತಿನ್ನುವ ಗುಣ ಬೆಳೆಸಿಕೊಳ್ಳಬೇಕಾಗಿರುವುದು ಇಂದಿನ ಅಗತ್ಯ ಎಂದು ಬಸವ ಕೇಂದ್ರದ ಶ್ರೀ ಬಸವ ಮರುಳಸಿದ್ಧ ಸ್ವಾಮೀಜಿ ಆಶೀರ್ವಚನದಲ್ಲಿ ತಿಳಿಸಿದರು.

ಆಯುರ್ವೇದದಲ್ಲಿ ಮನುಷ್ಯ ಅನಾರೋಗ್ಯಕ್ಕೆ ತುತ್ತಾಗದೆ ಆರೋಗ್ಯದಿಂದ ಇರುವುದಕ್ಕೆ ಸಂಬಂಧಿಸಿದಂತೆ ಅನೇಕ ಸಲಹೆ ಸೂಚನೆಗಳಿವೆ. ಮುಖ್ಯವಾಗಿ ಆಹಾರವೇ ಆರೋಗ್ಯದ ಸಂರಕ್ಷಣೆ ಎಂದು ಹೇಳಿರುವುದನ್ನು ಇಂದಿನ ಜನತೆ ತಿಳಿಯಬೇಕಾಗಿದೆ ಎಂದು ಅಥರ್ವ ಆಯುರ್ಧಾಮದ ಡಾ. ಮಲ್ಲಿಕಾರ್ಜುನ ಡಂಬಳ ತಿಳಿಸಿದರು.

ಇದೇ ಕಾರ್ಯಕ್ರಮದಲ್ಲಿ ಡಾ. ಧನಂಜಯ ಸರ್ಜಿ, ಡಾ. ರಜನಿ ಪೈ, ಡಾ. ನಟರಾಜ್‌ರವರು ಆರೋಗ್ಯ ಕುರಿತಂತೆ ವಿಚಾರಗಳನ್ನು ಮಂಡಿಸಿದರು.

**ಸಮಾರೋಪ ಸಮಾರಂಭ**

ದಿನಾಂಕ 10.1.2019 ರಂದು ನಡೆದ ಸಮಾರೋಪ ಸಮಾರಂಭದ ಸಮ್ಮುಖವನ್ನು ಹುಬ್ಬಳ್ಳಿ ಶ್ರೀ ಮೂರುಸಾವಿರ ಮಠದ ಶ್ರೀ ಗುರುಸಿದ್ಧ ರಾಜಯೋಗೀಂದ್ರ ಮಹಾಸ್ವಾಮಿಗಳು ಹಾಗೂ ವಿಜಯಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರು ವಹಿಸಿದ್ದರು.

ಪರಮಪೂಜ್ಯ ಜಗದ್ಗುರುಗಳವರು ತಮ್ಮ ಆಶೀರ್ವಚನದಲ್ಲಿ ಶಿವಮೊಗ್ಗ ಪ್ರಾಂತ್ಯದ ನೆಲದಲ್ಲಿ ಆಗಿಹೋದ ಅಲ್ಲಮಪ್ರಭು ಹಾಗೂ ಅಕ್ಕಮಹಾದೇವಿಯವರು

ಎಂದಿಗೂ ಅಜರಾಮರರು. ಅಲ್ಲಮಪ್ರಭು ಕಲ್ಯಾಣಕ್ಕೆ ಹೋದಾಗ ಅವರ ಅಂತಃಶಕ್ತಿಯ ಪರಿಚಯ ಇಡೀ ಜೀವಸಂಕುಲಕ್ಕೆ ತಿಳಿದಿತ್ತು. ಹಾಗೆ ಅಕ್ಕನವರ ತಾತ್ವಿಕ ಶಕ್ತಿಯ ಪರಿಚಯವೂ ಕಲ್ಯಾಣದಲ್ಲಿ ಆಯಿತು. ಹೀಗಾಗಿ ಈ ಶಿವಮೊಗ್ಗ ಜಿಲ್ಲೆಯು ವಿಶೇಷ ಸ್ಥಳ ಎನಿಸಿದೆ ಎಂದು ತಿಳಿಸಿದರು.

ಜಯಂತಿ ಮಹೋತ್ಸವದ ರೂವಾರಿಗಳಾದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು, ಸುತ್ತೂರು ಆದಿಜಗದ್ಗುರುಗಳವರ ಜಯಂತಿ ಮಹೋತ್ಸವ ನ ಭೂತೋ ನ ಭವಿಷ್ಯತಿ ಎಂಬಂತೆ ನಡೆದಿದೆ. ನೂರಾರು ಜನರ ಪರಿಶ್ರಮದಿಂದ ಯಶಸ್ವಿ ಆಗಿದೆ. ಧರ್ಮಪ್ರಜ್ಞೆ ಬೆಳೆಸುವ ಜೊತೆಗೆ ನಮಗಾಗಿ ಬದುಕದೇ ಸಮಾಜಕ್ಕಾಗಿ ಬದುಕಬೇಕು ಎಂಬುದನ್ನು ಈ ಜಯಂತಿ ಮಹೋತ್ಸವದ ಮೂಲಕ ವಿವಿಧ ಮಠಾಧೀಶರು ನಮಗೆ ಕಲಿಸಿದ್ದಾರೆ ಎಂದರು.

ಮಾಜಿ ಶಾಸಕರಾದ ಶ್ರೀ ಹೆಚ್.ಎನ್. ಚಂದ್ರಶೇಖರಪ್ಪನವರು, ಸುತ್ತೂರು ಶ್ರೀಮಠವು ನಾಡಿನ ಶ್ರೇಷ್ಠ ಸಮಾಜಸೇವಕರಾದ ಶ್ರೀ ಡಿ.ಎಂ. ನಂಜುಂಡಪ್ಪ ನವರಂತಹವರಿಗೆ ಆಶ್ರಯ ಕಲ್ಪಿಸಿ ವಿದ್ಯೆ ನೀಡಿದ ಮಠ. ಈ ಮಠ ಇಂದಿಗೂ ವಿದ್ಯೆ ಅನ್ನ ದಾಸೋಹದಂತಹ ಯೋಜನೆಗಳ ಮೂಲಕ ಅನೇಕರ ಬಾಳಿಗೆ ಆಶಾದೀಪವಾಗಿದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಮೈಸೂರಿನ ಜೆಎಸ್‌ಎಸ್ ಕಾಲೇಜಿನ ವಿದ್ಯಾರ್ಥಿ ಯುವ ವಿಜ್ಞಾನಿ ಎನ್.ಎಂ. ಪ್ರತಾಪ್ ಮತ್ತು ಖ್ಯಾತ ವೈದ್ಯೆ ಡಾ. ಆಶಾ ಬೆನಕಪ್ಪ ಅವರನ್ನು ಸನ್ಮಾನಿಸಲಾಯಿತು.

ಸಮಾರಂಭದಲ್ಲಿ ಬೆಕ್ಕಿನ ಕಲ್ಮಠದ ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳು, ಕನಕಪುರ ದೇಗುಲ ಮಠದ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳು, ಸಂಸದರಾದ ಶ್ರೀ ಬಿ.ವೈ. ರಾಘವೇಂದ್ರ, ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಸ್. ರುದ್ರೇಗೌಡ, ಶ್ರೀ ಆಯನೂರು ಮಂಜುನಾಥ್, ಮಹಾನಗರಪಾಲಿಕೆ ಸದಸ್ಯರಾದ ಶ್ರೀಮತಿ ಶಬಾನಾ ಖಾನಂ, ಶ್ರೀ ಡಿ. ನಾಗರಾಜ, ಶ್ರೀಮತಿ ಸಂಗೀತಾ ಮುಂತಾದವರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಪ್ರತಿದಿನವೂ ವಿಜಯಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರ ಪ್ರವಚನ, ನಗರದ ನಾನಾ ಕಡೆ ಭಾವೈಕ್ಯತಾ ಯಾತ್ರೆ-ಶಾಂತಿ-ಸೌಹಾರ್ದ-ಪ್ರಾರ್ಥನಾ ಪಥಸಂಚಲನದ ಕಾರ್ಯಕ್ರಮಗಳನ್ನು ಆಯೋಜಿಸ ಲಾಗಿತ್ತು. ಪರಮಪೂಜ್ಯ ಜಗದ್ಗುರುಗಳು, ವಿವಿಧ ಮಠಾಧಿಶರು ಹಾಗೂ ಗಣ್ಯರು ಭಾಗವಹಿಸಿದ್ದರು. ಶಿವಮೊಗ್ಗದ ಜನತೆಗೆ ಇದೊಂದು ಅಪೂರ್ವ ಅನುಭವವಾಗಿತ್ತು.

## ಸುತ್ತೂರು ಜಾತ್ರಾ ಮಹೋತ್ಸವ

ಸುತ್ತೂರು ಶ್ರೀಕ್ಷೇತ್ರದಲ್ಲಿ ದಿನಾಂಕ 1.2.2019 ರಿಂದ 6.2.2019ರವರೆಗೆ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ಕಾರ್ಯಕ್ರಮಗಳು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿದವು.

### ವಸ್ತುಪ್ರದರ್ಶನ, ಕೃಷಿ ಮೇಳ ಮತ್ತು ಸಾಂಸ್ಕೃತಿಕ ಮೇಳ ಉದ್ಘಾಟನೆ

ದಿನಾಂಕ 1.2.2019 ರಂದು ಬೆಳಗ್ಗೆ ವಸ್ತುಪ್ರದರ್ಶನ, ಕೃಷಿಮೇಳ ಮತ್ತು ಸಾಂಸ್ಕೃತಿಕ ಮೇಳ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭದಲ್ಲಿ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಜಗದ್ಗುರು ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳವರು, ಸಾಮಾನ್ಯವಾಗಿ ಜಾತ್ರೆಗಳು ಭಕ್ತಿ ಮತ್ತು ಭಜನೆಗಳಿಗೆ ಮಾತ್ರ ಸೀಮಿತವಾಗಿದ್ದವು. ಆದರೆ ಸುತ್ತೂರು ಶ್ರೀಮಠದ ಜಾತ್ರೆಯಲ್ಲಿ ಮನುಷ್ಯನ ಜೀವನಕ್ಕೆ ಬೇಕಾದ ಹಲವಾರು ವಿಚಾರಗಳನ್ನು ತಲುಪಿಸುವ ಪ್ರಯತ್ನಗಳು ನಡೆಯುತ್ತಿವೆ. ಹೀಗೆ ನಮ್ಮ ಧಾರ್ಮಿಕ ಕೇಂದ್ರಗಳು ಜನತೆಗೆ ಸಂಸ್ಕಾರ ನೀಡಿದಲ್ಲಿ ಅವರ ಅಂತರಂಗ ವಿಕಾಸವಾಗಿ ಸಾಮಾಜಿಕ ಪ್ರಗತಿ ಸಾಧ್ಯವಾಗುತ್ತದೆ ಎಂದು ತಮ್ಮ ಸಂದೇಶದಲ್ಲಿ ತಿಳಿಸಿದರು.

ತಿರುವನಂತಪುರದ ವರ್ಕಲ್‌ನ ಶ್ರೀ ಶಿವಗಿರಿ ಮಠದ ಶ್ರೀಗಳು, ಸುತ್ತೂರು ಮಠವು ಅನೇಕ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸವನ್ನು ನೀಡಿ ಅವರನ್ನು ಉತ್ತಮ ವ್ಯಕ್ತಿಗಳನ್ನಾಗಿ ರೂಪಿಸುತ್ತಿದೆ. ಸಂಸ್ಕಾರಹೀನರಾಗಿದ್ದ ಜನರನ್ನು ಶಿವಸಂಸ್ಕಾರದ ಕಡೆ ಕೊಂಡೊಯ್ದ ಬಸವಣ್ಣನವರ ಕಲ್ಯಾಣದ ಹಾಗೆ ಈ ಮಠವು ಕಾರ್ಯೋನ್ಮುಖವಾಗಿದೆ ಎಂದು ನುಡಿದರು.

ಬೆಂಗಳೂರು ಮಹಾನಗರಪಾಲಿಕೆಯ ಮಹಾಪೌರರಾದ ಶ್ರೀಮತಿ ಗಂಗಾಂಬಿಕೆ ಮಲ್ಲಿಕಾರ್ಜುನ್‌ರವರು ಸುತ್ತೂರು ಮಠದಲ್ಲಿ ಓದಿದ ಮಕ್ಕಳು ಒಳ್ಳೆಯ ಜ್ಞಾನ ಪಡೆದು ಉತ್ತಮ ಜೀವನ ನಡೆಸುತ್ತಿದ್ದಾರೆಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಸುತ್ತೂರಿನ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ ಹಾಗೂ ದುಗ್ಗಹಟ್ಟಿಯ ಶ್ರೀಮತಿ ಸುಂದರಮ್ಮ ವೀರಭದ್ರಪ್ಪ ಪ್ರತಿಷ್ಠಾನದ ಸಹಯೋಗದಲ್ಲಿ ಬೆಳೆಗಳಲ್ಲಿ ಹೆಚ್ಚಿನ ಇಳುವರಿಯ ಸಾಧನೆಗೈದ ರೈತರಿಗೆ ಬಹುಮಾನ ನೀಡಿ ಗೌರವಿಸಲಾಯಿತು.

**ದೇಸಿ ಆಟಗಳು, ದೋಣಿವಿಹಾರ, ರಂಗೋಲಿ, ಸೋಬಾನೆ ಪದ ಸ್ಪರ್ಧೆ ಉದ್ಘಾಟನೆ**

1.2.2019 ರಂದು ಸಂಜೆ ದೇಸಿ ಆಟಗಳು, ದೋಣಿವಿಹಾರ, ರಂಗೋಲಿ, ಸೋಬಾನೆ ಪದ ಸ್ಪರ್ಧೆಗಳನ್ನು ಸಾರಿಗೆ ಸಚಿವರಾದ ಶ್ರೀ ಡಿ.ಸಿ. ತಮ್ಮಣ್ಣನವರು ಉದ್ಘಾಟಿಸಿದರು. ಸಾಮಾಜಿಕ ಕಾರ್ಯಗಳನ್ನು ನಿರಂತರವಾಗಿ ಮಾಡಿಕೊಂಡು ಬರುತ್ತಿರುವ ಸುತ್ತೂರು ಶ್ರೀಮಠವು ಜಾತ್ರೆಯ ಸಂದರ್ಭದಲ್ಲಿ ದೇಸಿ ಕಲೆಗಳನ್ನು ಪ್ರೋತ್ಸಾಹಿಸುವ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದು ಅಭಿನಂದನೀಯ. ಬೇರು ಚೆನ್ನಾಗಿದ್ದರೆ ಮರವು ಚೆನ್ನಾಗಿರುತ್ತದೆ. ದೇಸಿ ಕಲೆಗಳು ನಮ್ಮ ನಾಡಿನ ಸಾಂಸ್ಕೃತಿಕ ಬೇರುಗಳಿದ್ದಂತೆ ಎಂದು ಅಭಿಪ್ರಾಯಪಟ್ಟರು.

ತೋಟಗಾರಿಕೆ ಸಚಿವರಾದ ಶ್ರೀ ಎಂ.ಸಿ. ಮನಗೂಳಿ, ಮಾಜಿ ಸಚಿವರು ಹಾಗೂ ಶಾಸಕರಾದ ಶ್ರೀ ಎನ್. ಮಹೇಶ್, ಕರ್ನಾಟಕ ರಾಜ್ಯ ಖನಿಜ ನಿಗಮದ ಅಧ್ಯಕ್ಷರಾದ ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್, ಬೆಂಗಳೂರಿನ ಎಫ್‌ಕೆಸಿಸಿಐ ಅಧ್ಯಕ್ಷರಾದ ಶ್ರೀ ಸುಧಾಕರ ಶೆಟ್ಟಿಯವರು ಸಮಾರಂಭದಲ್ಲಿ ಮಾತನಾಡಿ ಶ್ರೀಮಠದ ಸೇವೆಯ ಬಗ್ಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು.

**ಸಾಮೂಹಿಕ ವಿವಾಹ**

ದಿನಾಂಕ 2.2.2019 ರಂದು ಬೆಳಗ್ಗೆ ನಡೆದ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಉದ್ಘಾಟಿಸಿ ನವ ದಂಪತಿಗಳಿಗೆ ಶುಭ ಕೋರಿದರು.

ಶ್ರೀ ಉಜ್ಜಯಿನಿ ಪೀಠದ ಜಗದ್ಗುರು ಶ್ರೀ ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳವರು ನವಜೋಡಿಗಳಿಗೆ ಆಶೀರ್ವದಿಸಿ, ಸಮಾಜಕ್ಕೆ ದಾರಿದೀಪವಾಗಿರುವ ಸುತ್ತೂರು ಶ್ರೀಮಠವು ಅಸಂಖ್ಯಾತ ಸಮಾಜೋಪಯೋಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುತ್ತದೆ. ಅದರಲ್ಲಿ ಸಾಮೂಹಿಕ ವಿವಾಹ ಕಾರ್ಯಕ್ರಮ ವಿಶೇಷವಾಗಿ ಸಾಮಾಜಿಕ ಮನ್ನಣೆಯನ್ನು ಪಡೆದುಕೊಂಡಿದೆ. ಎಲ್ಲ ಜಾತಿ-ಮತದವರನ್ನು ಒಳಗೊಂಡಂತೆ ನಡೆಯುವ ಈ ಕಾರ್ಯಕ್ರಮದಲ್ಲಿ ತಾರತಮ್ಯತೆಗಳಿಗೆ ಅವಕಾಶವಿಲ್ಲ ಎಂದು ತಿಳಿಸಿದರು.

ಇನ್‌ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷರಾದ ಪದ್ಮಶ್ರೀ ಡಾ. ಸುಧಾಮೂರ್ತಿಯವರು ಹಾಗೂ ಉನ್ನತ ಶಿಕ್ಷಣ ಸಚಿವರಾದ ಶ್ರೀ ಜಿ.ಟಿ. ದೇವೇಗೌಡರು ದಂಪತಿಗಳು ಸುಖ ಶಾಂತಿ ನೆಮ್ಮದಿಯಿಂದ ಜೀವನ ನಡೆಸಬೇಕು ಎಂದು ನವದಂಪತಿಗಳಿಗೆ ಶುಭ ಹಾರೈಸಿದರು.

**ರಾಜ್ಯಮಟ್ಟದ ಭಜನಾಮೇಳ ಉದ್ಘಾಟನೆ**

ದಿನಾಂಕ 2.2.2019 ರಂದು ಸಂಜೆ ಭಜನಾಮೇಳ ಕಾರ್ಯಕ್ರಮವನ್ನು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಉದ್ಘಾಟಿಸಿ, ಬಸವಾದಿ ಶರಣರು ಸಮಾಜದಲ್ಲಿನ ಜಾತಿ ವರ್ಗ ತಾರತಮ್ಯಗಳ ನಿವಾರಣೆಗಾಗಿ ಶ್ರಮಿಸಿದರು. ಅದೇ ಮಾರ್ಗದಲ್ಲಿ ಶ್ರೀ ಸುತ್ತೂರು ಮಠವು ಸಹ ಶ್ರಮಿಸುತ್ತಾ ಬಂದಿದೆ. ಜಾತಿ ವ್ಯವಸ್ಥೆ ಯಿಂದಾಗಿ ಬಹುತೇಕರು ಅವಕಾಶವಂಚಿತರಾಗಿದ್ದು ಬಡವರಾಗಿಯೇ ಉಳಿದಿದ್ದಾರೆ. ಇಂತಹ ದುರ್ಬಲರಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ, ಮಾನಸಿಕವಾಗಿ ಶಕ್ತಿ ತುಂಬಿ ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಶ್ರೀಮಠದ ಕೊಡುಗೆ ಅಪಾರವಾಗಿದೆ ಎಂದು ಮಠದ ಸೇವಾ ಕ್ಷೇತ್ರಗಳ ಬಗ್ಗೆ ಮುಕ್ತವಾಗಿ ಪ್ರಶಂಸಿಸಿದರು.

ಸುತ್ತೂರು ಜಾತ್ರೆ ಕರ್ನಾಟಕದ ಹೆಮ್ಮೆಯ ಜಾತ್ರೆಯಾಗಿದೆ. ಭಕ್ತರು, ರೈತಾಪಿ ವರ್ಗದವರು, ಕಲಾವಿದರು, ಕ್ರೀಡಾಳುಗಳು ಎಲ್ಲರನ್ನು ಒಳಗೊಂಡಂತೆ ಈ ಜಾತ್ರೆಯಲ್ಲಿ ಕಾರ್ಯಕ್ರಮಗಳು ನಡೆಯುತ್ತಿರುವುದು ಸಂತೋಷದ ಸಂಗತಿ ಎಂದು ಮಲ್ಲನಮೂಲೆ ಕಂಬಳೀಶ್ವರ ಮಠದ ಪೂಜ್ಯ ಶ್ರೀಗಳು ತಿಳಿಸಿದರು.

ಸುತ್ತೂರು ಜಾತ್ರೆಯು ಜಾತ್ರೆಗಳ ಜಾತ್ರೆ ಇದ್ದಂತೆ ಎಂದು ಗೃಹ ಸಚಿವರಾದ ಶ್ರೀ ಎಂ.ಬಿ. ಪಾಟೀಲ್ ತಿಳಿಸಿದರು.

ನಮ್ಮ ದೇಶದಲ್ಲಿ ನಡೆಯುವ ಜಾತ್ರೆ, ಹಬ್ಬಗಳು ಸಂಸ್ಕೃತಿಯ ಪ್ರತೀಕವಾಗಿದ್ದು ಜನರಲ್ಲಿ ಜಾತಿ ಮತ, ಮೇಲು ಕೀಳು ಎಂಬ ಭೇದಭಾವವಿಲ್ಲದೆ ಎಲ್ಲರೂ ಒಂದಾಗಿ ಬದುಕಬೇಕೆಂಬ ಉದ್ದೇಶದಿಂದ ನಡೆಸಲಾಗುತ್ತದೆ ಎಂದು ಸಚಿವರಾದ ಶ್ರೀ ಈಶ್ವರ ಬಿ. ಖಂಡ್ರೆಯವರು ತಿಳಿಸಿದರು.

ಚಲನಚಿತ್ರ ಕಲಾವಿದರಾದ ಶ್ರೀ ದರ್ಶನ್, ತಮ್ಮ ತಂದೆ ತೂಗುದೀಪ ಶ್ರೀನಿವಾಸ್ ಮೂತ್ರಪಿಂಡ ವೈಫಲ್ಯದಿಂದ ಬಳಲುತ್ತಿದ್ದ ದಿನಗಳಲ್ಲಿ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಜಗದ್ಗುರುಗಳವರು ಉಚಿತವಾಗಿ ಚಿಕಿತ್ಸೆ ಕೊಡಿಸಿರುವುದನ್ನು ಸ್ಮರಿಸಿಕೊಳ್ಳುತ್ತ, ಸಮಾಜ ಸೇವೆಗೆ ಶ್ರೀಮಠವು ಎಂದಿನಿಂದಲೂ ಬದ್ಧವಾಗಿರುವುದು ನಾಡಿನ ಸುದೈವ ಎಂದು ತಿಳಿಸಿದರು.

ಮನುಷ್ಯತ್ವದಿಂದ ದೈವತ್ವದ ಕಡೆಗೆ ಸಾಗುವುದೇ ಮಾನವ ಜನ್ಮದ ಮುಖ್ಯ ಆಶಯ. ಹಾಗಾದಲ್ಲಿ ಮಾನವ ಮಹಾದೇವನಾಗಬಹುದು. ಭಜನಾಮೇಳದಂತಹ ಕಾರ್ಯಕ್ರಮಗಳು ದೈವಭಕ್ತಿಯನ್ನು ನಮ್ಮಲ್ಲಿ ಬೆಳೆಸಿಕೊಳ್ಳಲು ಸಹಾಯಕವಾಗುತ್ತವೆ. ಶ್ರೀಮಠವು ಇಂತಹ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಂಡು ಬರುತ್ತಿರುವುದು ನಾಡಿಗರ ಪುಣ್ಯವಾಗಿದೆ ಎಂದು ಶ್ರೀ ಕೆರಗೋಡಿ-ರಂಗಾಪುರ ಮಠದ ಶ್ರೀಗಳು ತಿಳಿಸಿದರು.

ನಮ್ಮ ಪೂರ್ವಿಕರು ಉಳಿಸಿಕೊಂಡು ಬಂದಿರುವ ಜನಪದ ಸಾಹಿತ್ಯ ಹಾಗೂ ಭಜನೆಯಂತಹ ಕಲೆಗಳನ್ನು ಉಳಿಸಿ ಬೆಳೆಸುವಲ್ಲಿ ಸುತ್ತೂರು ಕ್ಷೇತ್ರದಲ್ಲಿ ನಡೆಯುತ್ತಿರುವ ಭಜನಾಮೇಳ ಅತ್ಯಂತ ಮಹತ್ವದ್ದಾಗಿದೆ ಎಂದು ಚಿಕ್ಕೋಡಿ ಮಠದ ಶ್ರೀಗಳು ನುಡಿದರು.

ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ಹಾಗೂ ಡಾ. ಎಚ್.ಸಿ. ಮಹದೇವಪ್ಪನವರು ಸುತ್ತೂರು ಮಠದ ಸೇವೆಯನ್ನು ಶ್ಲಾಘಿಸಿದರು.

**ರಥೋತ್ಸವ ಹಾಗೂ ಧಾರ್ಮಿಕ ಸಭೆ**

ದಿನಾಂಕ 3.2.2019 ರಂದು ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ದಿವ್ಯರಥೋತ್ಸವಕ್ಕೆ ಪರಮಪೂಜ್ಯ ಜಗದ್ಗುರುಗಳು ಚಾಲನೆ ನೀಡಿದರು.

ರಥೋತ್ಸವದ ಮೆರವಣಿಗೆಯಲ್ಲಿ ಕರ್ನಾಟಕ, ಕೇರಳ, ಆಂಧ್ರ, ಮಹಾರಾಷ್ಟ್ರ ಮೊದಲಾದ ರಾಜ್ಯಗಳಿಂದ ಆಗಮಿಸಿದ್ದ ನಂದಿಧ್ವಜ ಕುಣಿತ, ವೀರಗಾಸೆ, ಮರಗಾಲು, ಕಂಸಾಳೆ, ಡೊಳ್ಳು, ಪೂಜಾ ಕುಣಿತ, ಕರಗ, ಕೀಲುಕುದುರೆ, ನವಿಲು ಕುಣಿತ, ಗಾರುಡಿಗೊಂಬೆ, ಹುಲಿವೇಷ ಕುಣಿತ, ಮಲ್ಲಕಂಬ, ತಮಟೆ, ನಗಾರಿ ಮೊದಲಾದ ಜನಪದ ಕಲಾವಿದರ ತಂಡಗಳು ಭಾಗವಹಿಸಿದ್ದವು.

* * *

ಜಾತ್ರಾ ಮಹೋತ್ಸವದ ಅಂಗವಾಗಿ ಏರ್ಪಡಿಸಲಾಗಿದ್ದ ಧಾರ್ಮಿಕ ಸಭೆಯನ್ನು ಉದ್ಘಾಟಿಸಿದ ಕೇಂದ್ರ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ರಾಜ್ಯ ಸಚಿವರಾದ ಶ್ರೀ ಅನಂತಕುಮಾರ್ ದತ್ತಾತ್ರೇಯ ಹೆಗ್ಡೆಯವರು, ಭಾರತವು ಸಹಸ್ರಾರು ವರ್ಷಗಳಿಂದ ದೈವಸ್ವರೂಪಿ ವಿಭೂತಿಪುರುಷರು ನಡೆದಾಡಿದ ಸಾತ್ವಿಕ ಭೂಮಿಯಾಗಿದೆ. ಇತರ ದೇಶಗಳ ಮಣ್ಣಿಗಿಂತ ನಮ್ಮ ದೇಶದ ಮಣ್ಣು ಶ್ರೇಷ್ಠ. ಈ ಮಣ್ಣಿಗೆ ಪಾಪಗಳನ್ನು ಕಳೆಯುವ ಶಕ್ತಿ ಇದೆ ಎಂದು ತಿಳಿಸಿದರು.

ಮಾಜಿ ಸಚಿವರು ಮತ್ತು ಶಾಸಕರಾದ ಶ್ರೀ ಅಮರೇಗೌಡ ಎನ್. ಪಾಟೀಲ್ ಬಯ್ಯಾಪುರ, ಉತ್ತರ ಅಮೆರಿಕದ ವೀರಶೈವ ಸಮಾಜದ ಅಧ್ಯಕ್ಷರಾದ ಶ್ರೀಶೈಲ ಹಾದಿಮನಿ ಸಮಾರಂಭದಲ್ಲಿ ಭಾಗವಹಿಸಿದ್ದರು.

ಎಲ್ಲ ಧರ್ಮಗಳ ಸಾರವೂ ಒಂದೇ ಆಗಿದೆ. ಧರ್ಮವು ಮಾನವನನ್ನು ದೈವತ್ವದ ಕಡೆಗೆ ಕರೆದೊಯ್ಯುತ್ತದೆ. ಧರ್ಮವನ್ನು ನಾವು ಎಂದಿಗೂ ಮರೆಯಬಾರದು. ನಮ್ಮ ಬದುಕಿನಲ್ಲಿ ಕಳೆದುಕೊಂಡ ಶಾಂತಿ ನೆಮ್ಮದಿಯನ್ನು ಪುನಃ ಪಡೆದುಕೊಳ್ಳುವುದು ಕಷ್ಟ. ಇಂತಹ ಧಾರ್ಮಿಕ ಮಹೋತ್ಸವಗಳಲ್ಲಿ ಭಾಗವಹಿಸಿ ಶರಣ ಸಂದೇಶವನ್ನು ಕೇಳಿ ಅಳವಡಿಸಿಕೊಳ್ಳುವುದರ ಮೂಲಕ ಜೀವನವನ್ನು ಪವಿತ್ರಗೊಳಿಸಿಕೊಳ್ಳಬೇಕಿದೆ ಎಂದು

ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

ಹುಬ್ಬಳ್ಳಿಯ ಗೊರೂರಿನ ಶ್ರೀ ನವಗ್ರಹ ತೀರ್ಥಕ್ಷೇತ್ರದ ಶ್ರೀಗಳು, ಸುತ್ತೂರು ಕ್ಷೇತ್ರವು ಸರ್ವರನ್ನು ಪ್ರೀತಿಯಿಂದ ಪೊರೆಯುವ ಜನಮಾನಸದ ನಿಜ ಕಾಶಿ ಕ್ಷೇತ್ರವಾಗಿದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಕುಂದೂರು ಮಠದ ಶ್ರೀಗಳು, ಮೈಸೂರಿನ ಕ್ಯಾಥೋಲಿಕ್ ಧರ್ಮ ಪ್ರಾಂತ್ಯದ ರೆ. ಲೆಸ್ಲಿ ಮೊರಾಸ್‌ರವರು ಜಾತ್ರೆಯ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

**ಚಿತ್ರಕಲೆ ಹಾಗೂ ಗಾಳಿಪಟ ಸ್ಪರ್ಧೆ, ಐವತ್ತೊಂದನೆಯ ದನಗಳ ಜಾತ್ರೆ ಉದ್ಘಾಟನೆ**

ದಿನಾಂಕ 3.2.2019 ರಂದು ಕೇಂದ್ರ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಸಚಿವರಾದ ಶ್ರೀ ಅಶ್ವಿನ್‌ಕುಮಾರ ಚೌಬೆರವರು ಚಿತ್ರಕಲೆ, ಗಾಳಿಪಟ ಸ್ಪರ್ಧೆ ಹಾಗೂ ಐವತ್ತೊಂದನೆಯ ದನಗಳ ಜಾತ್ರೆ ಕಾರ್ಯಕ್ರಮಗಳನ್ನು ಉದ್ಘಾಟಿಸಿದರು.

ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಸಾಮಾಜಿಕ ಸಾಮರಸ್ಯದ ಸುತ್ತೂರು ಜಾತ್ರೆಯಲ್ಲಿ ಮನುಷ್ಯನನ್ನು ಶಾರೀರಿಕ ಮತ್ತು ಮಾನಸಿಕವಾಗಿ ಸದೃಢಗೊಳಿಸುವಲ್ಲಿ ಅಗತ್ಯವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರುತ್ತಿರುವುದು ನಮ್ಮೆಲ್ಲರ ಸುದೈವದ ಸಂಗತಿಯಾಗಿದೆ ಎಂದು ನುಡಿದರು.

ಮಾಜಿ ಸಚಿವರು ಹಾಗೂ ಶಾಸಕರಾದ ಶ್ರೀ ಎಸ್.ಎ. ರಾಮದಾಸ್, ಮಾಜಿ ಸಚಿವರಾದ ಶ್ರೀ ಎನ್. ಶಿವಣ್ಣನವರು ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

**ಕೃಷಿ ವಿಚಾರ ಸಂಕಿರಣ ಉದ್ಘಾಟನೆ**

ದಿನಾಂಕ 4.2.2019 ರಂದು ರಾಜ್ಯ ಕೃಷಿ ಸಚಿವರಾದ ಶ್ರೀ ಎನ್.ಹೆಚ್. ಶಿವಶಂಕರ ರೆಡ್ಡಿ ಕೃಷಿ ವಿಚಾರ ಸಂಕಿರಣವನ್ನು ಉದ್ಘಾಟಿಸಿ, ಹಿಂದಿನ ಕಾಲದಲ್ಲಿ ರೈತರು ಸಾಂಪ್ರದಾಯಿಕ ಕೃಷಿ ಪದ್ಧತಿಯನ್ನು ಅನುಸರಿಸಿ ಕೊಂಡು ಬರುತ್ತಿದ್ದರು. ನಂತರ ಆಧುನಿಕ ಪದ್ಧತಿ ಜಾರಿಗೆ ಬಂದು, ಉತ್ಪಾದನೆಯನ್ನು ಹೆಚ್ಚು ಮಾಡುವುದರ ಜೊತೆಗೆ ಉತ್ಪಾದನಾ ವೆಚ್ಚಗಳನ್ನು ಸಹ ಹೆಚ್ಚು ಮಾಡಿತು. ಆದರೆ ರಾಸಾಯನಿಕಗಳ ವಿಪರೀತ ಬಳಕೆಯಿಂದ ಕೃಷಿ ಕ್ಷೇತ್ರ ಹಲವು ಸಮಸ್ಯೆಗಳಿಗೆ ತುತ್ತಾಗಬೇಕಾಯಿತು. ಇಂತಹ ಸಂದರ್ಭದಲ್ಲಿ ರೈತರಿಗೆ ಪೂರಕವಾದ ಮಾಹಿತಿಯನ್ನೊಳ ಗೊಂಡ ಈ ವಿಚಾರಸಂಕಿರಣವು ಪ್ರಯೋಜನಕಾರಿಯಾಗಲಿದೆ ಎಂದು ತಿಳಿಸಿದರು.

ನಮ್ಮಲ್ಲಿಂದು ಕೃಷಿಗೆ ಪ್ರಾಮುಖ್ಯತೆಯನ್ನು ನೀಡುವ ಪ್ರಯತ್ನಗಳು ಅಷ್ಟಾಗಿ ನಡೆಯುತ್ತಿಲ್ಲ. ಭೂಮಿ ಬರಡಾದಾಗ ಮಣ್ಣಿನ ಪರೀಕ್ಷೆ ಮಾಡಿಸುವ ಅಗತ್ಯವಿರುತ್ತದೆ. ಉಪಯುಕ್ತ ಗೊಬ್ಬರವನ್ನು ಸೇರ್ಪಡಿಸಿದಾಗ ಚೆನ್ನಾಗಿ ಇಳುವರಿ ಬರುತ್ತದೆ. ಅಂತಹ ಇಳುವರಿ ಕುರಿತ ಮಾಹಿತಿಗಳಿಗೆ ಸುತ್ತೂರು ಶ್ರೀಮಠವು ಜಾತ್ರೆಯ ಸಂದರ್ಭದಲ್ಲಿ ಅವಕಾಶ ಒದಗಿಸಿರುವುದು ಅಭಿನಂದನೀಯ ಎಂದು ಕನಕಪುರ ದೇಗುಲ ಮಠದ ಶ್ರೀಗಳು ತಮ್ಮ ಸಂದೇಶದಲ್ಲಿ ತಿಳಿಸಿದರು.

ಮಾಜಿ ಸಚಿವರು ಹಾಗೂ ಶಾಸಕರಾದ ಶ್ರೀ ದಿನೇಶ್ ಆರ್. ಗುಂಡೂರಾವ್, ಹೆಚ್.ಡಿ. ಕೋಟೆ ವಿಧಾನಸಭಾ ಸದಸ್ಯರಾದ ಶ್ರೀ ಅನಿಲ್‌ಕುಮಾರ್, ಪ್ರಗತಿಪರ ರೈತರಾದ ಶ್ರೀ ಚಿನ್ನಸ್ವಾಮಿ ವಡ್ಡಗೆರೆ, ಆನೇಕಲ್ ಕಂಬಳೀಪುರದ ಶ್ರೀ ವಿ. ಕಾಂತರಾಜು, ಪ್ರೊ. ಎಂ. ಕೃಷ್ಣೇಗೌಡ ಮುಖ್ಯ ಅತಿಥಿಗಳಾಗಿದ್ದರು.

**ಕೃಷಿ ವಿಚಾರಸಂಕಿರಣ ಸಮಾರೋಪ**

ಕೃಷಿ ವಿಚಾರಸಂಕಿರಣ ಸಮಾರೋಪ ಸಮಾರಂಭದಲ್ಲಿ ಉಡುಪಿ ಪೇಜಾವರ ಮಠದ ಶ್ರೀಗಳು ಜಾತ್ಯತೀತವಾಗಿ ಕಾರ್ಯ ನಿರ್ವಹಿಸುವ ಶ್ರೀಮಠವು ನಮ್ಮ ನಾಡಿನ ಕೃಷಿ ಪರಂಪರೆ ಹಾಗೂ ರೈತರ ಬದುಕಿನ ಹಿತಾಸಕ್ತಿಗಳನ್ನು ಸಹ ಗಮನದಲ್ಲಿಟ್ಟುಕೊಂಡು ಅದಕ್ಕೆ ಪೂರಕವಾದ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ. ಜಾತ್ರೆ ಸಂಭ್ರಮವಷ್ಟೇ ಅಲ್ಲ, ಅದು ಬದುಕಿನ ಸಂಭ್ರಮವೂ ಆಗಬಲ್ಲದು ಎಂಬುದನ್ನು ಶ್ರೀಕ್ಷೇತ್ರವು ನಿರೂಪಿಸುತ್ತಾ ಬಂದಿದೆ ಎಂದು ತಮ್ಮ ಸಂದೇಶದಲ್ಲಿ ತಿಳಿಸಿದರು.

ರೈತರು ಆರ್ಥಿಕವಾಗಿ ಸದೃಢರಾಗಬೇಕು. ಎಲ್ಲದಕ್ಕೂ ಸರ್ಕಾರಗಳನ್ನು ಅವಲಂಬಿಸದೆ ಉತ್ತಮ ವ್ಯವಸಾಯ ಮಾದರಿಗಳನ್ನು ಅರಿತು ತಮ್ಮ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಬೇಕು. ಅನ್ನದಾತರು ಎಂದಿಗೂ ಬೇಡುವಂತಿರಬಾರದು, ನೀಡುವಂತಿರಬೇಕು ಎಂದು ಮಾನ್ವಿಯ ಕವಿತಾಳದ ಶ್ರೀಮತಿ ಕವಿತಾ ಮಿಶ್ರಾ ತಮ್ಮ ಉಪನ್ಯಾಸದಲ್ಲಿ ತಿಳಿಸಿದರು.

ಮೈಸೂರಿನ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಬ್ರಹ್ಮಕುಮಾರಿ ಲಕ್ಷ್ಮೀಜಿಯವರು ರೈತರು ದುಡಿಮೆಯಲ್ಲಿಯೇ ದೇವರನ್ನು ಕಾಣುವವರು. ಆದರೆ ಇಂದು ವಿವಿಧ ಸಮಸ್ಯೆಗಳಲ್ಲಿ ಅವರು ಸಿಕ್ಕಿಕೊಂಡಿದ್ದಾರೆ. ಆತುರಪಡದೆ ತಾಳ್ಮೆ, ಧೈರ್ಯ, ಸ್ಥೈರ್ಯಗಳನ್ನು ಬೆಳೆಸಿಕೊಂಡು ಕೃಷಿ ಕಾಯಕ ಮಾಡಬೇಕಿದೆ ಎಂದು ತಮ್ಮ ಸಂದೇಶದಲ್ಲಿ ತಿಳಿಸಿದರು.

ವಿಧಾನಪರಿಷತ್ ಸದಸ್ಯರಾದ ಶ್ರೀ ಎಸ್. ರುದ್ರೇಗೌಡರು, ಮಾಜಿ ವಿಧಾನ ಪರಿಷತ್ ಸದಸ್ಯರಾದ ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪನವರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

**ಭಜನಾ ಮೇಳ ಸಮಾರೋಪ**

ದಿನಾಂಕ 5.2.2019 ರಂದು ಭಜನಾಮೇಳ ಸಮಾರೋಪದಲ್ಲಿ ರಾಜ್ಯದ ಉಪಮುಖ್ಯಮಂತ್ರಿಗಳಾದ ಡಾ. ಜಿ. ಪರಮೇಶ್ವರ್ ಅವರು ಸಾವಿರಾರು ವರ್ಷಗಳ ಇತಿಹಾಸವಿರುವ ಶ್ರೀಮಠವು ಸಾಮಾಜಿಕವಾಗಿ ಮತ್ತು ಧಾರ್ಮಿಕವಾಗಿ ಸೇವಾ ಕ್ಷೇತ್ರದಲ್ಲಿ ತೊಡಗಿಸಿಕೊಂಡು ನಮ್ಮ ಪರಂಪರೆಯನ್ನು ಸಂರಕ್ಷಿಸಿಕೊಂಡು ಬರುತ್ತಿದೆ. ಅನರಕ್ಷರಸ್ಥ ಹಾಗೂ ವಿದ್ಯಾವಂತ ಸಮುದಾಯಗಳೆರಡನ್ನೂ ಈ ಜಾತ್ರೆಯ ಮೂಲಕ ಎಲ್ಲರೂ ಮಾನವಧರ್ಮದ ಮಹತ್ವವನ್ನು ಅರಿತುಕೊಂಡು ಬಾಳುವಂತಹ ಸಂದೇಶವನ್ನು ನೀಡುತ್ತಿದೆ ಎಂದು ತಿಳಿಸಿದರು.

ಮನುಷ್ಯ ತನ್ನ ಮನಸ್ಸನ್ನು ನಿಯಂತ್ರಣದಲ್ಲಿಟ್ಟುಕೊಂಡು ಜೀವನದಲ್ಲಿ ನೆಮ್ಮದಿಯನ್ನು ಕಾಣಬೇಕು. ಇದಕ್ಕಾಗಿ ಧ್ಯಾನ, ಭಜನೆ, ಪ್ರಾರ್ಥನೆಯಂತಹ ಸದಾಚಾರಗಳನ್ನು ರೂಢಿಸಿಕೊಳ್ಳುವುದು ಅತ್ಯಗತ್ಯ ಎಂದು ಆನಂದಪುರಂನ ಶ್ರೀ ಮುರುಘಾಮಠದ ಡಾ. ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳವರು ತಮ್ಮ ಸಂದೇಶದಲ್ಲಿ ತಿಳಿಸಿದರು.

ಜಾತ್ರೆಯಲ್ಲಿ ಗುರು, ಲಿಂಗ, ಜಂಗಮದಂತಹ ಧಾರ್ಮಿಕ, ಆಧ್ಯಾತ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳ ಬಗ್ಗೆ ಜನರಲ್ಲಿ ಜಾಗೃತಿಯನ್ನು ಮೂಡಿಸುವ ಉದ್ದೇಶದ ಕಾರ್ಯಕ್ರಮಗಳನ್ನು ಸುತ್ತೂರು ಶ್ರೀಕ್ಷೇತ್ರವು ನಿರಂತರವಾಗಿ ಮಾಡಿಕೊಂಡು ಬರುತ್ತಿದೆ ಎಂದು ಸೊರಬ ತಾಲ್ಲೂಕಿನ ಜಡೆ ಶ್ರೀ ಸಂಸ್ಥಾನ ಮಠದ ಡಾ. ಶ್ರೀ ಮಹಾಂತ ಸ್ವಾಮಿಗಳು ತಮ್ಮ ಶುಭ ಸಂದೇಶದಲ್ಲಿ ತಿಳಿಸಿದರು.

ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಅಡಗೂರು ಹೆಚ್. ವಿಶ್ವನಾಥ್, ವಿಧಾನಸಭಾ ಸದಸ್ಯರಾದ ಶ್ರೀ ದತ್ತಾತ್ರೇಯ ಸಿ. ಪಾಟೀಲ್ ರೇವೂರ್, ಮೈಸೂರು ಮಹಾನಗರಪಾಲಿಕೆಯ ಮಹಾಪೌರರಾದ ಶ್ರೀಮತಿ ಪುಷ್ಪಲತಾ ಜಗನ್ನಾಥ್, ರಾಜ್ಯ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಅಧ್ಯಕ್ಷರಾದ ಶ್ರೀ ಆರ್. ನರೇಂದ್ರ ರವರು ಜಾತ್ರೆಯ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಪ್ರಶಸ್ತಿ ವಿಜೇತ ತಂಡಗಳಿಗೆ ಬಹುಮಾನಗಳನ್ನು ನೀಡಿ ಗೌರವಿಸಲಾಯಿತು.

**ಕುಸ್ತಿಪಂದ್ಯಾವಳಿ**

ದಿನಾಂಕ 5.2.2019 ರಂದು ನಡೆದ ಕುಸ್ತಿ ಪಂದ್ಯಾವಳಿ ಉದ್ಘಾಟನಾ

ಕಾರ್ಯಕ್ರಮದಲ್ಲಿ ಶಾಸಕ ಹಾಗೂ ಮಾಜಿ ಸಚಿವರಾದ ಶ್ರೀ ತನ್ವೀರ್ ಸೇಠ್‌ರವರು ಕುಸ್ತಿಯು ಗ್ರಾಮೀಣ ಕ್ರೀಡೆಯಾಗಿದೆ, ಇಲ್ಲಿ ಗುರುಶಿಷ್ಯರ ನಡುವೆ ಉತ್ತಮ ಬಾಂಧವ್ಯ ಮತ್ತು ಗೌರವ ಇರುತ್ತದೆ. ಯಾವುದೇ ಜಾತಿಭೇದಗಳಿರುವುದಿಲ್ಲ. ಇಂದು ನಮ್ಮ ಯುವಕರು ಈ ಕುಸ್ತಿಯ ಮೌಲ್ಯವನ್ನರಿಯದೆ ಜಿಮ್ ಕೇಂದ್ರಗಳಿಗೆ ಆಕರ್ಷಿತರಾಗುತ್ತಿದ್ದಾರೆ ಎಂದರು.

ಕುಸ್ತಿಪಂದ್ಯದಲ್ಲಿ 50 ಜೋಡಿಗಳು ಭಾಗವಹಿಸಿದ್ದವು. ಮೈಸೂರಿನ ಪೈ. ಭರತ್ ಮೇಲುಗೈ ಸಾಧಿಸಿ ಸುತ್ತೂರು ಕುಮಾರ ಎಂಬ ಗೌರವಕ್ಕೆ ಪಾತ್ರರಾದರು.

**ಸಾಂಸ್ಕೃತಿಕ ಮೇಳ ಹಾಗೂ ದನಗಳ ಜಾತ್ರೆ ಸಮಾರೋಪ**

ದಿನಾಂಕ 5.2.2019 ರಂದು ಸಾಂಸ್ಕೃತಿಕ ಮೇಳ ಹಾಗೂ ದನಗಳ ಜಾತ್ರೆ ಸಮಾರೋಪದಲ್ಲಿ ಮಾಜಿ ಸಚಿವರು ಹಾಗೂ ವಿಧಾನಸಭಾ ಸದಸ್ಯರಾದ ಶ್ರೀ ವಿ. ಸೋಮಣ್ಣನವರು ಭಾರತೀಯ ಕಲೆ ಸಂಸ್ಕೃತಿಗಳನ್ನು ಉಳಿಸಿ ಬೆಳೆಸುವಲ್ಲಿ ಸುತ್ತೂರು ಶ್ರೀಮಠವು ಪ್ರಮುಖ ಪಾತ್ರ ವಹಿಸುತ್ತಿದೆ ಎಂದು ತಿಳಿಸಿದರು.

ಇಂದು ನಮ್ಮಲ್ಲಿ ದನಗಳ ಸಾಕಾಣಿಕೆ ಕುರಿತಂತೆ ನಿರ್ಲಕ್ಷ್ಯ ಎದ್ದುಕಾಣುತ್ತಿದೆ. ಇದರಿಂದಾಗಿ ಹೈನುಗಾರಿಕೆ ಮತ್ತು ಕೃಷಿಗೂ ಹಿನ್ನಡೆಯಾಗುತ್ತಿದೆ. ಗೋ ಸಂರಕ್ಷಣೆಯಿಂದ ಕೃಷಿ ಬೆಳೆಯುತ್ತದೆ ಎಂದು ಅಫ್ಜಲ್‌ಪುರ ಶಾಸಕರಾದ ಶ್ರೀ ಎಂ.ವೈ. ಪಾಟೀಲ್ ತಿಳಿಸಿದರು.

ಇದೇ ಸಂದರ್ಭದಲ್ಲಿ ಉತ್ತಮ ರಾಸುಗಳಿಗೆ ಬಹುಮಾನ ನೀಡಲಾಯಿತು. ಹಾಗೆಯೇ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳಿಗೆ ಮತ್ತು ತಂಡಗಳಿಗೆ ಪುರಸ್ಕಾರಗಳನ್ನು ನೀಡಿ ಗೌರವಿಸಲಾಯಿತು.

**ಕೃಷಿ ಮೇಳ ಮತ್ತು ವಸ್ತುಪ್ರದರ್ಶನ ಸಮಾರೋಪ**

ದಿನಾಂಕ 6.2.2019 ರಂದು ಕೃಷಿ ಮೇಳ ಮತ್ತು ವಸ್ತುಪ್ರದರ್ಶನ ಸಮಾರೋಪದಲ್ಲಿ ಬೆಂಗಳೂರಿನ ಪ್ರಾದೇಶಿಕ ಜನಸಂಪರ್ಕ ಇಲಾಖೆ ಹೆಚ್ಚುವರಿ ಮಹಾನಿರ್ದೇಶಕ ಶ್ರೀ ಎಂ. ನಾಗೇಂದ್ರಸ್ವಾಮಿಯವರು ಸುತ್ತೂರು ಜಾತ್ರೆಯು ಸಾರ್ವಜನಿಕರಿಗೆ ಉಪಯುಕ್ತವಾಗುವ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಿದೆ. ಜೊತೆಗೆ ಜಾತ್ರೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಯೋಜನೆಗಳನ್ನು ಜನರಿಗೆ ಪರಿಚಯಿಸುವ ಕೆಲಸವನ್ನು ಮಾಡಿಕೊಂಡು ಬರಲಾಗುತ್ತಿದೆ, ಮುಂದಿನ ಬಾರಿಯ ವಸ್ತುಪ್ರದರ್ಶನದಲ್ಲಿ ಇಸ್ರೋ ಸಂಸ್ಥೆಯೂ ಸಹ ಭಾಗವಹಿಸಲಿದೆ ಎಂದು ತಿಳಿಸಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠವು ಇಂಧನ ಉಳಿತಾಯ, ಆಹಾರ ವ್ಯರ್ಥ ಮಾಡುವುದನ್ನು ತಡೆಗಟ್ಟುವುದು, ಪ್ಲಾಸ್ಟಿಕ್ ನಿಷೇಧ ಮೊದಲಾದ ಪಂಚಸೂತ್ರ ಕಾರ್ಯಕ್ರಮಗಳನ್ನು ಕೈಗೊಳ್ಳುವುದರ ಮೂಲಕ ಜನತೆಗೆ ಮಾದರಿಯಾಗಿದೆ ಎಂದು ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರುಮಠರವರು ತಿಳಿಸಿದರು.

ಜನರಲ್ಲಿ ಆರೋಗ್ಯದ ಬಗ್ಗೆ ಅರಿವಿರಬೇಕು. ರಾಜ್ಯ ಹಾಗೂ ಕೇಂದ್ರ ಸರಕಾರಗಳು ಈ ಕುರಿತಂತೆ ಹಲವಾರು ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿದ್ದರೂ ಅವು ಜನತೆಗೆ ತಲುಪುತ್ತಿಲ್ಲ. ಜಾತ್ರೆಯಂತಹ ಕಾರ್ಯಕ್ರಮದ ಮೂಲಕ ಅವುಗಳನ್ನು ಜನರಿಗೆ ತಲುಪಿಸುತ್ತಿರುವ ಶ್ರೀಮಠದ ಯೋಜನೆ ಪ್ರಶಂಸನೀಯ ಎಂದು ಡಾ. ಹೆಚ್.ಎನ್. ರವೀಂದ್ರ ಅಭಿಪ್ರಾಯ ವ್ಯಕ್ತಪಡಿಸಿದರು.

ಕೃಷಿಕರನ್ನು ಪ್ರೋತ್ಸಾಹಿಸಲು ಕೃಷಿ ಮೇಳ, ಮಕ್ಕಳನ್ನು ಪ್ರೋತ್ಸಾಹಿಸಲು ವಸ್ತುಪ್ರದರ್ಶನ ಸೇರಿದಂತೆ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಶ್ರೀಕ್ಷೇತ್ರದಲ್ಲಿ ಆಯೋಜಿಸಿದೆ. ಅನೇಕ ಮಾಹಿತಿಗಳನ್ನು ತಿಳಿಸಿರುವ ಇಲ್ಲಿನ ಕಾರ್ಯಕ್ರಮಗಳು ಆಕರ್ಷಣೀಯವಾಗಿವೆ. ಅದಕ್ಕಾಗಿ ಪೂಜ್ಯಶ್ರೀಗಳಿಗೆ ಅಭಿನಂದನೆಗಳನ್ನು ಸಲ್ಲಿಸುವುದಾಗಿ ಗದಗ ಡಂಬಳ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದ ಜಗದ್ಗುರು ಡಾ. ಶ್ರೀ ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ತಮ್ಮ ಸಂದೇಶದಲ್ಲಿ ತಿಳಿಸಿದರು.

ಆಲಸ್ಯವನ್ನು ಬಿಟ್ಟು ನಮ್ಮ ಜೀವನದ ಮೌಲ್ಯಗಳ ಹಾಗೂ ಬೆಳವಣಿಗೆಗಳ ಕಡೆಗೆ ಗಮನ ಹರಿಸಬೇಕಿದೆ. ಜೀವನದಲ್ಲಿ ಉನ್ನತವಾದುದನ್ನು ಸಾಧಿಸಬೇಕೆನ್ನುವುದು ಪ್ರಮುಖ ಧ್ಯೇಯವಾಗಬೇಕಿದೆ ಎಂದು ಮೈಸೂರಿನ ಶ್ರೀ ರಾಮಕೃಷ್ಣ ಮಠದ ಅಧ್ಯಕ್ಷರಾದ ಶ್ರೀ ಸ್ವಾಮಿ ಆತ್ಮಜ್ಞಾನಾನಂದ ಮಹಾರಾಜ್‌ರವರು ತಮ್ಮ ಶುಭ ಸಂದೇಶದಲ್ಲಿ ತಿಳಿಸಿದರು.

ಇದೇ ಸಂದರ್ಭದಲ್ಲಿ ವಸ್ತುಪ್ರದರ್ಶನ ವಿಭಾಗ ಮತ್ತು ಕೃಷಿಮೇಳದಲ್ಲಿ ಭಾಗವಹಿಸಿದ್ದ ಉತ್ತಮ ಪ್ರದರ್ಶಕರು ಮತ್ತು ಸಂಸ್ಥೆಗಳಿಗೆ ಪುರಸ್ಕಾರಗಳನ್ನು ನೀಡಿ ಗೌರವಿಸಲಾಯಿತು.

* * *

ಶ್ರೀ ವೀರಭದ್ರೇಶ್ವರ ದೇಗುಲದಲ್ಲಿ ಕೊಂಡೋತ್ಸವ ಹಾಗೂ ರಾತ್ರಿ ಕಪಿಲಾ ನದಿಯಲ್ಲಿ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರರ ಭವ್ಯ ಮೂರ್ತಿಯ ತೆಪ್ಪೋತ್ಸವ ಕಾರ್ಯಕ್ರಮ ಅನಂತರದ ಬಾಣಬಿರುಸುಗಳ ಪ್ರದರ್ಶನವು ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ನೆರವೇರಿತು.

ಜಾತ್ರಾ ನಿಮಿತ್ತವಾಗಿ ಶ್ರೀಮಠದ ಕರ್ತೃಗದ್ದುಗೆಗೆ ವಿಶೇಷ ಪೂಜೆ, ಅಲಂಕಾರ, ಧರ್ಮಸಂದೇಶ, ಮಹಾಮಂಗಳಾರತಿಯಂತಹ ಕಾರ್ಯಕ್ರಮಗಳು ನಿರಂತರವಾಗಿ ನಡೆದವು.

ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ನಾದಸ್ವರ, ಸುಗಮ ಸಂಗೀತ, ನಾಟಕಗಳು, ವಿವಿಧ ನೃತ್ಯದಂತಹ ಆಕರ್ಷಕ ಕಾರ್ಯಕ್ರಮಗಳು ನಾಡಿನ ವಿವಿಧ ತಂಡಗಳ ಮೂಲಕ ಪ್ರದರ್ಶನಗೊಂಡವು.

□

ಹಡೆದೊಡವೆ ವಸ್ತುವನು ಮೃಢಭಕ್ತರಿಗಲ್ಲದೆ
ಕಡಬಡ್ಡಿಯ ಕೊಡಲಾಗದು.
ಬಂದಡೊಂದು ಲೇಸು, ಬಾರದಿದ್ದಡೆರಡು ಲೇಸು.
ಅಲ್ಲಿದ್ದಡೆಯೂ ಲಿಂಗಕ್ಕೆ ಬೋನ, ಇಲ್ಲಿದ್ದಡೆಯೂ ಲಿಂಗಕ್ಕೆ ಬೋನ.
ಲಿಂಗದೊಡವೆ ಲಿಂಗಕ್ಕೆ ಸಾರಿತ್ತಾಗಿ
ಬಂದಿತ್ತೆಂಬ ಪರಿಣಾಮವಿಲ್ಲ, ಬಾರದೆಂಬ ದುಃಖವಿಲ್ಲ.
ಇದು ಕಾರಣ ಕೂಡಲಸಂಗಮದೇವಾ,
ನಿಮ್ಮ ಶರಣರಿಗಲ್ಲದೆ ಕಡಬಡ್ಡಿಯ ಕೊಡಲಾಗದು.

**ಬಸವಣ್ಣ**

# ಪ್ರಸಾದ



## ಕೃತಿ-ಸ್ವೀಕೃತಿ

**ಬಾವಿಗೆ ಬಿದ್ದಾಗ**
ಕಂಭಂ ಕೃಷ್ಣಮೂರ್ತಿ
ಪ್ರಕಾಶನ: ಪೂರ್ಣಿಮಾ ಸಾಹಿತ್ಯಮಂದಿರ
ಎಸ್.ಐ.ಟಿ ಬಡಾವಣೆ, ತುಮಕೂರು
ಪು. 104, ಬೆಲೆ : 100/-

**ಅಪರಾಧ ತನಿಖೆ ಮತ್ತು ಪತ್ತೆ**
ಕಂಭಂ ಕೃಷ್ಣಮೂರ್ತಿ
ಪ್ರಕಾಶನ: ಪೂರ್ಣಿಮಾ ಸಾಹಿತ್ಯ ಮಂದಿರ
ಎಸ್.ಐ.ಟಿ ಬಡಾವಣೆ, ತುಮಕೂರು
ಪು. 112, ಬೆಲೆ : 100/-

**ಕಪನೀಪತಿರಾಯರೂ, ಕಬ್ಬನ್ ಪಾರ್ಕೂ**
**(ನಗೆ ಬರಹಗಳ ಸಂಕಲನ)**
ಕಂಭಂ ಕೃಷ್ಣಮೂರ್ತಿ
ಪ್ರಕಾಶನ: ಪೂರ್ಣಿಮಾ ಸಾಹಿತ್ಯ ಮಂದಿರ
ಎಸ್.ಐ.ಟಿ ಬಡಾವಣೆ, ತುಮಕೂರು
ಪು. 112, ಬೆಲೆ : 75/-

**ಗವಿ ಶ್ರೀ ಶಾಂತಾವಧೂತರ ದಿವ್ಯ ಚರಿತಾಮೃತ**
ನಾ.ರ. ಸುತ ಪುಟ್ಟಪ್ಪ ಬೆಳಗೆರೆ
ಪ್ರಕಾಶನ: R. Kamalamma, Maapitha Publication, Sri Shantha Ramatirtha Chudaamaata Krupa, Iyyanna Pete Chitradurga
ಪು. 190, ಬೆಲೆ : 100/-

**ನಕ್ಕು ಪ್ರಸನ್ನರಾಗಿ**
ಕಾರ್ಟೂನ್ ಪ್ರಸನ್ನ
ಪ್ರಕಾಶನ: ಪೂರ್ಣಿಮಾ ಸಾಹಿತ್ಯ ಮಂದಿರ
ಎಸ್ಐಟಿ ಬಡಾವಣೆ, ತುಮಕೂರು
ಪು. 106, ಬೆಲೆ : 35/-

**ಕತ್ತೆಗೊಂದು ಕಾಲ**
ಕುಂ. ವೀರಭದ್ರಪ್ಪ
ಪ್ರಕಾಶನ: ಸಪ್ನ ಬುಕ್ ಹೌಸ್ ಪ್ರೈ. ಲಿ.,
ಗಾಂಧಿನಗರ, ಬೆಂಗಳೂರು
ಪು. 340, ಬೆಲೆ : 300/-

**ಉಮಾಸಹಸ್ರಮ್**
ಡಾ. ಎಂ.ಇ. ರಂಗಾಚಾರ್
ಪ್ರಕಾಶನ: ಶ್ರೀ ನಿತ್ಯಾನಂದ ಪ್ರಿಂಟರ್ಸ್
ಬನಶಂಕರಿ 1ನೇ ಹಂತ, ಬೆಂಗಳೂರು
ಪು. 528, ಬೆಲೆ : 450/-

**ಎಂಭತ್ತರ ಏರಿನಲ್ಲಿ**
**(ಕವನ ಸಂಕಲನ)**
ಡಾ. ಗುರುಮೂರ್ತಿ ಪೆಂಡಕೂರು
ಪ್ರಕಾಶನ: ಸ್ವಾರ್ಥ ಪ್ರಕಾಶನ
ಆರ್.ಟಿ. ನಗರ, ಬೆಂಗಳೂರು
ಪು. 184, ಬೆಲೆ : 150/-

**ವಚನ ಪ್ರಭೆ**
**(ಭಾಗ - 7)**
ಶ್ರೀ ಬಸವ ನವಲಿಂಗ
ಪ್ರಕಾಶನ: ಶರಣ ಪ್ರಕಾಶನ
ಶ್ರೀ ಪ್ರಭುದೇವ ಜ್ಞಾನ ಕೇಂದ್ರ
ಸಂತೆ ಕಡೂರು, ಶಿವಮೊಗ್ಗ
ಪು. 152

**ವಚನ ತಾಂಬೂಲ**
ಶ್ರೀ ಜರಗನಹಳ್ಳಿ ಶಿವಶಂಕರ್
ಶ್ರೀ ಗಂಗಾಧರ ಪಂಡಿತ್
ಪ್ರಕಾಶನ: ಬೆಂಗಳೂರು
ಪು. 48

**ಆಧ್ಯಾತ್ಮಿಕ ಅಭೀಪ್ಸೆಯೆಡೆಗೆ**
ಅನು: ಕುಮಾರಭೂಷಣ (ಸತೀಶ ಸವದಿ)
ಪ್ರಕಾಶನ: ಮಹಾತಪಸ್ವಿ
ಶ್ರೀ ಕುಮಾರಸ್ವಾಮಿ ಫೌಂಡೇಶನ್
ತಪೋವನ, ಧಾರವಾಡ
ಪು. 52, ಬೆಲೆ : 40/-



ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1059ನೆಯ ಜಯಂತಿ ಮಹೋತ್ಸವದಲ್ಲಿ ಸನ್ಮಾನಿತರಾದ ಡಾ. ಗೊ.ರು. ಚನ್ನಬಸಪ್ಪ. ಚಿತ್ರದಲ್ಲಿ ಡಾ. ವಿ.ಬಿ. ಆರತಿ, ಶ್ರೀಮತಿ ಆರತಿ ಎ.ಎಂ. ಪ್ರಕಾಶ್, ಶ್ರೀ ಎಸ್. ರುದ್ರೇಗೌಡ, ಪರಮಪೂಜ್ಯ ಜಗದ್ಗುರುಗಳು, ಶ್ರೀ ವಚನಾನಂದ ಸ್ವಾಮಿಗಳು, ಜಡೆ ಶ್ರೀ ಸಂಸ್ಥಾನ ಮಠದ ಶ್ರೀಗಳು, ಶ್ರೀ ಮಾಡಾಳ್ ವಿರೂಪಾಕ್ಷಪ್ಪ (5.1.2019)




ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1059ನೆಯ ಜಯಂತಿ ಮಹೋತ್ಸವದಲ್ಲಿ ನಡೆದ ಅನುಭಾವಗೋಷ್ಠಿ - 1 ರಲ್ಲಿ ಪಾಲ್ಗೊಂಡವರು. ಚಿತ್ರದಲ್ಲಿ ಡಾ. ವೀಣಾ ಭಟ್, ಶ್ರೀ ವಿ. ಸಂತೋಷಕುಮಾರ್, ಆನಂದಪುರಂ ಶ್ರೀಗಳು, ಜಗದ್ಗುರುಗಳು, ಡಾ. ಎ.ಜೆ. ಗೋಪಾಲಕೃಷ್ಣ ಕೊಳತ್ತಾಯ, ಪ್ರೊ. ಕಿರಣ್ ದೇಸಾಯಿ, ಶ್ರೀಮತಿ ಸಿ. ಮಂಜುಳಾ (5.1.2019)



ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ರಾಜ್ಯಮಟ್ಟದ ಭಜನಾಮೇಳವನ್ನು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ, ಚಿಕ್ಕೋಡಿ ಶ್ರೀ ಸಂಪಾದನ ಚರಮೂರ್ತಿ ಮಠದ ಶ್ರೀಗಳು, ಮಲ್ಲನಮೂಲೆ ಶ್ರೀಗಳು, ಕಲಾವಿದರಾದ ಶ್ರೀ ದರ್ಶನ್, ಪರಮಪೂಜ್ಯ ಜಗದ್ಗುರುಗಳು, ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ, ಡಾ. ಎಚ್.ಸಿ. ಮಹದೇವಪ್ಪ, ಶ್ರೀ ಸಂದೇಶ್ ನಾಗರಾಜ್, ಡಾ. ಪುಷ್ಪ ಅಮರ್‌ನಾಥ್ ಮತ್ತಿತರರು (2.2.2019)




ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಚಿತ್ರಕಲೆ ಹಾಗೂ ಗಾಳಿಪಟ ಸ್ಪರ್ಧೆ, ಐವತ್ತೊಂದನೆಯ ದನಗಳ ಜಾತ್ರೆಯನ್ನು ಕೇಂದ್ರ ಸಚಿವರಾದ ಶ್ರೀ ಅಶ್ವಿನ್‌ಕುಮಾರ್ ಚೌಬೆಯವರು ಉದ್ಘಾಟಿಸಿ ಮಾತನಾಡಿದರು. ಚಿತ್ರದಲ್ಲಿ ಶ್ರೀ ಆರ್. ಗಣೇಶ್, ಶ್ರೀ ಎಂ. ಶಿವಣ್ಣ, ವಾಟಾಳು ಶ್ರೀಗಳು, ಕೋಡಿಮಠದ ಶ್ರೀಗಳು, ಮರಳೇಗವಿ ಮಠದ ಶ್ರೀಗಳು, ಶ್ರೀ ಎಸ್.ಎ. ರಾಮದಾಸ್, ಶ್ರೀ ರವೀಶ್‌ಗೌಡರವರು (3.2.2019)



ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಉದ್ಘಾಟಿಸಿದ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿ ದಂಪತಿಗಳನ್ನು ಪರಮಪೂಜ್ಯ ಜಗದ್ಗುರುಗಳು ಆಶೀರ್ವದಿಸಿದರು (2.2.2019)




ಸುತ್ತೂರು ಜಾತ್ರಾ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ರಾಜ್ಯಮಟ್ಟದ ಭಜನಾ ಮೇಳವನ್ನು ಮಾಜಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರು ಉದ್ಘಾಟಿಸಿ ಮಾತನಾಡಿದರು (2.2.2019)



ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಕೇಂದ್ರ ರಾಜ್ಯ ಸಚಿವರಾದ ಶ್ರೀ ಅನಂತಕುಮಾರ್ ಹೆಗ್ಡೆಯವರು ಧರ್ಮಸಭೆಯನ್ನು ಉದ್ಘಾಟಿಸುತ್ತಿರುವುದು. ಮುಲ್ಕಿ ಕೇಂದ್ರೀಯ ಜುಮಾ ಮಸೀದಿಯ ಶ್ರೀ ಎಸ್.ಬಿ. ಮಹಮ್ಮದ್ ದಾರಿಮಿ, ಮೈಸೂರು ಕ್ಯಾಥೊಲಿಕ್ ಧರ್ಮಪ್ರಾಂತ್ಯದ ರೆ. ಲೆಸ್ಲಿ ಮೊರಾಸ್, ಸಾಲೂರು ಮಠದ ಶ್ರೀಗಳು, ಕುಂದೂರು ಮಠದ ಶ್ರೀಗಳು, ಶ್ರೀ ಲಕ್ಷ್ಮಿಸೇನ ದಿಗಂಬರ ಜೈನ ಮುನಿಗಳು, ಸಿದ್ಧಗಂಗೆಯ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಮತ್ತು ಪರಮಪೂಜ್ಯ ಜಗದ್ಗುರುಗಳು (3.2.2019)




ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಚಲನಚಿತ್ರ ಕಲಾವಿದರಾದ ಶ್ರೀ ದರ್ಶನ್ ತೂಗುದೀಪರವರು ಮಾತನಾಡುತ್ತಿರುವುದು. ಚಿತ್ರದಲ್ಲಿ ಶ್ರೀ ಪಿ.ಜಿ.ಆರ್. ಸಿಂಧ್ಯ, ಶ್ರೀ ಯು.ಟಿ. ಖಾದರ್, ಕೋಡಿಮಠದ ಶ್ರೀಗಳು, ಶ್ರೀ ಸಂಪಾದನಾಸ್ವಾಮಿಗಳು, ಶ್ರೀ ಚನ್ನಬಸವಸ್ವಾಮಿಗಳು, ಶ್ರೀ ಸಿದ್ದರಾಮಯ್ಯನವರು, ಪರಮಪೂಜ್ಯ ಜಗದ್ಗುರುಗಳು, ಶ್ರೀ ಹೆಚ್.ಸಿ. ಮಹದೇವಪ್ಪನವರು (2.2.2019)